Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣುಕು

## 01-01-2021



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ರ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

## ನಿರ್ಣಯ ರದ್ದುಪಡಿಸುವಂತೆ ಬಿಬಿಎಂಪಿ ಆಯುಕ್ತರ ಪತ್ರ

# 11 ರಸ್ತೆಗಳಿಗೆ ಮುಸ್ಲಿಂ ಮುಖಂಡರ ಹೆಸರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಾದರಾಯನಪುರದ ವಾರ್ಡ್ ಸಂಖ್ಯೆ 135ರ ವ್ಯಾಪ್ತಿಯಲ್ಲಿನ ಪ್ರಮುಖ ರಸ್ತೆಗಳಿಗೆ ಮುಸ್ಲಿಂ ಮುಖಂಡರ ಹೆಸರುಗಳನ್ನು ಮಾತ್ರ ನಾಮಕರಣ ಮಾಡಲು ಮುಂದಾಗಿರುವ ಬಿಬಿಎಂಪಿ ನಿರ್ಧಾರಕ್ಕೆ ಬಿಜೆಪಿ ಮುಖಂಡರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ನಡುವೆ, ಈ ನಿರ್ಣಯವನ್ನು ರದ್ದುಗೊಳಿಸಬೇಕು ಎಂದು ಬಿಬಿಎಂಪಿ ಆಯುಕ್ತರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಪಾದರಾಯನಪುರದ 11 ರಸ್ತೆಗಳಿಗೆ ಸಮಾಜ ಸೇವಕರ ಹೆಸರು ಇಡುವ ಬಗ್ಗೆ ಬಿಬಿಎಂಪಿಯ ಸೆ.8ರ ಸಾಮಾನ್ಯ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಅದರಂತೆ ಬಿಬಿಎಂಪಿಯು ಡಿ.16ರಂದು ಪತ್ರಿಕಾ ಪ್ರಕಟಣೆ ಹೊರಡಿಸಿದೆ. ಆದರೆ, ಈ ಪ್ರದೇಶದ ಎಲ್ಲ ರಸ್ತೆಗಳಿಗೆ ಮುಸ್ಲಿಂ ಮುಖಂಡರ ಹೆಸರು ಮಾತ್ರ ಇಟ್ಟಿರುವುದು ಸರಿಯಲ್ಲ ಎಂದು ಸಂಸದರಾದ ಅನಂತಕುಮಾರ್ ಹೆಗಡೆ, ತೇಜಸ್ವಿ ಸೂರ್ಯ ಸೇರಿದಂತೆ ಬಿಜೆಪಿಯ ಅನೇಕರ ನಾಯಕರು ಹೇಳಿದ್ದಾರೆ.

‘ಮುಸ್ಲಿಂ ಬಾಹುಳ್ಯವಿರುವ ಪ್ರದೇಶಗಳಿಗೆ ಮುಸಲ್ಮಾನರ ಹೆಸರುಗಳನ್ನೇ ಶಿಫಾರಸ್ಸು ಮಾಡಿರುವ ಬಿಬಿಎಂಪಿಯ ನಿರ್ಧಾರವು ಭಾರತ, ಪಾಕಿಸ್ತಾನ ವಿಭಜನೆಗೆ ಮೂಲವಾಗಿದ್ದ ದ್ವಿರಾಷ್ಟ್ರ ಸಿದ್ಧಾಂತದ ಪಳಿಯುಳಿಕೆಯಂತಿದೆ. ಈ ಪ್ರಸ್ತಾವಕ್ಕೆ ನನ್ನ ಸಂಪೂರ್ಣ ವಿರೋಧ ಮತ್ತು ಆಕ್ಷೇಪವಿದೆ. ಪಾಲಿಕೆಯು ಕೂಡಲೇ ಈ ನಿರ್ಧಾರದಿಂದ ಹಿಂದೆ ಸರಿದು, ಕೇವಲ ಮುಸ್ಲಿಂ ಹೆಸರುಗಳ ನಾಮಕರಣ ಪ್ರಕ್ರಿಯೆಯನ್ನು ಹಿಂಪಡೆಯಬೇಕು’ ಎಂದು ತೇಜಸ್ವಿ ಸೂರ್ಯ ಆಗ್ರಹಿಸಿದ್ದಾರೆ.

**ಪಾದರಾಯನಪುರದ 11 ರಸ್ತೆಗಳಿಗೆ ಮುಸ್ಲಿಂ ಮುಖಂಡರ ಹೆಸರು**

| ರಸ್ತೆ | ಉದ್ದೇಶಿತ ಹೆಸರು |
|---|---|
| ಎಚ್.ಎಂ.ರಸ್ತೆ | ಪೈಲ್ವಾನ್ ಫಾರೂಕ್ ಪಾಷಾ ಸಾಬ್ ವೃತ್ತ |
| 10ನೇ ಅಡ್ಡರಸ್ತೆ | ಪೈಲ್ವಾನ್ ಫಾರೂಕ್ ಪಾಷಾ ಸಾಬ್ ರಸ್ತೆ |
| 7ನೇ ಅಡ್ಡರಸ್ತೆ | ಟೋಪಿ ರಫೀಕ್ ಸಾಬ್ ರಸ್ತೆ |
| 7ನೇ ಮುಖ್ಯರಸ್ತೆ | ರೋಷನ್ ಫಯಾಜ್ ಸಂಗಮ ವೃತ್ತ |
| 8ನೇ ಮುಖ್ಯರಸ್ತೆ | ಹಾಜಿ ಹಬೀಬ್ ಬೇಗ್ ರಸ್ತೆ |
| 9ನೇ ಅಡ್ಡರಸ್ತೆ | ಅಲೀಲ್ ಪಟೇಲ್ ರಸ್ತೆ |
| 10ನೇ ಮುಖ್ಯರಸ್ತೆ | ಹಾಜಿ ನೂರ್‌ಸಾಬ್ ರಸ್ತೆ |
| 11ನೇ ಸಿ ಅಡ್ಡರಸ್ತೆ | ಹಾಜಿ ವಝೀರ್ ಸಾಬ್ ರಸ್ತೆ |
| ರೆಹ್ಮಾನಿಯಾ ಮಸೀದಿ ರಸ್ತೆ | ಹಾಜಿ ಶಾಮಿರ್ ಸಾಬ್ ರಸ್ತೆ |
| 13ನೇ ಸಿ ಅಡ್ಡರಸ್ತೆ | ಹಾಜಿ ದಸ್ತಗೀರ್ ರಸ್ತೆ |
| 7ನೇ ಅಡ್ಡರಸ್ತೆ, ವಿನಾಯಕನಗರ | ಎಲ್ದಿರ್ ಬಾಬು ಸಾಬ್ ರಸ್ತೆ |

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

## ಬ್ರಿಟನ್ ವಲಸಿಗರು: ಮತ್ತೆ ಇಬ್ಬರಿಗೆ ಕೋವಿಡ್ ಪತ್ತೆ

# ಸೋಂಕಿತರ ಸಂಖ್ಯೆ 33ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬ್ರಿಟನ್‌ನಿಂದ ರಾಜ್ಯಕ್ಕೆ ಬಂದವರ ಪೈಕಿ ಮತ್ತೆ ಇಬ್ಬರು ಕೋವಿಡ್ ಪೀಡಿತರಾಗಿದ್ದು, ಅಲ್ಲಿಂದ ಮರಳಿದ-ವರಲ್ಲಿ ಈವರೆಗೆ ಸೋಂಕಿತರಾದವರ ಸಂಖ್ಯೆ 33 ಕ್ಕೆ ಏರಿಕೆಯಾಗಿದೆ. ನೂರಕ್ಕೂ ಅಧಿಕ ಮಂದಿ ಪರೀಕ್ಷಾ ವರದಿಗಾಗಿ ಎದುರು ನೋಡುತ್ತಿದ್ದಾರೆ.

ಬ್ರಿಟನ್‌ನಿಂದ ಇಲ್ಲಿಗೆ ಬಂದವರಲ್ಲಿ 63 ಮಂದಿಗೆ ಆರ್‌ಟಿ–ಪಿಸಿಆರ್ ಪರೀಕ್ಷೆಯನ್ನು ಗುರುವಾರ ನಡೆಸಲಾಗಿದೆ. ಅದ ರಲ್ಲಿ ಇಬ್ಬರ ವರದಿ ಮಾತ್ರ ಬಂದಿದ್ದು, ಇನ್ನೂ 60 ಮಂದಿಯ ಪರೀಕ್ಷಾ ವರದಿ ಬಂದಿಲ್ಲ. ಅಲ್ಲಿಂದ ಬಂದವರಲ್ಲಿ ಈವರೆಗೆ ಒಟ್ಟು 2,028 ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದಾರೆ. ಅವರಲ್ಲಿ 1,887 ಮಂದಿಗೆ ಸೋಂಕು ತಗುಲಿಲ್ಲ ಎನ್ನುವುದು ಪರೀಕ್ಷಾ ವರದಿಯಿಂದ ದೃಢಪಟ್ಟಿದೆ. ಇನ್ನೂ 108 ಮಂದಿಯ ವರದಿ ಬರಬೇಕಿದೆ.

ವಿವಿಧ ದೇಶಗಳಿಂದ ಬಂದ 797 ಮಂದಿಯನ್ನು ವಿಮಾನ ನಿಲ್ದಾಣದಲ್ಲಿ ಪರೀಕ್ಷೆಗೆ ಒಳಪಡಿಸಲಾಗಿದೆ. ಈವರೆಗೆ ವಿಮಾನ ನಿಲ್ದಾಣಗಳಲ್ಲಿ 2.69 ಲಕ್ಷ ಮಂದಿ ತಪಾಸಣೆಗೆ ಒಳಪಟ್ಟಿದ್ದಾರೆ. ರಾಜ್ಯದಲ್ಲಿ ಹೊಸದಾಗಿ 952 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.19 ಲಕ್ಷ ದಾಟಿದೆ. ಈ ತಿಂಗಳು 34,599 ಮಂದಿ ಸೋಂ-ಕಿತರಾಗಿರುವುದು ದೃಢಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 1,116 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿತರಲ್ಲಿ 9 ಮಂದಿ ಮೃತಪಟ್ಟಿ-ದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,090ಕ್ಕೆ ತಲುಪಿದೆ.

ಒಂದೇ ದಿನ 1.6 ಲಕ್ಷ ಆರ್‌ಟಿ–ಪಿಸಿಆರ್ ಸೇರಿದಂತೆ 1.15 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಈವರೆಗೆ 1.40 ಕೋಟಿ ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿ-ದ್ದಾರೆ. ಕೋವಿಡ್ ಪೀಡಿತರಲ್ಲಿ 1,282 ಮಂದಿಗೆ ಕಾಯಿಲೆ ವಾಸಿಯಾಗಿದ್ದು, ಇದರಿಂದಾಗಿ ಚೇತರಿಸಿಕೊಂಡವರ ಸಂಖ್ಯೆ 8.96 ಲಕ್ಷಕ್ಕೆ ತಲುಪಿದೆ.

**194 ಮಂದಿ ಐಸಿಯುನಲ್ಲಿ:** ಸೋಂಕಿತರಲ್ಲಿ ಸದ್ಯ 11,271 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 194 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ. ಕಳೆದ 14 ದಿನಗಳ ಅವಧಿಯಲ್ಲಿ 68 ಸಾವಿರ ನೇರ ಸಂಪರ್ಕಿತರು ಹಾಗೂ 78 ಸಾವಿರ ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಲಾಗಿದೆ.

ಬೆಂಗಳೂರಿನಲ್ಲಿ ಮತ್ತೆ 554 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 3.88 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 48 ಪ್ರಕರಣಗಳು ವರದಿಯಾಗಿದೆ. ಅಲ್ಲಿ ಸೋಂಕಿತರ ಸಂಖ್ಯೆ 52,394ಕ್ಕೆ ತಲುಪಿದೆ. ದಕ್ಷಿಣ ಕನ್ನಡದಲ್ಲಿ 35, ತುಮಕೂರಿನಲ್ಲಿ 28, ಬೆಂಗಳೂರು ಗ್ರಾಮಾಂತರದಲ್ಲಿ 24, ಬೆಳಗಾವಿಯಲ್ಲಿ 23 ಪ್ರಕರಣಗಳು ವರದಿಯಾಗಿವೆ. ರಾಜ್ಯದ 27 ಜಿಲ್ಲೆಯಲ್ಲಿ ಹೊಸದಾಗಿ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಕಾಣದ 'ಮದ್ಯ' ರಾತ್ರಿ ಸಂಭ್ರಮ • ಎಂಟು ಗಂಟೆಯ ವೇಳೆಗೇ ರಸ್ತೆಗಳು ಖಾಲಿ–ಖಾಲಿ • ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆಗಳಲ್ಲಿ ಕಾಣದ ಸಡಗರ

# ನಿರ್ಬಂಧಗಳ ನಡುವೆಯೇ ನೂತನ ವರ್ಷಾಚರಣೆ!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಾರ್ಚ್‌ನಿಂದ ವರ್ಷಪೂರ್ತಿ ನಿರ್ಬಂಧಗಳ ನಡುವೆಯೇ ದಿನ ದೂಡಿದ ಸಾರ್ವಜನಿಕರು, ಹೊಸ ವರ್ಷವನ್ನೂ ನಿರ್ಬಂಧಗಳ ನಡುವೆಯೇ ಸ್ವಾಗತಿಸಿದರು. ಡಿ.31ರ ಮಧ್ಯರಾತ್ರಿಯವರೆಗೆ ಜನರಿಂದ ತುಂಬಿರುತ್ತಿದ್ದ, ಮೇರೆ ಮೀರಿದ ಸಂಭ್ರಮಕ್ಕೆ ಸಾಕ್ಷಿಯಾಗುತ್ತಿದ್ದ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆಯಂತಹ ತಾಣಗಳು ಗುರುವಾರ ರಾತ್ರಿ 8 ಗಂಟೆಯಷ್ಟೊತ್ತಿಗೇ ಬಣಗುಡುತ್ತಿದ್ದವು. ಈ ಸ್ಥಳಗಳು ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿದ್ದರೂ, ಸಂಭ್ರಮಿಸಬೇಕಾದವರ ಸಂಖ್ಯೆ ಬೆರಳೆಣಿಕೆಯಷ್ಟಿತ್ತು.

ಪಬ್, ರೆಸ್ಟೋರೆಂಟ್‌ಗಳಲ್ಲಿ ಮೊದಲೇ ಸೀಟು ಕಾಯ್ದಿರಿಸಿದವರಿಗೆ ಮಾತ್ರ ಅಲ್ಲಿಗೆ ತೆರಳಲು ಅವಕಾಶವಿತ್ತು. ಎಂಟು ಗಂಟೆಯ ನಂತರ ಜನ ಸಂಚಾರವನ್ನು ನಿರ್ಬಂಧಿಸಿದ್ದರಿಂದ 'ಮಧ್ಯರಾತ್ರಿ'ಯ ಸಂಭ್ರಮ ಹೆಚ್ಚು ಕಾಣಲಿಲ್ಲ. ಅನಿಲ್ ಕುಂಬ್ಳೆ ವೃತ್ತದಿಂದ ಮೆಯೋ ಹಾಲ್‌ವರೆಗೆ ವಾಹನ ಸಂಚಾರ ಮಾತ್ರವಲ್ಲದೆ, ಜನ ಸಂಚಾರವನ್ನೂ ನಿರ್ಬಂಧಿಸಿದ್ದರಿಂದ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆಗಳು ಎಂದಿನ 'ಆಕರ್ಷಣೆ' ಕಳೆದುಕೊಂಡಿದ್ದವು.

ಎಂಟು ಗಂಟೆಯ ಮುಂಚೆ ಈ ಸ್ಥಳಗಳಿಗೆ ಬಂದವರು ಮಾತ್ರ ಸ್ವಲ್ಪ ಸುತ್ತಾಡಿ ಸಂಭ್ರಮಿಸಿದರು. ಸೆಲ್ಫಿ ತೆಗೆದುಕೊಂಡು ಬೀಗಿದರು. ಆದರೆ, ಮಾಸ್ಕ್ ಹಾಕದ ಕೆಲವರಿಗೆ ಪೊಲೀಸರು ದಂಡ ವಿಧಿಸಿದ್ದರಿಂದ ಇದ್ದ ಅಲ್ಪ ಸಂತೋಷವೂ ಮಾಯವಾಗಿತ್ತು !


ನಗರದ ಬ್ರಿಗೇಡ್ ರಸ್ತೆ ಹೊಸ ವರ್ಷದ ಸಂಭ್ರಮಾಚರಣೆ ಕಾಣಲಿಲ್ಲ

ಸಾರ್ವಜನಿಕ ಸ್ಥಳಗಳಲ್ಲಿ ಓಡಾಟದ ಬದಲಿಗೆ ಮನೆಯಲ್ಲಿ, ಸ್ನೇಹಿತರ ಮನೆಯಲ್ಲಿ ಹೊಸ ವರ್ಷಾಚರಣೆಗೆ ಹೆಚ್ಚು ಜನ ಸಿದ್ಧತೆ ಮಾಡಿಕೊಂಡಿದ್ದರು. ಮನೆಗಳಲ್ಲಿ, ಅಪಾರ್ಟ್‌ಮೆಂಟ್‌ಗಳಲ್ಲಿ 'ಪಾರ್ಟಿ' ಎಂದಿನಂತೆ ನಡೆಯಿತು. ಸಾಮಾಜಿಕ ಜಾಲತಾಣಗಳಲ್ಲಿ ಶುಭಾಶಯ ವಿನಿಮಯ ಜೋರಾಗಿತ್ತು. ಬಹುತೇಕರು ಟಿವಿ, ಸಿನಿಮಾ ನೋಡುವ ಮೂಲಕ ವರ್ಷದ ಕೊನೆಯ ದಿನಕ್ಕೆ ವಿದಾಯ ಹೇಳಿದರು.

**ನಿಷೇಧಾಜ್ಞೆ:** ನಿಷೇಧಾಜ್ಞೆ ಜಾರಿ ಮಾಡಿದ್ದರಿಂದ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. ರಾತ್ರಿ 8 ಗಂಟೆಯ ವೇಳೆಗೆ ಮೇಲ್ಸೇತುವೆಗಳನ್ನು ಬಂದ್ ಮಾಡಲಾಗಿತ್ತು. 11ರ ನಂತರ ಸಂಚರಿಸುತ್ತಿದ್ದ ವಾಹನಗಳ ಸಂಖ್ಯೆ, ಚಾಲಕರ ದೂರವಾಣಿ ಸಂಖ್ಯೆಯನ್ನು ಪೊಲೀಸರು ದಾಖಲು ಮಾಡಿಕೊಳ್ಳುತ್ತಿದ್ದರು.

## ಕರ್ಫ್ಯೂನಿಂದ ಆದಾಯಕ್ಕೆ ಹೊಡೆತ

ರಾಜ್ಯ ಸರ್ಕಾರವು ರಾತ್ರಿ 8ರಿಂದ ಬೆಳಿಗ್ಗೆ 6ರವರೆಗೆ ಕರ್ಫ್ಯೂ ಜಾರಿ ಮಾಡಿದ್ದರಿಂದ ಆದಾಯಕ್ಕೆ ದೊಡ್ಡ ಹೊಡೆತ ಬಿತ್ತು ಎಂದು ಪಬ್ ಮತ್ತು ರೆಸ್ಟೋರೆಂಟ್ ಮಾಲೀಕರು ಅಸಮಾಧಾನ ವ್ಯಕ್ತಪಡಿಸಿದರು.

'ಕೋವಿಡ್‌ನಿಂದ ಮೊದಲೇ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದೆವು. ಹೊಸ ವರ್ಷದ ಸಂದರ್ಭದಲ್ಲಿಯೇ ಹೆಚ್ಚು ವ್ಯಾಪಾರ ಆಗುತ್ತಿತ್ತು. ಆದರೆ, ಸರ್ಕಾರ ಇದೇ ಅವಧಿಯಲ್ಲಿ ಕರ್ಫ್ಯೂ ಜಾರಿ ಮಾಡಿದ್ದರಿಂದ ಸಾಕಷ್ಟು ತೊಂದರೆಯಾಯಿತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಶೇ 80ರಷ್ಟು ವ್ಯಾಪಾರ ವಹಿವಾಟು ಕಡಿಮೆಯಾಗಿದೆ' ಎಂದು ಪಬ್ ಒಂದರ ಮಾಲೀಕ ಅಮಿತ್ ಅಹುಜಾ ಬೇಸರ ವ್ಯಕ್ತಪಡಿಸಿದರು.

'ಈ ನಷ್ಟದ ಪರಿಣಾಮ ಉದ್ಯೋಗಿಗಳು ಅಥವಾ ಸಿಬ್ಬಂದಿಗೆ ವೇತನ ಕೊಡುವುದೂ ಕಷ್ಟವಾಗುತ್ತದೆ' ಎಂದು ಅವರು ಅಳಲು ತೋಡಿಕೊಂಡರು.

'ಕೋವಿಡ್ ನಿಯಂತ್ರಿಸಬೇಕು ಎಂಬ ಸರ್ಕಾರ ಉದ್ದೇಶ ನಮಗೆ ಅರ್ಥವಾಗುತ್ತದೆ. ಆದರೆ, ಮೊದಲೇ ಸೀಟು ಕಾಯ್ದಿರಿಸಿದವರು ಮತ್ತು ಕೂಪನ್ ಪಡೆದವರನ್ನೂ ಪಬ್‌ಗೆ ಬಾರದಂತೆ ತಡೆಯಲಾಗಿದೆ. ಇದು ಸರಿಯಾದ ಕ್ರಮ ಅಲ್ಲ' ಎಂದು ಚರ್ಚ್‌ಸ್ಟ್ರೀಟ್ ವರ್ತಕರ ಸಂಘದ ದೀಪ್ ಬಟಾವಿಯಾ ಅಸಮಾಧಾನ ವ್ಯಕ್ತಪಡಿಸಿದರು.

'800 ಜನ ಸೀಟು ಕಾಯ್ದಿರಿಸಿದ್ದರು. ಕೆಲವೇ ಗಂಟೆಗಳಲ್ಲಿ ಅವಧಿಯಲ್ಲಿ 400 ಜನ ರದ್ದು ಮಾಡಿದರು. ಲಾಭ ನಿರೀಕ್ಷಿಸುವುದಕ್ಕಿಂತ ಖರ್ಚು, ಸಿಬ್ಬಂದಿ ವೇತನ ಸರಿದೂಗಿಸಿಕೊಳ್ಳುವುದೇ ಸವಾಲಾಗಿದೆ' ಎಂದು ಪಬ್‌ನ ಮಾಲೀಕರೊಬ್ಬರು ಹೇಳಿದರು.

## ಕೆಲವೆಡೆ ಕಾಣದ ನಿರ್ಬಂಧ

ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಇಂದಿರಾ ನಗರ ಹಾಗೂ ಕೋರಮಂಗಲದ ಪ್ರಮುಖ ವಾಣಿಜ್ಯ ಕೇಂದ್ರಗಳ ಸುತ್ತ–ಮುತ್ತ ಹೊರತು ಪಡಿಸಿದರೆ, ಬೇರೆ ಸ್ಥಳಗಳಲ್ಲಿ ಕರ್ಫ್ಯೂ ಪರಿಣಾಮ ಅಷ್ಟಾಗಿರಲಿಲ್ಲ.

ಬಸವನಗುಡಿ, ಬನಶಂಕರಿ ಮತ್ತಿತರ ಕಡೆಗಳಲ್ಲಿ ಮದ್ಯ ಮಾರಾಟ ಮಳಿಗೆಗಳು, ರೆಸ್ಟೋರೆಂಟ್‌ಗಳು ಮತ್ತು ಹೋಟೆಲ್‌ಗಳಲ್ಲಿ ಎಂದಿನಂತೆ ಹೆಚ್ಚು ಜನ ಸೇರಿದ್ದರು. ಬೇಕರಿ, ಹೋಟೆಲ್, ಅಂಗಡಿಗಳು, ಎಲೆಕ್ಟ್ರಾನಿಕ್ ಅಂಗಡಿಗಳಲ್ಲಿಯೂ ರಾತ್ರಿ 11ರವರೆಗೆ ಎಂದಿನಂತೆ ಚಟುವಟಿಕೆ ನಡೆಯುತ್ತಿತ್ತು.


ಹೊಸ ವರ್ಷಾಚರಣೆ ಅಂಗವಾಗಿ ನಿಷೇಧಾಜ್ಞೆ ಹೇರಿದ್ದರಿಂದ ಟೌನ್‌ಹಾಲ್ ಬಳಿ ಸಂಚರಿಸುತ್ತಿದ್ದ ಬೈಕ್ ಸವಾರನನ್ನು ಪೊಲೀಸರು ಗುರುವಾರ ಸಂಜೆ ತಪಾಸಣೆ ನಡೆಸಿದರು


ಹೊಸ ವರ್ಷಾಚರಣೆ ತಡೆಯಲು ಕೆ.ಆರ್.ಮಾರುಕಟ್ಟೆ ಬಳಿಯ ಬಿಜಿಎಸ್ ಮೇಲ್ಸೇತುವೆಯನ್ನು ಪೊಲೀಸರು ನಿರ್ಬಂಧಿಸಿದರು

ಪ್ರಜಾವಾಣಿ ಚಿತ್ರ/ಅನೂಪ್ ರಾಘ್ ಟಿ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ನಾಳೆ ಎಲ್ಲ ರಾಜ್ಯಗಳಲ್ಲಿ ಕೋವಿಡ್ ಲಸಿಕೆ ನೀಡುವ ಪೂರ್ವಾಭ್ಯಾಸ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ ನೀಡುವ ಪೂರ್ವಾಭ್ಯಾಸ ಜ. 2ರಂದು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯಲಿದೆ.

ಭವಿಷ್ಯದಲ್ಲಿ ಲಸಿಕೆ ನೀಡುವ ಬೃಹತ್ ಲಸಿಕಾ ಕಾರ್ಯಕ್ರಮ ನಡೆಯುವುದು. ಅದಕ್ಕೂ ಮುನ್ನ, ಲಸಿಕೆ ನೀಡುವಾಗ ಎದುರಾಗಬಹುದಾದ ಸಮಸ್ಯೆಗಳು, ಯೋಜನೆಯಲ್ಲಿ ಕಂಡುಬರುವ ನ್ಯೂನತೆಗಳನ್ನು ಗುರುತಿಸಿ, ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಪೂರ್ವಾಭ್ಯಾಸ ನಡೆಸಲಾಗುತ್ತಿದೆ ಎಂದು ಕೇಂದ್ರ ಗುರುವಾರ ತಿಳಿಸಿದೆ.

ಲಸಿಕೆ ನೀಡುವ ಕಾರ್ಯಕ್ರಮ ಅನುಷ್ಠಾನಕ್ಕಾಗಿ 'ಕೋ–ವಿನ್' ಎಂಬ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಈ ಆ್ಯಪ್ ಬಳಕೆ ಎಷ್ಟರ ಮಟ್ಟಿಗೆ ಕಾರ್ಯಸಾಧು ಎಂಬುದನ್ನು ತಿಳಿದುಕೊಳ್ಳಲು ಸಹ ಈ ಪೂರ್ವಾಭ್ಯಾಸ ನೆರವಾಗಲಿದೆ. ಮುಂದಿನ ದಿನಗಳಲ್ಲಿ ಬೃಹತ್ ಲಸಿಕೆ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಹಮ್ಮಿಕೊಳ್ಳಲು ಸಿಬ್ಬಂದಿಯಲ್ಲಿ ಆತ್ಮವಿಶ್ವಾಸ ತುಂಬಲಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕನ್ನಡಪ್ರಭ

# ಗೋಡೆಗಳ ನಡುವೆ ಹೊಸ ವರ್ಷದ ಸಂಭ್ರಮ!

## ಕೊರೋನಾ ಟಫ್ ರೂಲ್ಸ್ | ಪ್ರತಿವರ್ಷ ರಂಗೇರುತ್ತಿದ್ದ ಬ್ರಿಗೇಡ್, ಎಂಜಿ ರಸ್ತೆ ಸ್ತಬ್ಧ | ರಸ್ತೆಗಿಳಿಯಲು ಜನ ಹಿಂದೇಟು

## ಹೋಟೆಲ್, ಪಬ್‌ಗಳಲ್ಲಿ ಸರಳ ಆಚರಣೆ | ಅಪಾರ್ಟ್‌ಮೆಂಟ್‌ಗಳಲ್ಲಿ ಸ್ನೇಹಿತರು ಕುಟುಂಬ ಸದಸ್ಯರು ಸೇರಿ ಸಂಭ್ರಮ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊರೋನಾ ಸೋಂಕು ಹರಡುವ ಭೀತಿಯ ಹಿನ್ನೆಲೆಯಲ್ಲಿ ರಾಜಧಾನಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಿದ್ದರ ಪರಿಣಾಮ ಈ ಬಾರಿ ಹೊಸ ವರ್ಷಾಚರಣೆಯ ಸಂಭ್ರಮ ನೀರಸವಾಗಿದ್ದರೂ ಮನೆಗಳು, ಹೋಟೇಲ್, ಪಬ್, ಕ್ಲಬ್ ಮುಂತಾದ ಸ್ಥಳಗಳಲ್ಲಿ ಸಾಕಷ್ಟು ಕಳೆಗಟ್ಟಿತ್ತು.

ಸಾರ್ವಜನಿಕ ಸ್ಥಳಗಳು, ಹೊರಾಂಗಣದಲ್ಲಿ ಎಲ್ಲ ರೀತಿಯ ಸಂಭ್ರಮಾಚರಣೆಗೆ ನಿಷೇಧಿಸಿದ ಹಿನ್ನೆಲೆಯಲ್ಲಿ ಮನೆಗಳು, ಹೋಟೆಲ್‌ಗಳು, ಪಬ್‌ಗಳು, ಕ್ಲಬ್‌ಗಳು, ಫಾರ್ಮ್ ಹೌಸ್‌ಗಳಲ್ಲಿ ಈ ಬಾರಿ ಸಂಭ್ರಮಾಚರಣೆ ಕಳೆಗಟ್ಟಿತ್ತು. ಸ್ನೇಹಿತರು, ಕುಟುಂಬದ ಸದಸ್ಯರು, ಪರಿಚಿತರು ಆಯ್ದ ಜಾಗಗಳಲ್ಲಿ ಸೇರಿಕೊಂಡು ಈ ಬಾರಿ ಹೊಸ ವರ್ಷವನ್ನು ಸ್ವಾಗತಿಸಿದರು. ರಾತ್ರಿ ಹನ್ನೆರಡು ಗಂಟೆಗೆ ಕೇಕ್ ಕತ್ತರಿಸಿ, ಸಿಹಿ ವಿತರಿಸಿ ಚಪ್ಪಾಳೆಗಳೊಂದಿಗೆ ಪರಸ್ಪರ ಶುಭಾಶಯ ಕೋರಿ ಸಂಭ್ರಮಿಸಿದರು.

ಪಬ್, ಕ್ಲಬ್‌ಗಳಲ್ಲಿ ಹೊಸ ವರ್ಷಾಚರಣೆ ಮಾಡಿದ ಯುವಕ-ಯುವತಿಯರು ಕೊರೋನಾ ನಿಯಮಾವಳಿ ನಡುವೆ ತಗ್ಗಿದ ಡಿಜೆ ಸಂಗೀತ, ಹಿಂದಿ, ಇಂಗ್ಲಿಷ್ ಹಾಡುಗಳ ನಡುವೆ ಪರಸ್ಪರ ಅಪ್ಪಿಕೊಂಡು ಆತ್ಮೀಯವಾಗಿ ಹೊಸ ವರ್ಷವನ್ನು ಬರಮಾಡಿಕೊಂಡರು.

ಸಾಮಾನ್ಯವಾಗಿ ನಗರದಲ್ಲಿ ಹೊಸ ವರ್ಷ ಸಂಭ್ರಮಾಚರಣೆಯ ಹಾಟ್ ಸ್ಪಾಟ್‌ಗಳೆಂದೇ ಕರೆಯಲಾಗುವ ಬ್ರಿಗೇಡ್ ರಸ್ತೆ, ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಕಮರ್ಷಿಯಲ್ ಸ್ಟ್ರೀಟ್ ರಸ್ತೆಗಳಲ್ಲಿ ಈ ಬಾರಿ ಮುಕ್ತವಾಗಿ ಹೊಸ ವರ್ಷ ಸಂಭ್ರಮಾಚರಣೆಗೆ ಬ್ರೇಕ್ ಹಾಕಿದ್ದರಿಂದ ಆ ರಸ್ತೆಗಳಲ್ಲಿ ಬೆರಳೆಣಿಕೆ ಜನರು ಓಡಾಡುತ್ತಿದ್ದರು. ಹಿಂದಿನ ವರ್ಷಗಳಲ್ಲಿ ಈ ರಸ್ತೆಗಳಲ್ಲಿ ಝಗಮಗಿಸುವ ವಿದ್ಯುತ್ ದೀಪಾಲಂಕಾರದ ನಡುವೆ ಸಾವಿರಾರು ಮಂದಿ ಯುವಕ-ಯುವತಿಯರು ಕುಣಿದು ಕುಪ್ಪಳಿಸಿ ಹೊಸ ವರ್ಷ ಸ್ವಾಗತಿಸುತ್ತಿದ್ದರು. ಆದರೆ, ಈ ಬಾರಿ ಜನದಟ್ಟಣೆ ತಪ್ಪಿಸುವ ಉದ್ದೇಶದಿಂದಲೇ ಈ ಪ್ರದೇಶದಲ್ಲಿ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು. ಹೀಗಾಗಿ ಆ ಪ್ರದೇಶದಲ್ಲಿ ಜನಸಂಚಾರವೇ ವಿರಳವಾಗಿತ್ತು.

ಗ್ರಾಹಕರಿಂದ ತುಂಬಿ ತುಳುಕುತ್ತಿದ್ದ ಈ ಪ್ರದೇಶದ ಪಬ್, ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ಈ ಬಾರಿ ಗ್ರಾಹಕರ ಸಂಖ್ಯೆ ವಿರಳವಾಗಿತ್ತು. ಕೇವಲ ಒಂದೇ ರಾತ್ರಿಯಲ್ಲಿ ಲಕ್ಷಾಂತರ ರು. ವ್ಯಾಪಾರ-ವಹಿವಾಟು ನಡೆಸುತ್ತಿದ್ದ ವ್ಯಾಪಾರಿಗಳು ಭಾರೀ ನಿರಾಸೆ ಅನುಭವಿಸಿದರು. ಬೆಳಗ್ಗೆಯಿಂದ ಜನ ಸಂಚಾರ ಸಾಮಾನ್ಯವಾಗಿದ್ದ, ಈ ರಸ್ತೆಗಳನ್ನು ಸಂಜೆ ಬಳಿಕ ರಸ್ತೆಗಳ ಪ್ರವೇಶ ಹಾಗೂ ನಿರ್ಗಮನ ಸ್ಥಳಗಳನ್ನು ಬ್ಯಾರಿಕೇಡ್ ಹಾಕಿ ಮುಚ್ಚಿದ ಪರಿಣಾಮ ಜನಸಂಚಾರವೇ ಇಲ್ಲದಂತಾಗಿ ಬಿಕೋ ಎನ್ನುವ ವಾತಾವರಣ ನಿರ್ಮಾಣವಾಗಿತ್ತು.

**ಪಬ್‌ಗಳಲ್ಲಿ ಯುವಕರ ಮಸ್ತಿ:** ಈ ನಡುವೆ ಮುಂಗಡವಾಗಿ ಪಬ್‌ಗಳಲ್ಲಿ ಬುಕಿಂಗ್ ಮಾಡಿದ್ದ ಬೆರಳೆಣಿಕೆ ಮಂದಿ ಸಂಜೆ ಆರರ ಹೊತ್ತಿಗೆ ಪಬ್‌ಗಳನ್ನು ಹೊಕ್ಕಿದರು. ರಸ್ತೆಗಳಲ್ಲಿ ಓಡಾಡುವುದನ್ನು ನಿಷೇಧಿಸಿದ್ದರಿಂದ ಪಬ್‌ಗಳ ಒಳಗೆ ಹೆಚ್ಚು ಸಮಯ ಕಳೆದರು. ಪಬ್, ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ಸ್ಥಳೀಯರಿಗಿಂತ ಹೊರರಾಜ್ಯದ ಯುವಕ-ಯುವತಿಯರ ಸಂಖ್ಯೆಯಲ್ಲಿ ಕಂಡುಬಂದರು. ಇಂದಿರಾನಗರ, ಕಲ್ಯಾಣನಗರ, ಕೋರಮಂಗಲ ಸುತ್ತಮುತ್ತಲ ಪ್ರದೇಶಗಳ ಪಬ್, ಬಾರ್ ಅಂಡ್ ರೆಸ್ಟೋರೆಂಟ್‌ಗಳು, ಹೋಟೆಲ್‌ಗಳಲ್ಲಿ ಗ್ರಾಹಕರ ಸಂಖ್ಯೆ ಕೊಂಚ ಹೆಚ್ಚಾಗಿ ಕಂಡು ಬಂದಿತ್ತು. ಪಾನಮತ್ತ ಮಂದಿ ಮನಸೋ ಇಚ್ಛೆ ಕುಣಿದು ಕುಪ್ಪಳಿಸಿದರು.


'ಕನ್ನಡಪ್ರಭ' ಕಚೇರಿಯಲ್ಲಿ ಕೇಕ್ ಕತ್ತರಿಸಿ ಹೊಸ ವರ್ಷಕ್ಕೆ ಸ್ವಾಗತ ಕೋರಲಾಯಿತು.


ಬ್ರಿಗೇಡ್ ರಸ್ತೆಯಲ್ಲಿ ಯುವಕ, ಯುವತಿಯರ ಸಂಭ್ರಮ.


ನಟ ಧ್ರುವ ಸರ್ಜಾ ಕೇಕ್ ಕತ್ತರಿಸಿ ಸುವರ್ಣ ನ್ಯೂಸ್ ಸಿಬ್ಬಂದಿ ಜತೆ ಹೊಸ ವರ್ಷಕ್ಕೆ ಸ್ವಾಗತ ಕೋರಿದರು.


ಹೊಸ ವರ್ಷದ ಸಂಭ್ರಮದ ವೇಳೆ ನಟಿ ರಚಿತಾ ರಾಮ್ ಸುವರ್ಣ ನ್ಯೂಸ್ ಸಿಬ್ಬಂದಿ ಜತೆ ಹೆಜ್ಜೆ ಹಾಕಿದ್ದು.


ಆರ್.ಆರ್.ನಗರದ ಅಪಾರ್ಟ್‌ಮೆಂಟ್‌ವೊಂದರಲ್ಲಿ ನಿವಾಸಿಗಳೆಲ್ಲರು ಒಗ್ಗೂಡಿ ಸಂಸತದಿಂದ ಹೊಸ ವರ್ಷವನ್ನು ಸ್ವಾಗತಿಸಿದರು.


ಸುವರ್ಣ ನ್ಯೂಸ್‌ನಲಿ ಗಾಯಕ ಚಂದನ್ ಶೆಟ್ಟಿ ಸಂಭ್ರಮ.

ಕನ್ನಡಪ್ರಭ

# ಬ್ರಿಟನ್ ರಿಟರ್ನ್: 20ಕ್ಕೆ ಏರಿದ ಸೋಂಕಿತರ ಸಂಖ್ಯೆ

## ಬ್ರಿಟನ್‌ನಿಂದ ಬಂದ 1,329 ಮಂದಿಗೆ ಪರೀಕ್ಷೆ | ಇನ್ನೂ 80 ಮಂದಿಯ ಪರೀಕ್ಷಾ ವರದಿ ಬಾಕಿ | ಮಹದೇವಪುರ ವಲಯದಲ್ಲಿ ಹೆಚ್ಚು ಕೇಸ್ ಪತ್ತೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರೂಪಾಂತರಿ ಕೊರೋನಾ ವೈರಸ್ ಪತ್ತೆಯಾಗಿರುವ ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಹಿಂದಿರುಗಿರು ವವರ ಪೈಕಿ ಗುರುವಾರ ಮತ್ತೆ ಇಬ್ಬರಲ್ಲಿ ಕೊರೋನಾ ಸೋಂಕು ದೃಢಪಟ್ಟಿದ್ದು, ಇದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 20ಕ್ಕೆ ಏರಿಕೆಯಾಗಿದೆ. ಡಿ.1ರಿಂದ 21ವರೆಗೆ ಬ್ರಿಟನ್‌ನಿಂದ ಒಟ್ಟು 1,428 ಮಂದಿ ಬೆಂಗಳೂರು ನಗರಕ್ಕೆ ವಾಪಸ್ಸಾಗಿದ್ದಾರೆ. ಈ ಪೈಕಿ ಬಿಬಿಎಂಪಿ 1,329 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿದೆ.



ಈವರೆಗೆ 1,249 ಮಂದಿ ಕೋವಿಡ್ ಪರೀಕ್ಷಾ ಫಲಿತಾಂಶ ಲಭ್ಯವಾಗಿದ್ದು, 20 ಮಂದಿಗೆ ಸೋಂಕು ಪತ್ತೆಯಾಗಿದೆ. ಇನ್ನೂ 80 ಮಂದಿ ಫಲಿತಾಂಶ ಬರಬೇಕಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಇದುವರೆಗೆ ಪತ್ತೆಯಾಗಿರುವ 20 ಕೋವಿಡ್ ಸೋಂಕು ಪ್ರಕರಣಗಳಲ್ಲಿ ಮಹದೇವಪುರ ವಲಯದಲ್ಲಿ 6, ಬೊಮ್ಮನಹಳ್ಳಿ 5, ಪಶ್ಚಿಮ 4 ಪೂರ್ವ ತಲಾ 3, ದಾಸರಹಳ್ಳಿ ಹಾಗೂ ದಕ್ಷಿಣ ವಲಯದಲ್ಲಿ ತಲಾ 1 ಪ್ರಕರಣ ಪತ್ತೆಯಾದಂತಾಗಿದೆ.

## 3.88 ಲಕ್ಷ ದಾಟಿದ ಸೋಂಕಿತರ ಸಂಖ್ಯೆ

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಗುರುವಾರ 554 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 849 ಮಂದಿ ಗುಣಮುಖರಾಗಿದ್ದಾರೆ. ಆರು ಮಂದಿ ಮೃತಪಟ್ಟ ವರದಿಯಾಗಿದೆ. ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,88,386 ಏರಿಕೆಯಾಗಿದೆ. ಗುಣಮುಖರ ಸಂಖ್ಯೆ 3,76,835 ತಲುಪಿದೆ. ಇನ್ನೂ 7,233 ಸಕ್ರಿಯ ಸೋಂಕಿತರಿದ್ದು ಈ ಪೈಕಿ 87 ಸೋಂಕಿತರ ಆರೋಗ್ಯ ಸ್ಥಿತಿ ಗಂಭೀರಗೊಂಡ ಹಿನ್ನೆಲೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಒಟ್ಟು ಮೃತರ ಸಂಖ್ಯೆ 4,317ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

## ಬ್ರಿಟನ್ ವೈರಸ್ ಬಗ್ಗೆ ಎಚ್ಚರ: ಗುಪ್ತಾ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬ್ರಿಟನ್‌ನ ರೂಪಾಂತರ ಕೊರೋನಾ ವೈರಸ್ ಬಗ್ಗೆ ನಾಗರಿಕರು ಆತಂಕ ಪಡದೇ, ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ಮನವಿ ಮಾಡಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ರೂಪಾಂತರ ಕೋವಿಡ್ ವೈರಾಣು ವೇಗವಾಗಿ ಹರಡಲಿದೆ. ಹೀಗೆಂದು ಸಾರ್ವಜನಿಕರು ಆತಂಕ ಪಡಬೇಕಿಲ್ಲ. ಈ ಹಿಂದೆ ಅನುಸರಿಸಿದಂತೆ ಸಾರ್ವಜನಿಕ ಸ್ಥಳದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಮತ್ತು ಕಡ್ಡಾಯವಾಗಿ ಮಾಸ್ಕ್ ಧರಿಸುವುದು. ಅನಾವಶ್ಯಕವಾಗಿ ಓಡಾಟ ಮಾಡದಿರುವುದು. ಚೆನ್ನಾಗಿ ಕೈ ತೊಳೆದುಕೊಳ್ಳುವುದು ಸೇರಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲನೆ ಮಾಡುವಂತೆ ಮನವಿ ಮಾಡಿದ್ದಾರೆ.

ಡಿ.1ರಿಂದ 21ರ ವರೆಗೆ ಒಟ್ಟು 1,293 ಮಂದಿ ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಆಗಮಿಸಿದ್ದಾರೆ. ಈ ಎಲ್ಲ ಪ್ರಯಾಣಿಕರನ್ನು ಕೋವಿಡ್ ಸೋಂಕು ಪರೀಕ್ಷೆಗೆ ಒಳಪಡಿಸಲಾಗಿದೆ. ಮೂವರಿಗೆ ಮಾತ್ರ ರೂಪಾಂತರಗೊಂಡ ಕೋವಿಡ್ ಸೋಂಕು ಇರುವುದು ದೃಢಪಟ್ಟಿದೆ. ಸೋಂಕಿತರ ಪ್ರಾಥಮಿಕ ಮತ್ತು ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಿ ಸಾಂಸ್ಥಿಕ ಕ್ವಾರಂಟೈನ್ ಮಾಡಲಾಗುತ್ತಿದೆ. ನಗರದಲ್ಲಿ ಮತ್ತೆ ಯಾವುದೇ ಹೊಸ ರೂಪಾಂತರ ಸೋಂಕು ಪ್ರಕರಣ ಪತ್ತೆಯಾಗಿಲ್ಲ ಎಂದು ತಿಳಿಸಿದರು. ಇನ್ನು ರೂಪಾಂತರ ಸೋಂಕು ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ, ಆರೋಗ್ಯ ಇಲಾಖೆ, ಬಿಬಿಎಂಪಿ ಅಧಿಕಾರಿಗಳು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದಾರೆ ಎಂದರು.

ಕನ್ನಡಪ್ರಭ

# ಪಾದರಾಯನಪುರ ರಸ್ತೆಗೆ ನಾಮಕರಣ: ರದ್ದು ಕೋರಿ ಪತ್ರ

**ಬೆಂಗಳೂರು:** ಪಾದರಾಯನಪುರ ವಾರ್ಡ್‌ನ ಪ್ರಮುಖ 9 ರಸ್ತೆ ಹಾಗೂ 2 ವೃತ್ತಗಳಿಗೆ ಸಮಾಜ ಸೇವಕರ ಹೆಸರಿಡಲು ಸಂಸದರು ಹಾಗೂ ವಿವಿಧ ಮುಖಂಡರಿಂದ ಆಕ್ಷೇಪಣೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ನಾಮಕರಣ ಪ್ರಕ್ರಿಯೆ ರದ್ದುಗೊಳಿಸುವಂತೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಸೆ.8 ರಂದು ಪಾದರಾಯನಪುರ ವಾರ್ಡ್‌ನ 9 ರಸ್ತೆ ಹಾಗೂ ಎರಡು ವೃತ್ತಗಳಿಗೆ ಸಮಾಜ ಸೇವಕರ ಹೆಸರುಗಳನ್ನು ನಾಮಕರಣಕ್ಕೆ ನಿರ್ಣಯ ಕೈಗೊಳ್ಳಲಾಗಿತ್ತು. ಈ ಕುರಿತು ಬಿಬಿಎಂಪಿ ಡಿ.16ರಂದು ಪತ್ರಿಕಾ ಪ್ರಕಟಣೆ ಮೂಲಕ ಸಾರ್ವಜನಿಕರ ಆಕ್ಷೇಪಣೆ ಆಹ್ವಾನಿಸಿತ್ತು. ಈ ನಡುವೆ ಸಂಸದರಾದ ಅನಂತಕುಮಾರ್ ಹೆಗಡೆ, ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ, ಮುಖಂಡರಾದ ರಂಗನಾಥ್ ಮಲ್ಯ, ಎನ್.ಆರ್.ರಮೇಶ್ ಸೇರಿದಂತೆ ಸಾರ್ವಜನಿಕರಿಂದ ಸಾಮಾಜಿಕ ಜಾಲತಾಣ, ಇಮೇಲ್, ಪತ್ರ ಮುಖೇನ ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾಮಕರಣ ಪ್ರಕ್ರಿಯೆ ರದ್ದುಗೊಳಿಸುವಂತೆ ಬಿಬಿಎಂಪಿ ಆಯುಕ್ತರು ಪತ್ರ ಬರೆದು ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಯನ್ನು ಕೋರಿದ್ದಾರೆ.

## ರೌಡಿ ಶೀಟರ್, ದಲ್ಲಾಳಿಗಳ ಹೆಸರು?

ಪಾದರಾಯನಪುರ ರಸ್ತೆ ಮತ್ತು ಸರ್ಕಲ್‌ಗಳಿಗೆ ರೌಡಿಶೀಟರ್, ರಿಯಲ್ ಎಸ್ಟೇಟ್ ಏಜೆಂಟ್ ಹಾಗೂ ದಲ್ಲಾಳಿಗಳ ಹೆಸರುಗಳನ್ನು ನಾಮಕರಣಕ್ಕೆ ಮುಂದಾಗಿತ್ತು ಎಂಬ ಆರೋಪ ಇದೀಗ ಕೇಳಿ ಬರುತ್ತಿವೆ. ತನಿಖೆಯ ಬಳಿಕವೇ ಈ ಬಗ್ಗೆ ಸ್ಪಷ್ಟ ಮಾಹಿತಿ ತಿಳಿಯಲಿದೆ.

ಕನ್ನಡಪ್ರಭ

ಭ್ರಷ್ಟಾಚಾರ | ಕೂಡಲೇ ಟೆಂಡರ್ ರದ್ದುಗೊಳಿಸಿ | ದಾಖಲೆ ಸಹಿತ ಸರ್ಕಾರಕ್ಕೆ ದೂರಿತ್ತ ಎನ್.ಆರ್.ರಮೇಶ್

# ಸುವಿಧಾ ಕ್ಯಾಬಿನ್ ಟೆಂಡರಲ್ಲಿ ಅಕ್ರಮ?

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಬಿಎಂಪಿ ಪೌರ ಕಾರ್ಮಿಕರ ಮಸ್ಟರಿಂಗ್ ಕೇಂದ್ರಗಳಲ್ಲಿ ಪೌರ ಕಾರ್ಮಿಕರ ವಿಶ್ರಾಂತಿಗೆ ಹಾಗೂ ಶೌಚಗೃಹ ಸೌಲಭ್ಯ ಒದಗಿಸುವ ಸುವಿಧಾ ಕ್ಯಾಬಿನ್ ನಿರ್ಮಾಣದ ಟೆಂಡರ್‌ನಲ್ಲಿ ಅಕ್ರಮ ನಡೆದಿದೆ. ಕೂಡಲೆ ಟೆಂಡರ್‌ನ್ನು ತಡೆಯುವಂತೆ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ದಾಖಲೆಗಳ ಸಹಿತ ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ಎನ್.ಆರ್.ರಮೇಶ್ ದೂರು ಸಲ್ಲಿಸಿದ್ದಾರೆ.

ರಾಜ್ಯ ಸರ್ಕಾರದ 'ಶುಭ್ರ ಬೆಂಗಳೂರು' ಯೋಜನೆಯ ಅನುದಾನದಡಿ ಪೌರ ಕಾರ್ಮಿಕರ ಮಸ್ಟರಿಂಗ್ ಕೇಂದ್ರಗಳಲ್ಲಿ 221 'ಸುವಿಧಾ ಕ್ಯಾಬಿನ್' ನಿರ್ಮಾಣಕ್ಕೆ 20 ಕೋಟಿ ರು. ಮೊತ್ತದ ಟೆಂಡರ್ ಕರೆಯಲಾಗಿತ್ತು. ಈ ಟೆಂಡರ್‌ನ್ನು ಕಾನೂನು ಬಾಹಿರವಾಗಿ ಅರ್ಹತೆಯಿಲ್ಲದ ಗುತ್ತಿಗೆದಾರನಿಗೆ ನೀಡಲಾಗಿದೆ. ಕೂಡಲೇ ಟೆಂಡರ್ ರದ್ದುಪಡಿಸಿ ಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಗುರುವಾರ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ದಾಖಲೆಗಳ ಸಹಿತ ದೂರು ಸಲ್ಲಿಸಿದ್ದಾರೆ.

ತಲಾ ಒಂದು ಕ್ಯಾಬಿನ್‌ಗೆ 7.90 ಲಕ್ಷ ರು.ಗಳಂತೆ 221 ಕ್ಯಾಬಿನ್‌ಗಳಿಗೆ (ಜಿಎಸ್‌ಟಿ ಬಿಟ್ಟು) 17.45 ಕೋಟಿ ರು. ಅಲ್ಪಾವಧಿ ಟೆಂಡರ್ ಕರೆದು, ಮೆ.ಆಗ್ರಾ ಇನ್ನಾಟೆಕ್ ಸಂಸ್ಥೆಗೆ 18.31 ಕೋಟಿ ರು.ಗೆ ಟೆಂಡರ್ ನೀಡಲಾಗಿದೆ. ಆದರೆ, ಈ ಸಂಸ್ಥೆ 2020ರ ಫೆಬ್ರವರಿಯಲ್ಲಿ ಸರ್ಕಾರದಲ್ಲಿ ನೋಂದಣಿ ಮಾಡಿಸಿಕೊಂಡಿದ್ದು, 2015-16 ರಿಂದ 2019-20ರ ಅವಧಿಯಲ್ಲಿ ಕಾರ್ಯ ನಿರ್ವಹಿಸಿದ ಬಗ್ಗೆ ನಕಲಿ ಪ್ರಮಾಣಪತ್ರವನ್ನು ಪಾಲಿಕೆಗೆ ಸಲ್ಲಿಸಿದೆ. ಜತೆಗೆ, ಈ ಸಂಸ್ಥೆಯು ಫೆಬ್ರವರಿಯಲ್ಲಿ 1.34 ವಾರ್ಷಿಕ ವಹಿವಾಟು ತೋರಿಸಿದ್ದು, ಕೇವಲ 7 ತಿಂಗಳ ನಂತರ 42.53 ಕೋಟಿ ಎಂದು ವಹಿವಾಟು ತೋರಿಸಿದೆ ಎಂದು ಆರೋಪಿಸಿದ್ದಾರೆ.

## ಕಂಟೇನರ್‌ಗಳ ಬೆಲೆ ₹1.26 ಲಕ್ಷ



ಪೌರ ಕಾರ್ಮಿಕರಿಗೆ ನಿರ್ಮಿಸುತ್ತಿರುವ 'ಸುವಿಧಾ ಕ್ಯಾಬಿನ್'ನ್ನು ಕಂಟೇನರ್‌ನಲ್ಲಿ ನಿರ್ಮಿಸುತ್ತಿದ್ದು, ಪ್ರತಿ ಕಂಟೇನರ್‌ಗೆ 7.90 ಲಕ್ಷ ರು. ನಿಗದಿ ಮಾಡಿದೆ. ಆದರೆ, ವಾಸ್ತವಿಕವಾಗಿ ಗುಣಮಟ್ಟದ ಕಂಟೇನರ್‌ಗಳು 1.25 ಲಕ್ಷ ರು. ಗಳಿಗೆ ದೊರೆಯುತ್ತವೆ. ಪಾಲಿಕೆ ಹಣ ಲೂಟಿ ಮಾಡುವ ಉದ್ದೇಶದಿಂದಲೇ ಪಾಲಿಕೆ ಅಧಿಕಾರಿಗಳು ಹಲವು ಆರೋಪ ಎದುರಿಸುತ್ತಿರುವ ವಿನೋದ್ ಕುಮಾರ್ ಮಾಲೀಕತ್ವದ ಮೆ.ಆಗ್ರಾ ಇನ್ನಾಟೆಕ್ ಸಂಸ್ಥೆಗೆ ಟೆಂಡರ್ ನೀಡಿದ್ದು, ಟೆಂಡರ್ ಅನುಮೋದನೆ ಅಧಿಸೂಚನೆ ಹೊರಡಿಸಬಾರದು ಎಂದು ರಮೇಶ್ ಮನವಿ ಮಾಡಿದ್ದಾರೆ.

ಕನ್ನಡಪ್ರಭ

# ಮೇಲ್ಸೇತುವೆಗಳು ಬಂದ್




ಗುರುವಾರ ರಾತ್ರಿ ಎಂಟು ಗಂಟೆಯಿಂದ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಮ್ಯೂಸಿಯಂ ರಸ್ತೆ, ರೆಸ್ಟ್ ಹೌಸ್ ಪಾರ್ಕ್ ರಸ್ತೆ, ರೆಸಿಡೆನ್ಸಿ ರಸ್ತೆಯಲ್ಲಿ ಪೊಲೀಸ್ ವಾಹನ, ತುರ್ತು ಸೇವಾ ವಾಹನ ಹೊರತುಪಡಿಸಿ ಇನ್ನುಳಿದ ಎಲ್ಲ ವಾಹನಗಳ ಸಂಚಾರ ನಿಷೇಧಿಸಲಾಗಿತ್ತು.ನಗರದ 44 ಮೇಲ್ಸೆತುವೆಗಳಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ವರ್ಷಾಚರಣೆ ನೆಪದಲ್ಲಿ ಫ್ಲೈ ಓವರ್‌ಗಳ ಮೇಲೆ ವ್ಹೀಲಿಂಗ್, ಡ್ರ್ಯಾಗ್ ರೇಸ್, ಅತಿವೇಗದ ಚಾಲನೆ ಮಾಡುವುದನ್ನು ತಡೆಯುವ ನಿಟ್ಟಿನಲ್ಲಿ ಪೊಲೀಸರು ಈ ಕ್ರಮ ಕೈಗೊಂಡಿದ್ದರು.

# ವಾಹನ ನಿಲುಗಡೆ ನಿಷೇಧ

ನಗರದ ಕೇಂದ್ರ ಭಾಗದ ಎಂ.ಜಿ ರಸ್ತೆ, ಕಬ್ಬನ್ ರಸ್ತೆ, ರೆಸಿಡೆನ್ಸಿ ರಸ್ತೆ, ರಿಚ್‌ಮಂಡ್ ರಸ್ತೆ, ಇನ್‌ಫೆಂಟ್ರಿ ರಸ್ತೆ, ಬ್ರಿಗೇಡ್ ರಸ್ತೆ, ಅಶೋಕನಗರ ಹಳೆ ಪೊಲೀಸ್ ಠಾಣೆ ಜಂಕ್ಷನ್, ಚರ್ಚ್ ಸ್ಟ್ರೀಟ್, ಮ್ಯೂಸಿಯಂ ರಸ್ತೆ, ರೆಸ್ಟ್ ಹೌಸ್ ರಸ್ತೆ, ಸೆಂಟ್ ಮಾರ್ಕ್ಸ್ ರಸ್ತೆ, ಮಾರ್ಕನ್ ರಸ್ತೆ, ಮೈನ್‌ಗಾರ್ಡ್ ಕ್ರಾಸ್ ರಸ್ತೆ, ಡಿಸ್ಪೆನ್ಸರಿ ರಸ್ತೆ ಹಾಗೂ ಇಂದಿರಾನಗರ 100 ಅಡಿ ರಸ್ತೆಯಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿತ್ತು. ಈ ಭಾಗಗಳಲ್ಲಿ ಸಂಜೆ ಬಳಿಕ ಜನ ಸಂಚಾರವೇ ವಿರಳವಾಗಿದ್ದರಿಂದ ರಸ್ತೆಗಳು ಬಹುತೇಕ ಖಾಲಿ ಇದ್ದವು.

# ರಾಜ್ಯದಲ್ಲಿ ರೂಪಾಂತರಿ ಕೊರೋನಾ ವ್ಯಾಪಕ?

## 4 ತಿಂಗಳ ಹಿಂದೆಯೇ 'ಬ್ರಿಟನ್ ವೈರಸ್' ಹರಡಿರುವ ಬಗ್ಗೆ ತಜ್ಞರ ಶಂಕೆ: ಆತಂಕ

• **ಶ್ರೀಕಾಂತ್ ಎನ್. ಗೌಡಸಂದ್ರ**

**ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲೂ ಬ್ರಿಟನ್ ರೂಪಾಂತರಿ ಸೋಂಕು ಹಬ್ಬಿರಬಹುದಾದ ಭೀತಿಯಿಂದ ಡಿ. 21ರ ನಂತರ ಸೋಂಕಿತರ ಪತ್ತೆಗೆ ಸರ್ಕಾರ ತಡಬಡಾಯಿಸುತ್ತಿದೆ. ಆದರೆ, ಇದಕ್ಕೂ ಮೊದಲೇ ಸೋಂಕು ರಾಜ್ಯದಲ್ಲಿ ವ್ಯಾಪಿಸಿರುವ ಶಂಕೆಯನ್ನು ಇದೀಗ ತಜ್ಞರು ವ್ಯಕ್ತಪಡಿಸಿದ್ದು, ಆತಂಕ ಮೂಡಿಸಿದೆ.

ಏಕೆಂದರೆ, ಬ್ರಿಟನ್‌ನಲ್ಲಿ ಸೆಪ್ಟೆಂಬರ್‌ನಲ್ಲೇ ರೂಪಾಂತರಿ ವೈರಸ್ ಪತ್ತೆಯಾಗಿತ್ತು. ಡಿಸೆಂಬರ್ ಮೊದಲ ವಾರದಲ್ಲಿ ವ್ಯಾಪಕವಾಗಿ ಹಬ್ಬಿತ್ತು. ಇದನ್ನು ಬ್ರಿಟನ್ ಸರ್ಕಾರ ಡಿ. 14ರಂದು ಘೋಷಿಸಿತ್ತು. ಸೆಪ್ಟಂಬರ್‌ನಿಂದ ಡಿಸೆಂಬರ್ ವರೆಗೆ ರಾಜ್ಯಕ್ಕೆ ಲಕ್ಷಾಂತರ ಮಂದಿ ಬ್ರಿಟನ್ ಹಾಗೂ ರಾಜ್ಯದ ನಡುವೆ ಸಂಚರಿಸಿದ್ದಾರೆ. ಈ ಪೈಕಿ ಹಲವು ಸಾವಿರ ಮಂದಿ ಸೋಂಕಿತರಾಗಿರುವ ಸಾಧ್ಯತೆಯಿದೆ. ಅವರು ರಾಜ್ಯಾದ್ಯಂತ ಸಂಚಾರ ನಡೆಸಿ ಸೋಂಕು ಹಬ್ಬಿಸಿರುವ ಸಂಭವವೂ ಇದೆ. ಹೀಗಾಗಿ, ಡಿ.21ರ ನಂತರ ಬಂದವರನ್ನು ಮಾತ್ರ ಪತ್ತೆ ಹಚ್ಚಿ, ಕ್ವಾರಂಟೈನ್ ಮಾಡಿದರೆ ಸಾಕಾಗದು ಎಂದು ಹೇಳುತ್ತಾರೆ ತಜ್ಞರು.

### ತಿಂಗಳಾಂತ್ಯಕ್ಕೆ ಹೆಚ್ಚಳ?

ಕೊರೋನಾ ಸೋಂಕಿನ ವಿರುದ್ಧದ ಪ್ರತಿಕಾಯ (ಆ್ಯಂಟಿಬಾಡೀಸ್) ರೂಪಾಂತರಿ ವಿರುದ್ಧವೂ ಕೆಲಸ ಮಾಡುತ್ತವೆ. ಈಗಾಗಲೇ ಸೋಂಕಿನಿಂದ ಗುಣ ಆದವರಲ್ಲಿನ ಪ್ರತಿಕಾಯಗಳು ಸದ್ಯದಲ್ಲೇ ಕ್ಷೀಣಿಸಬಹುದು. ಹೀಗಾಗಿ ರೂಪಾಂತರಿ ರಾಜ್ಯದಲ್ಲಿ ಹರಡಿರುವುದು ತಜ್ಞ ಹೇಳಿಕೆಯಂತೆ ಸತ್ಯವಾದರೆ ಜನವರಿ ಅಂತ್ಯದ ವೇಳೆಗೆ ವ್ಯಾಪಕವಾಗುವ ಸಾಧ್ಯತೆಯಿದೆ.

**ಭಿನ್ನ ಅನಿಸಿಕೆಯೂ ಉಂಟು:** ಆದರೆ ಬ್ರಿಟನ್ ಕೊರೋನಾ ಸೋಂಕು ಹರಡುವಿಕೆ ಬಗ್ಗೆ ಇನ್ನು ಕೆಲವು ತಜ್ಞರು ಭಿನ್ನ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ತಜ್ಞರ ಸಮಿತಿಯ ಹಿರಿಯ ಸದಸ್ಯರೊಬ್ಬರ ಪ್ರಕಾರ, ರಾಜ್ಯಕ್ಕೆ ಈ ಮೊದಲು ಬಂದಿರುವವರಲ್ಲಿ ರೂಪಾಂತರಿ ವೈರಸ್ ಉಂಟಾಗಿರುವ ಸಾಧ್ಯತೆಗಳು ಹೆಚ್ಚಾಗಿವೆ. ಆದರೂ, ಶೇ.70 ರಷ್ಟು ವೇಗವಾಗಿ ಹರಡುವ ಬ್ರಿಟನ್ ವೈರಸ್ ಬಂದಿದ್ದರೆ ಇಷ್ಟೊತ್ತಿಗೆ ಕೊರೋನಾ ರಾಜ್ಯದಲ್ಲಿ ವ್ಯಾಪಕವಾಗಿ ಹರಡಬೇಕಿತ್ತು. ಸದ್ಯ ಅಂತಹ ಸ್ಥಿತಿ ನಮ್ಮಲ್ಲಿ ಉಂಟಾಗಿಲ್ಲ ಎನ್ನುತ್ತಾರೆ.

ತಜ್ಞರ ಸಮಿತಿ ಮತ್ತೊಬ್ಬ ಸದಸ್ಯರ ಪ್ರಕಾರ, ಕೊರೋನಾ ಪ್ರಕರಣಗಳು ಹೆಚ್ಚಾಗಿ ಹರಡಿಲ್ಲ ಎಂಬ ಕಾರಣಕ್ಕೆ ರೂಪಾಂತರಿ ಕೊರೋನಾ ಕಾಲಿಟ್ಟಿಲ್ಲ ಎಂದು ಹೇಳಲಾಗದು. ಏಕೆಂದರೆ ಸೆರೊ ಸರ್ವೆ ಪ್ರಕಾರ ಈಗಾಗಲೇ ರಾಜ್ಯದ ಶೇ.50 ರಷ್ಟು ಮಂದಿಗೆ ಕೊರೋನಾ ಸೋಂಕು ಬಂದಿರುವ ಸಾಧ್ಯತೆ ಇದೆ. ಇವರಲ್ಲಿನ ಆ್ಯಂಟಿಬಾಡೀಸ್‌ನಿಂದಾಗಿ ಸೋಂಕು ಪ್ರಮಾಣ ಹೆಚ್ಚಾಗದೆ ಇರಬಹುದು ಎನ್ನುತ್ತಾರೆ.

**ಸೋಂಕಿತರ ಜೆನೆಟಿಕ್ ಸೀಕ್ವೆನ್ಸ್ ನಡೆಸಿ:** ಕಳೆದ ಮೂರು ತಿಂಗಳ ಅವಧಿಯಲ್ಲಿ ರಾಜ್ಯಕ್ಕೆ ಆಗಮಿಸಿರುವ ಪ್ರಯಾಣಿಕರ ಸಂಖ್ಯೆಯನ್ನು ಕೇಂದ್ರದ ನೆರವಿನಿಂದ ಪಡೆದು ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸಬೇಕು. ಪಾಸಿಟಿವ್ ಬಂದವರಿಗೆ ಜೆನೆಟಿಕ್ ಸೀಕ್ವೆನ್ಸ್ ಪರೀಕ್ಷೆ ನಡೆಸಬೇಕು. ಯಾವ ಜಿಲ್ಲೆಗಳಲ್ಲಿ ಕೊರೋನಾ ಸೋಂಕು ಪ್ರಕರಣ ಹೆಚ್ಚಾಗಿ ವರದಿಯಾಗುತ್ತಿದೆಯೋ ಅಲ್ಲೂ ಜೆನೆಟಿಕ್ ಸೀಕ್ವೆನ್ಸ್ ಪರೀಕ್ಷೆ ನಡೆಸಿ ಎಂದು ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ ಎಂದು ಕನ್ನಡಪ್ರಭಕ್ಕೆ ಉನ್ನತ ಮೂಲಗಳು ತಿಳಿಸಿವೆ.

ಕನ್ನಡಪ್ರಭ

# ದೇಶಾದ್ಯಂತ ಲಸಿಕೆ ತಾಲೀಮು

## ನಾಳೆ ಎಲ್ಲ ರಾಜ್ಯಗಳಲ್ಲೂ ವಿತರಣೆ ಬಗ್ಗೆ ಅಣಕು ಕಾರ್ಯಾಚರಣೆ ನಡೆಸಲು ಕೇಂದ್ರ ಸೂಚನೆ

• **ಪಿಟಿಐ** ನವದೆಹಲಿ

ನಾಲ್ಕು ರಾಜ್ಯಗಳಲ್ಲಿ ಕೆಲವೇ ದಿನಗಳ ಹಿಂದೆ ಕೊರೋನಾ ಲಸಿಕೆ ನೀಡುವ ಅಣಕು ಅಭಿಯಾನ ನಡೆಸಿದ್ದ ಕೇಂದ್ರ ಸರ್ಕಾರ ಇದೀಗ ಜ.2ರಂದು ಎಲ್ಲಾ ರಾಜ್ಯಗಳಲ್ಲೂ ಅಣಕು ಅಭಿಯಾನ ನಡೆಸುವುದಾಗಿ ಪ್ರಕಟಿಸಿದೆ. ದೇಶಾದ್ಯಂತ ಕೊರೋನಾ ಲಸಿಕೆ ವಿತರಿಸುವುದಕ್ಕೆ ಮಾಡಿಕೊಂಡಿರುವ ಸಿದ್ಧತೆಯನ್ನು ಪರಿಶೀಲಿಸಲು ಈ ಅಭಿಯಾನ ನಡೆಯಲಿದೆ.

ಜ.2ರಂದು ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ತಮ್ಮ ರಾಜಧಾನಿಯಲ್ಲಿ ಕನಿಷ್ಠ 3 ಕೇಂದ್ರಗಳಲ್ಲಿ ಅಣಕು ಅಭಿಯಾನ ನಡೆಸಬೇಕು. ಕೆಲ ರಾಜ್ಯಗಳು ಬೇರೆ ಬೇರೆ ಜಿಲ್ಲಾ ಕೇಂದ್ರಗಳಲ್ಲೂ ಅಭಿಯಾನ ನಡೆಸುವುದಾಗಿ ಹೇಳಿವೆ. ಮಹಾರಾಷ್ಟ್ರ, ಕೇರಳದಂತಹ ರಾಜ್ಯಗಳು ತಮ್ಮ ರಾಜಧಾನಿಯಲ್ಲಿ ಮಾತ್ರವಲ್ಲದೆ ಇತರ ಕೆಲ ಪ್ರಮುಖ ನಗರಗಳಲ್ಲೂ ಅಣಕು ಅಭಿಯಾನ ನಡೆಸಲಿವೆ ಎಂದು ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ.

ದೇಶದಲ್ಲಿ ಕೊರೋನಾ ಹರಡದಂತೆ ತಡೆಯುವ ಲಸಿಕೆಗೆ ಒಪ್ಪಿಗೆ ನೀಡುವ ಸಮಯ ಸನ್ನಿಹಿತವಾಗಿದ್ದು, ಅದರ ಬೆನ್ನಲ್ಲೇ ಲಸಿಕೆ ವಿತರಣೆಗೆ ರೂಪಿಸಲಾದ ವ್ಯವಸ್ಥೆ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಪರೀಕ್ಷಿಸಲು ಡಿ.28 ಹಾಗೂ 29ರಂದು ಆಂಧ್ರಪ್ರದೇಶ, ಅಸ್ಸಾಂ, ಗುಜರಾತ್ ಮತ್ತು ಪಂಜಾಬ್‌ನಲ್ಲಿ ಅಣಕು ಅಭಿಯಾನ ನಡೆದಿತ್ತು. ಅಲ್ಲಿ ಸಣ್ಣಪುಟ್ಟ ತೊಂದರೆಗಳಷ್ಟೇ ತಲೆದೋರಿದ್ದು, ಅಭಿಯಾನ ಯಶಸ್ವಿಯಾಗಿದೆ. ಹೀಗಾಗಿ ದೇಶಾದ್ಯಂತ ಪರಿಶೀಲನೆ ನಡೆಸಲು ಕೇಂದ್ರ ಸರ್ಕಾರ ಮುಂದಾಗಿದೆ.

ರಾಜಧಾನಿಯ ಪ್ರತಿ ಲಸಿಕಾ ಕೇಂದ್ರಕ್ಕೂ ಕನಿಷ್ಠ 25 ಆರೋಗ್ಯ ಕಾರ್ಯಕರ್ತರನ್ನು ಕೋ-ವಿನ್ ಅಪ್ಲಿಕೇಷನ್ ಮೂಲಕ ಲಸಿಕೆ ಪಡೆಯಲು ನೋಂದಣಿ ಮಾಡಿಸಬೇಕು. ನಂತರ ಅವರಿಗೆ ಆ್ಯಪ್‌ನಲ್ಲೇ ಸಮಯ ನೀಡಿ ಲಸಿಕೆ ಕೇಂದ್ರಕ್ಕೆ ಕರೆಸಿಕೊಳ್ಳಬೇಕು. ಆ ಮಾಹಿತಿಯನ್ನು ಮತ್ತೆ ಆ್ಯಪ್‌ಗೆ ಅಪ್‌ಲೋಡ್ ಮಾಡಬೇಕು ಎಂದು ಸಚಿವಾಲಯ ಸೂಚಿಸಿದೆ.



### ಲಸಿಕೆ ವಿತರಣೆಗೆ ರೆಡಿ

**96000** ಮಂದಿ
ಲಸಿಕೆ ವಿತರಕರಿಗೆ ಇಲ್ಲಿಯವರೆಗೆ ತರಬೇತಿ

**2360** ಜನರು
ನ್ಯಾಷನಲ್ ಟ್ರೇನಿಂಗ್ ಆಫ್ ಟ್ರೇನರ್ಸ್‌ನಲ್ಲಿ ತರಬೇತಿ

**57000** ಮಂದಿ
ಆರೋಗ್ಯ ಸಿಬ್ಬಂದಿಗೆ ಜಿಲ್ಲಾ ಮಟ್ಟದಲ್ಲಿ ತರಬೇತಿ

**719** ಜಿಲ್ಲೆಗಳು
ಕೊರೋನಾ ಲಸಿಕೆ ವಿತರಣೆಗೆ ಸಿದ್ಧವಾಗಿರುವ ಜಿಲ್ಲೆಗಳು

**25** ಮಂದಿ
ಆರೋಗ್ಯ ಕಾರ್ಯಕರ್ತರನ್ನು ಕೋವಿನ್ ಆ್ಯಪ್‌ನಲ್ಲಿ ಲಸಿಕೆಗೆ ನೋಂದಣಿ ಮಾಡುವ ಗುರಿ

## ಹೊಸ ವರ್ಷಕ್ಕೆ ಕೊರೋನಾ ಲಸಿಕೆ ಸುಳಿವು

**ನವದೆಹಲಿ:** ಜ.1ರಂದು ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ)ಯ ತಜ್ಞರ ಸಮಿತಿ ಕೊರೋನಾ ಲಸಿಕೆಯ ಪರಾಮರ್ಶೆ ನಡೆಸಲು ಸಭೆ ನಡೆಸುವುದು ನಿಗದಿಯಾಗಿದ್ದು, ಅದರ ಬೆನ್ನಲ್ಲೇ ಹೊಸ ವರ್ಷಕ್ಕೆ ನಮಗೆ ಲಸಿಕೆ ಸಿಗಲಿದೆ ಎಂಬ ಸುಳಿವನ್ನು ಔಷಧ ಮಹಾನಿಯಂತ್ರಕ (ಡಿಸಿಜಿಐ) ವಿ.ಜಿ.ಸೋಮಾನಿ ನೀಡಿದ್ದಾರೆ. ವೆಬಿನಾರ್ ಒಂದರಲ್ಲಿ ಮಾತನಾಡಿದ ಅವರು, 'ಬಹುಶಃ ನಮಗೆ ಈ ವರ್ಷ ಅತ್ಯಂತ ಸಂತೋಷದ ಹೊಸ ವರ್ಷವಾಗಲಿದೆ. ಇಷ್ಟು ಸುಳಿವನ್ನು ಮಾತ್ರ ನಾನು ನೀಡಬಲ್ಲೆ' ಎಂದು ಹೇಳಿದರು. ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ತನ್ನ ಕೋವಿಶೀಲ್ಡ್ ಲಸಿಕೆಗೆ, ಹೈದರಾಬಾದ್‌ನ ಭಾರತ್ ಬಯೋಟೆಕ್ ಸಂಸ್ಥೆ ತನ್ನ ಕೋವ್ಯಾಕ್ಸಿನ್ ಲಸಿಕೆಗೆ ಹಾಗೂ ಅಮೆರಿಕದ ಫೈಝರ್ ಕಂಪನಿ ತನ್ನ ಕೊರೋನಾ ಲಸಿಕೆಗೆ ತುರ್ತು ಅನುಮತಿ ನೀಡುವಂತೆ ಡಿಸಿಜಿಐಗೆ ಮನವಿ ಸಲ್ಲಿಸಿವೆ.

## ದೇಶದ ಇನ್ನೂ ಐವರಲ್ಲಿ ಬ್ರಿಟನ್ ಹೈಸ್ಪೀಡ್ ವೈರಸ್

### ರೂಪಾಂತರಿ ವೈರಸ್ ಪೀಡಿತರ ಸಂಖ್ಯೆ 25ಕ್ಕೇರಿಕೆ

**ನವದೆಹಲಿ:** ಬ್ರಿಟನ್‌ನಿಂದ ಭಾರತಕ್ಕೆ ಆಗಮಿಸಿರುವ ಪ್ರಯಾಣಿಕರ ಪೈಕಿ ಮತ್ತೆ ಐವರಿಗೆ ಗುರುವಾರ ರೂಪಾಂತರಿ ಕೊರೋನಾ ವೈರಸ್ ದೃಢಪಟ್ಟಿದೆ. ಈ ಮೂಲಕ ಮಂಗಳವಾರ ಮತ್ತು ಬುಧವಾರ ಹೊಸ ತಳಿಯ ಸೋಂಕು ಪತ್ತೆಯಾಗಿದ್ದ 20 ಮಂದಿಯೂ ಸೇರಿದಂತೆ ದೇಶದಲ್ಲಿ ಬ್ರಿಟನ್ ರೂಪಾಂತರಿ ಕೊರೋನಾ ಸೋಂಕು ತಗುಲಿದವರ ಸಂಖ್ಯೆ 25ಕ್ಕೆ ಏರಿಕೆಯಾಗಿದೆ. ಈ ಎಲ್ಲಾ 25 ಮಂದಿಯನ್ನೂ ಕ್ವಾರಂಟೈನ್‌ನಲ್ಲಿ ಇಡಲಾಗಿದ್ದು, ಇವರ ಸಂಪರ್ಕಕ್ಕೆ ಬಂದವರನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಯಲ್ಲಿ 4 ಮತ್ತು ದೆಹಲಿಯ ಇನ್‌ಸ್ಟಿಟ್ಯೂಟ್ ಆಫ್ ಜೀನಾಮಿಕ್ಸ್ ಅಂಡ್ ಇಂಟಿಗ್ರೇಟಿವ್ ಬಯಾಲಜಿ (ಐಜಿಐಬಿ)ಯಲ್ಲಿ ಒಂದು ಬ್ರಿಟನ್‌ನ ರೂಪಾಂತರಿ ವೈರಸ್ ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಬ್ರಿಟನ್‌ನಿಂದ ಬಂದ ಸುಮಾರು 30 ಸಾವಿರಕ್ಕೂ ಹೆಚ್ಚು ಪ್ರಯಾಣಿಕರ ಮೇಲೆ ರಾಜ್ಯ ಸರ್ಕಾರಗಳು ತೀವ್ರ ನಿಗಾ ಇರಿಸಿವೆ. ಬ್ರಿಟನ್‌ನ ಹೈಸ್ಪೀಡ್ ಕೊರೋನಾ ವೈರಸ್ ಈಗಾಗಲೇ ಭಾರತ, ಡೆನ್ಮಾರ್ಕ್, ನೆದರ್ಲೆಂಡ್, ಆಸ್ಟ್ರೇಲಿಯಾ, ಸ್ವೀಡನ್, ಸ್ಪೇನ್, ಜರ್ಮನಿ, ಕೆನಡಾ, ಜಪಾನ್, ಸಿಂಗಾಪುರ ಮತ್ತಿತರ ದೇಶಗಳಲ್ಲಿ ಪತ್ತೆಯಾಗಿದೆ.

VK
ವಿಜಯ ಕರ್ನಾಟಕ

# ರಂಗೇರದ ನಿಶೆ, ರಸ್ತೆಯಲ್ಲಿಲ್ಲ ನಶೆ

## ಕುಣಿದು ಕುಪ್ಪಳಿಸುತ್ತಿದ್ದ ಎಂ.ಜಿ, ಬ್ರಿಗೇಡ್ ರಸ್ತೆಯಲ್ಲಿ ಮಂಕು | ವಾಹನ ಸಂಚಾರಕ್ಕೆ ನಿರ್ಬಂಧ



ಬ್ರಿಗೇಡ್ ರಸ್ತೆ ಬಳಿ ಪೊಲೀಸರ ಬಂದೋಬಸ್ತ್.

### ಬಾರ್‌ಗಳಲ್ಲಿ ಪಾರ್ಸೆಲ್ ಹೆಚ್ಚಳ

ಹೊಸ ವರ್ಷದ ವೇಳೆ ಮದ್ಯಪಾನ ಮಾಡುವ ಪ್ರಮಾಣ ಹೆಚ್ಚಾಗಿರುತ್ತದೆ. ಆದರೆ ಈ ಬಾರಿ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳ ಅವಧಿ ವಿಸ್ತರಣೆ ಆಗಿಲ್ಲ. ವಿಶೇಷ ಕಾರ್ಯಕ್ರಮಗಳು ಕೂಡ ಇಲ್ಲದ ಕಾರಣ ಜನರು ಬಾರ್, ಎಂಆರ್‌ಪಿಗಳಿಗೆ ತೆರಳಿ ಮದ್ಯ ಖರೀದಿಸಿ ಮನೆ, ರೂಂಗಳಿಗೆ ತೆಗೆದುಕೊಂಡು ಹೋಗಿ ಪಾರ್ಟಿ ಮಾಡಿದರು. ಹೊಸ ವರ್ಷದ ಬಹುತೇಕ ಪಾರ್ಟಿಗಳು, ಕುಟುಂಬ, ಸ್ನೇಹಿತರು, ಅಪಾರ್ಟ್‌ಮೆಂಟ್ ಮತ್ತು ಕಟ್ಟಡ ನಿವಾಸಿಗಳ ಗುಂಪುಗಳ ನಡುವೆ ನಡೆದವು. ಸಾಕಷ್ಟು ಕಟ್ಟುನಿಟ್ಟಿನ ಕ್ರಮಗಳ ನಡುವೆಯೂ ಕೆಲವು ಅಪಾರ್ಟ್‌ಮೆಂಟ್ ನಿವಾಸಿಗಳು ಗುಂಪು ಸೇರಿ ಹೊಸ ವರ್ಷದ ಕಾರ್ಯಕ್ರಮಗಳನ್ನು ನಡೆಸಿ ಸಂಭ್ರಮಿಸಿದರು.







ಥಳುಕಿಲ್ಲದೆ ಮಂಕಾಗಿದ್ದ ಎಂ.ಜಿ. ರಸ್ತೆಯ ಸುತ್ತಮುತ್ತಲಿನ ದೃಶ್ಯಗಳು.

### ಕ್ಲಬ್, ಪಬ್‌ಗಳು ಭರ್ತಿ

ಕೋವಿಡ್ ಸುರಕ್ಷತಾ ಕ್ರಮಗಳೊಂದಿಗೆ ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್ ತೆರೆದಿರಲು ಅನುಮತಿ ಇತ್ತು. ಹೀಗಾಗಿ, ನಗರದ ಬಹುತೇಕ ಪಬ್ ಮತ್ತು ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಗ್ರಾಹಕರು ತಮ್ಮ ಸ್ನೇಹಿತರು, ಸಂಬಂಧಿಕರ ಜೊತೆ ಹೊಸ ವರ್ಷದ ಪಾರ್ಟಿ ಮಾಡಿ ಖುಷಿ ಪಟ್ಟರು.

■ **ವಿಕ ಸುದ್ದಿಲೋಕ** ಬೆಂಗಳೂರು

ಯುವಕ- ಯುವತಿಯರೂ ಸೇರಿದಂತೆ ಹೊಸ ವರ್ಷಾಚರಣೆಗೆ ಸಾವಿರಾರು ಉತ್ಸಾಹಿಗಳಿಂದ ತುಂಬಿ ತುಳುಕುತ್ತಿದ್ದ, ವಿದ್ಯುದ್ದೀಪಗಳಿಂದ ಝಗಮಗಿಸುತ್ತಿದ್ದ ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್ ಸೇರಿದಂತೆ ಸುತ್ತಲಿನ ಪ್ರದೇಶಗಳು ಹೊಸ ವರ್ಷದ ರಾತ್ರಿ ಸಪ್ಪೆಯಾಗಿದ್ದವು. ಆದರೆ, ನಗರದ ಉಳಿದೆಡೆ ನಿಗದಿತ ಗ್ರಾಹಕರೊಂದಿಗೆ ಕ್ಲಬ್, ಪಬ್, ರೆಸ್ಟೋರೆಂಟ್‌ಗಳು ಗ್ರಾಹಕರಿಂದ ತುಂಬಿದ್ದವು.

ಕೋವಿಡ್-19 ಭೀತಿ, ನಾಗರಿಕರ ಸುರಕ್ಷತೆಗಾಗಿ ಕೇಂದ್ರ ಮತ್ತು ರಾಜ್ಯ

### ಹೊಸ ವರ್ಷದ ಸಂಭ್ರಮದ ಇತಿಹಾಸದಲ್ಲೇ ಮೊದಲ ಬಾರಿ ಸಪ್ಪೆಯಾಯ್ತು ಎಂ.ಜಿ. ರಸ್ತೆ

ಸರಕಾರದ ಮಾರ್ಗಸೂಚಿ, ಪೊಲೀಸರಿಂದ ನಿಷೇಧಾಜ್ಞೆ ಮುಂತಾದ ಕ್ರಮಗಳಿಂದ ಹೊಸ ವರ್ಷದ ಕೇಂದ್ರ ಸ್ಥಾನ ಬ್ರಿಗೇಡ್ ರಸ್ತೆ ಜಂಕ್ಷನ್‌ನಲ್ಲಿ ಅತ್ಯಂತ ಕಡಿಮೆ ಜನ ಓಡಾಡುತ್ತಿದ್ದರು. ಜನರಿಗಿಂತ ಪೊಲೀಸರು, ಗೃಹ ರಕ್ಷಕ ಸಿಬ್ಬಂದಿ ಸಂಖ್ಯೆಯೇ ಹೆಚ್ಚಾಗಿತ್ತು. ಎಂ.ಜಿ.ರಸ್ತೆ ಸುತ್ತಲಿನ ಏಳು ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಿ ಬ್ಯಾರಿಕೇಡ್ ಹಾಕಲಾಗಿದ್ದು, ಹೋಟೆಲ್,

### ರಸ್ತೆಗಳಲ್ಲಿದ್ದರು ಜನರಿಗಿಂತ ಪೊಲೀಸರೇ ಹೆಚ್ಚು

ಪಬ್, ರೆಸ್ಟೋರೆಂಟ್‌ಗಳಿಗೆ ತೆರಳುವವರಿಗೆ ಅವರ ಬುಕ್ಕಿಂಗ್ ನೋಡಿ ಒಳಗೆ ಬಿಡಲಾಗುತ್ತಿತ್ತು. ಇದರಿಂದ ಬೆಂಗಳೂರು ನಗರದ ಇತಿಹಾಸದಲ್ಲೇ ಮೊದಲ ಬಾರಿಗೆ ಎಂ.ಜಿ. ರಸ್ತೆಯಲ್ಲಿ ಹೊಸ ವರ್ಷದ ಸಂಭ್ರಮ ಮಂಕಾಗಿತ್ತು.

**ನಗರದ ವಿವಿಧೆಡೆ ಸಂಭ್ರಮ**: ವಿಶೇಷವಾಗಿ ಗುಂಪು ಸೇರುವಿಕೆ, ಡಿಜೆ ನೈಟ್ ಮತ್ತು ಹೊಸ ವರ್ಷದ ರಾತ್ರಿ ವಿಶೇಷ ಕಾರ್ಯಕ್ರಮಗಳಿಗೆ

### ನಿಗದಿತ ಗ್ರಾಹಕರೊಂದಿಗೆ ತುಂಬಿದ್ದ ಕ್ಲಬ್, ಪಬ್

ಅವಕಾಶ ಇರಲಿಲ್ಲ. ಆದರೆ, ರೆಸ್ಟೋರೆಂಟ್‌ಗಳಲ್ಲಿ ಕುಳಿತು ಆಹಾರ, ಪಾನೀಯ ಸೇವನೆಗೆ ಅವಕಾಶ ಕಲ್ಪಿಸಿದ್ದ ಕಾರಣ ಕಡಿಮೆ ಸಂಖ್ಯೆಯ ಗ್ರಾಹಕರು ಇದ್ದರು. ಸಾಕಷ್ಟು ಕಡೆಗಳಲ್ಲಿ ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಇರುವಷ್ಟು ಸೀಟ್ ಕೂಡ ಭರ್ತಿಯಾಗಿರಲಿಲ್ಲ, ಪ್ರತಿ ವರ್ಷ ಸೀಟ್‌ಗಳು ಸಿಗದೆ ಜನರು ಸರತಿಯ ಸಾಲಿನಲ್ಲಿ ನಿಲ್ಲುತ್ತಿದ್ದರು. ಆದರೆ, ಕೋವಿಡ್ ಕಾರಣದಿಂದ ಎಲ್ಲವೂ ಬದಲಾಗಿದೆ.

### ಬಿಗಿ ಪೊಲೀಸ್ ಬಂದೋಬಸ್ತ್

ನಗರದ 200ಕ್ಕೂ ಹೆಚ್ಚು ಸ್ಥಳಗಳಲ್ಲಿ ಸಂಚಾರ, ಕಾನೂನು ಮತ್ತು ಸುವ್ಯವಸ್ಥೆ ಪೊಲೀಸರು ಬ್ಯಾರಿಕೇಡ್ ಹಾಕಿಕೊಂಡು ತಪಾಸಣೆ ನಡೆಸುತ್ತಿದ್ದರು. ವಾಹನ ಚಾಲಕರಿಂದ ನಿರ್ಲಕ್ಷ್ಯತನದ ಚಾಲನೆ, ಡ್ರಂಕ್ ಆ್ಯಂಡ್ ಡ್ರೈವ್ ತಪಾಸಣೆ ನಡೆಸಲಾಗುತ್ತಿತ್ತು. ಅನುಮಾನ ಬಂದ ವಾಹನ ಸವಾರರು, ಚಾಲಕರನ್ನು ಪೊಲೀಸರು ವೈದ್ಯಕೀಯ ತಪಾಸಣೆಗೆ ಒಳಪಡಿಸಿದರು. ನಗರದ ಪ್ರಮುಖ 44 ಫ್ಲೈಓವರ್‌ಗಳ ಮೇಲೆ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಳಿಸಲಾಗಿತ್ತು.

VK ವಿಜಯ ಕರ್ನಾಟಕ

# ಸೋಂಕಿತೆಯ ತಂದೆಗೂ ಕೊರೊನಾ

**ಬೆಂಗಳೂರು:** ಬ್ರಿಟನ್ ರೂಪಾಂತರ ಕೊರೊನಾ ಸೋಂಕು ಬಾಧಿತ ಮಹಿಳೆಯ ತಂದೆಗೂ ಸಾಮಾನ್ಯ ಕೋವಿಡ್ ತಗಲಿರುವುದು ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ದೃಢಪಟ್ಟಿದೆ. ಹೀಗಾಗಿ, ಅವರ ಗಂಟಲು ದ್ರವದ ಮಾದರಿಯನ್ನು ನಿಮ್ಹಾನ್ಸ್‌ಗೆ ಕಳುಹಿಸಲಾಗಿದೆ.

ಇಂಗ್ಲೆಂಡ್‌ನಿಂದ ನಗರಕ್ಕೆ ಮರಳಿ ವಸಂತಪುರ ವಾರ್ಡ್‌ನ ವಿಠ್ಠಲನಗರದ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದ ತಾಯಿ ಮತ್ತು ಮಗುವಿಗೆ ರೂಪಾಂತರ ಸೋಂಕು ತಗಲಿತ್ತು. ಆದ ಕಾರಣ, ಬಿಬಿಎಂಪಿ ಅಧಿಕಾರಿಗಳು ಅಪಾರ್ಟ್‌ಮೆಂಟ್ ಅನ್ನು ಸೀಲ್‌ಡೌನ್ ಮಾಡಿ, ಅಲ್ಲಿದ್ದ ಎಲ್ಲ 37 ನಿವಾಸಿಗಳನ್ನು ಕ್ವಾರಂಟೈನ್‌ಗೆ ಒಳಪಡಿಸಿದ್ದರು. ಆನಂತರ ಎಲ್ಲರಿಗೂ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಲಾಗಿತ್ತು . ರೂಪಾಂತರ ಸೋಂಕಿತ ಮಹಿಳೆಯೊಂದಿಗೆ ವಾಸವಿದ್ದ ಅವರ ತಂದೆಗೆ ಸಾಮಾನ್ಯ ಕೋವಿಡ್ ತಗಲಿದೆ. ಉಳಿದ ಎಲ್ಲ ನಿವಾಸಿಗಳ ಪರೀಕ್ಷಾ ವರದಿಯು ನೆಗೆಟಿವ್ ಬಂದಿದೆ ಎಂದು ಪಾಲಿಕೆಯ ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತ ರಾಮಕೃಷ್ಣ ತಿಳಿಸಿದರು.

VK
ವಿಜಯ ಕರ್ನಾಟಕ

ಒಂದೇದಿನ ದೇಶಾದ್ಯಂತ ಟ್ರಯಲ್ | ವಾಹನ ಸಂಚಾರ ಸವಾಲಾಗಿರುವ ಜಿಲ್ಲೆಗಳಿಗೆ ಆದ್ಯತೆ

# ನಾಳೆ ಎಲ್ಲ ರಾಜ್ಯಗಳಲ್ಲೂ ಲಸಿಕೆ ತಾಲೀಮು

**ಹೊಸದಿಲ್ಲಿ:** ನಾಲ್ಕು ರಾಜ್ಯಗಳಲ್ಲಿ ಕೊರೊನಾ ನಿಯಂತ್ರಣ ಲಸಿಕೆ ಸಂಗ್ರಹ ಮತ್ತು ಹಂಚಿಕೆ ವ್ಯವಸ್ಥೆಯ ತಾಲೀಮು (ಡ್ರೈ ರನ್) ಯಶಸ್ವಿಯಾದ ಬೆನ್ನಿಗೇ ದೇಶಾದ್ಯಂತ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಜನವರಿ 2ರಂದು ಲಸಿಕೆ ಹಂಚಿಕೆ ಪ್ರಯೋಗ ನಡೆಸಲು ಸಿದ್ಧತೆ ನಡೆದಿದೆ. ಈ ಬಗ್ಗೆ ಕೇಂದ್ರ ಆರೋಗ್ಯ ಸಚಿವಾಲಯ ಗುರುವಾರ ಅಧಿಕೃತ ಘೋಷಣೆ ಹೊರಡಿಸಿದ್ದು, ಸಾರಿಗೆಗೆ ಸವಾಲಾಗಿರುವ ಗುಡ್ಡಗಾಡು ಪ್ರದೇಶಗಳಲ್ಲಿ ಕೂಡ ಲಸಿಕೆ ಹಂಚಿಕೆ ಪ್ರಯೋಗದ ಭಾಗವಾಗಿಸಿಕೊಳ್ಳಲು ರಾಜ್ಯ ಸರಕಾರಗಳಿಗೆ ಕೇಂದ್ರ ನಿರ್ದೇಶನ ನೀಡಿದೆ. ಜತೆಗೆ ಪ್ರತಿ ರಾಜ್ಯದಲ್ಲಿ ಮೂರು 'ಮಾದರಿ ಲಸಿಕೆ ನೀಡುವ ಕೇಂದ್ರ'ಗಳ ಸ್ಥಾಪನೆಗೂ ಸೂಚಿಸಲಾಗಿದೆ.

ಲಸಿಕೆ ದಾಸ್ತಾನು ಮತ್ತು ಹಂಚಿಕೆಯ ಜತೆಗೆ ರಿಯಲ್‌ಟೈಮ್ ಲಸಿಕೆ ಲಭ್ಯತೆ ಬಗ್ಗೆ ಮಾಹಿತಿ ಹಂಚಿಕೊಳ್ಳಲು ರೂಪಿಸಲಾಗಿರುವ ಆನ್‌ಲೈನ್ ವೇದಿಕೆ 'ಕೋ-ವಿನ್' ಬಳಕೆಯ ಬಗ್ಗೆಯೂ ಪ್ರಯೋಗ ನಡೆಯಲಿದೆ. ಕೊರೊನಾ ಲಸಿಕೆ ಪರಿಪೂರ್ಣವಾಗಿ ಸಿದ್ಧಗೊಂಡು ಸಾರ್ವಜನಿಕ ಬಳಕೆಗೆ ದೇಶಾದ್ಯಂತ ಹಂಚಿಕೆ ಪ್ರಕ್ರಿಯೆ ಆರಂಭವಾದಾಗ ಲೋಪದೋಷಗಳು ಆಗದಂತೆ ಮತ್ತು ಮುನ್ನೆಚ್ಚರಿಕೆ ಸಮೇತ ಸರಾಗವಾಗಿ ಪ್ರತಿಯೊಬ್ಬರಿಗೂ ಲಸಿಕೆ ದೊರೆಯುವಂತೆ ಮಾಡಲು ಕೇಂದ್ರ ಸರಕಾರ ಈ ಪ್ರಾಯೋಗಿಕ ಪರಿಶೀಲನೆ ಕಾರ್ಯವನ್ನು ಎಲ್ಲ ರಾಜ್ಯಗಳಲ್ಲಿ ಹಮ್ಮಿಕೊಂಡಿದೆ. ಈ ಸಂಬಂಧ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಗುರುವಾರ ಎಲ್ಲ ರಾಜ್ಯಗಳ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಉನ್ನತ ಮಟ್ಟದ ಸಭೆ ನಡೆಸಿದ್ದಾರೆ.

ದೇಶದಲ್ಲಿ ಮೊಟ್ಟಮೊದಲ ಡ್ರೈ ರನ್ ಡಿ.28 ಹಾಗೂ 29 ರಂದು ಅಸ್ಸಾಂ, ಗುಜರಾತ್, ಪಂಜಾಬ್, ಆಂಧ್ರಪ್ರದೇಶಗಳಲ್ಲಿ ನಡೆಸಲಾಗಿತ್ತು. ಪ್ರತಿ ರಾಜ್ಯದಲ್ಲಿನ ತಲಾ ಎರಡು ಜಿಲ್ಲೆಗಳ ಐದು ಕೇಂದ್ರಗಳಲ್ಲಿ ನಡೆಸಲಾದ ಪ್ರಯೋಗ ಯಶಸ್ವಿಯಾಗಿತ್ತು.



**96000**
ಲಸಿಕೆ ನೀಡುವವರಿಗೆ ಈಗಾಗಲೇ ಕೇಂದ್ರದಿಂದ ತರಬೇತಿ ನೀಡಲಾಗಿದೆ

**57000**
719 ಜಿಲ್ಲೆಗಳಲ್ಲಿನ ಕಾರ್ಯಪಡೆ ತಂಡಗಳಿಗೆ ರಾಷ್ಟ್ರೀಯ ತರಬೇತುದಾರರ ಕೇಂದ್ರದಿಂದ ತರಬೇತಿ

**1075/104**
ಸಹಾಯವಾಣಿಗಳನ್ನು ಲಸಿಕೆ/ಕೋ-ವಿನ್ ಸಂಬಂಧಿತ ಸಮಸ್ಯೆ ಪರಿಹಾರಕ್ಕೆ ಬಳಕೆಗೆ ಸಿದ್ಧತೆ

**36000**
ವೆಂಟಿಲೇಟರ್‌ಗಳನ್ನು ದೇಶಾದ್ಯಂತ ಸರಕಾರಿ ಆಸ್ಪತ್ರೆಗಳಿಗೆ ಕೇಂದ್ರ ಹಂಚಿದೆ, ಎಲ್ಲವೂ ದೇಶೀಯ ನಿರ್ಮಿತ

## ಪ್ರಯೋಗ ಹೀಗಿರಲಿದೆ

- ಸಾರಿಗೆ ವ್ಯವಸ್ಥೆ, ಲಸಿಕೆ ಸಂಗ್ರಹ, ಇಂಟರ್‌ನೆಟ್, ವಿದ್ಯುತ್-ನೀರಿನ ಸಂಪರ್ಕದ ಪೂರ್ವ ಪರಿಶೀಲನೆ
- ಇಂಥ ಸುಸಜ್ಜಿತ ಸ್ಥಳಗಳಲ್ಲಿ ಮೂರು 'ಮಾದರಿ ಲಸಿಕೆ ನೀಡುವ ಕೇಂದ್ರ'ಗಳ ರಚನೆ, ಇದಕ್ಕೆ ವೈದ್ಯಾಧಿಕಾರಿಗಳ ನೇತೃತ್ವ
- ಕನಿಷ್ಠ 25 ಲಸಿಕೆ ಫಲಾನುಭವಿಗಳ ಗುರುತಿಸುವಿಕೆ, ಅವರಿಗೆ ಮಾಹಿತಿ ನೀಡುವಿಕೆ
- ಲಸಿಕೆ ಸುರಕ್ಷತೆ ಬಗ್ಗೆ ಎಲ್ಲ ಕೇಂದ್ರಗಳ ಹೊರಗೆ ಮಾಹಿತಿ ಬಿತ್ತರ
- ಲಸಿಕೆ ದಾಸ್ತಾನು, ಹಂಚಿಕೆ ವೇಳೆ ವಹಿಸಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ರಾಜ್ಯ ಕಾರ್ಯಪಡೆ ತಂಡಗಳಿಗೆ ತರಬೇತಿ
- ಶೀತಲ ಸಂಗ್ರಹಾಗಾರಗಳ ಸಾಮರ್ಥ್ಯ, ಕಾರ್ಯಶೈಲಿ ಬಗ್ಗೆಯೂ ತಂಡಗಳಿಗೆ ಮಾಹಿತಿ
- ಲಸಿಕೆಯನ್ನು ಶೈತ್ಯಾಗಾರಗಳಿಂದ, ಹಂಚಿಕೆ, ತದನಂತರ ಲಸಿಕೆ ನೀಡುವ ಕೇಂದ್ರಗಳಿಗೆ ತೆಗದುಕೊಂಡು ಒಯ್ಯುವವರೆಗೆ ಎದುರಾಗುವ ಸವಾಲುಗಳ ಅಧ್ಯಯನ
- ಈ ಬಗ್ಗೆ ಕೂಲಂಕಷ ವರದಿಯನ್ನು ಕೇಂದ್ರ ಆರೋಗ್ಯ ಸಚಿವಾಲಯ ಸಲ್ಲಿಕೆ

## ಲಸಿಕೆ ಹಂಚಿಕೆ ಸಂವಹನ ಕಾರ್ಯತಂತ್ರ ಬಿಡುಗಡೆ

ದೇಶಾದ್ಯಂತ ಲಸಿಕೆ ವಿತರಣೆ ಆರಂಭಿಸುವ ತಾಲೀಮನ್ನು ಕೇಂದ್ರ ಸರಕಾರ ಹಮ್ಮಿಕೊಂಡಿರುವ ನಡುವೆಯೇ ಲಸಿಕೆ ಹಂಚಿಕೆ ಸಂಬಂಧ ಪಾಲಿಸಬೇಕಾದ ಸಂವಹನ ಕಾರ್ಯತಂತ್ರವನ್ನು ಆರೋಗ್ಯ ಸಚಿವಾಲಯ ಬಿಡುಗಡೆಗೊಳಿಸಿದೆ. 88 ಪುಟಗಳ ಈ ಕಾರ್ಯಸೂಚಿಯಲ್ಲಿ ರಾಷ್ಟ್ರೀಯ, ರಾಜ್ಯ, ಜಿಲ್ಲಾ ಮಟ್ಟದಲ್ಲಿ ಲಸಿಕೆ ವಿತರಣೆ ಬಗ್ಗೆ ಆರೋಗ್ಯಾಧಿಕಾರಿಗಳು ಪಾಲಿಸಬೇಕಾದ ನಿಯಮಗಳನ್ನು ಒಳಗೊಂಡಿದೆ. ಜತೆಗೆ ಪರಸ್ಪರರು ಲಸಿಕೆ ಹಂಚಿಕೆ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಬೇಕಿರುವ ರೀತಿಯನ್ನು ಕೂಡ ವಿವರಿಸಿದೆ. ಯಾರೊಬ್ಬರೂ ಕೂಡ ಲಸಿಕೆ ಪಡೆಯುವುದರಿಂದ ವಂಚಿತರಾಗದಂತೆ ಹಾಗೂ ಲಸಿಕೆಗಳ ಕೊರತೆ ಉಂಟಾಗದಂತೆ ಪಾಲಿಸಬೇಕಾದ ಎಚ್ಚರಿಕೆಗಳನ್ನು ಕೂಡ ಸಚಿವಾಲಯ ನೀಡಿದೆ. ಲಸಿಕೆ ಬಗ್ಗೆ ಜನಮಾನಸದಲ್ಲಿ ಅವಿಶ್ವಾಸ, ಅಡ್ಡಪರಿಣಾಮಗಳು, ಅನಗತ್ಯ ಗೊಂದಲ ಮೂಡದಂತೆ ಸುಳ್ಳು ಸುದ್ದಿಗಳಿಗೆ ಅಂಕುಶ ಹಾಕುವ ಬಗ್ಗೆಯೂ ಕಾರ್ಯಸೂಚಿಯಲ್ಲಿ ವಿವರಿಸಲಾಗಿದೆ. ತಜ್ಞರಿಂದ ಲಸಿಕೆ ಪಡೆಯುವ ಬಗ್ಗೆ ಸುರಕ್ಷತೆಯ ಖಾತ್ರಿ, ಮಾಧ್ಯಮಗಳಲ್ಲಿ ಲಸಿಕೆಯ ಗುಣಮಟ್ಟ ಹಾಗೂ ಸುರಕ್ಷತೆ ಬಗ್ಗೆ ಪ್ರಚಾರ ಮತ್ತು ಧಾರ್ಮಿಕ ಹಾಗೂ ಸಮುದಾಯಗಳ ಮುಖಂಡರಿಂದಲೂ ಲಸಿಕೆಯ ಬಗ್ಗೆ ವಿಶ್ವಾಸಾರ್ಹತೆ ಮೂಡಿಸುವ ಯತ್ನ ಎಂಬ ತ್ರಿಸೂತ್ರ ಪಾಲಿಸಲು ಸಚಿವಾಲಯ ರಾಜ್ಯಗಳಿಗೆ ಸೂಚಿಸಿದೆ.

VK
ವಿಜಯ ಕರ್ನಾಟಕ

# ನಾಮಕರಣ ನಿರ್ಣಯ ರದ್ದು ಕೋರಿ ಪ್ರಸ್ತಾವ

**ವಿಕ ಸುದ್ದಿಲೋಕ** ಬೆಂಗಳೂರು

ಬಿಬಿಎಂಪಿಯ ಪಾದರಾಯನಪುರ ವಾರ್ಡ್‌ನ 11 ಅಡ್ಡರಸ್ತೆ, ಮುಖ್ಯ ರಸ್ತೆಗಳಿಗೆ ಹೊಸದಾಗಿ ಹಲವರ ಹೆಸರು ನಾಮಕರಣ ಮಾಡಲು ಕೈಗೊಂಡಿದ್ದ ನಿರ್ಣಯವನ್ನು ರದ್ದುಪಡಿಸುವಂತೆ ಕೋರಿ ಆಯುಕ್ತ ಎನ್.ಮಂಜುನಾಥ ಪ್ರಸಾದ್, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ ಪ್ರಸ್ತಾವ ಸಲ್ಲಿಸಿದ್ದಾರೆ.

ಪಾದರಾಯನಪುರ ವಾರ್ಡ್ ವ್ಯಾಪ್ತಿಯ 9 ರಸ್ತೆಗಳು, ಎರಡು ವೃತ್ತಗಳಿಗೆ ಮುಸ್ಲಿಂ ಸಮುದಾಯದ ಸಮಾಜಸೇವಕರ ಹೆಸರನ್ನು ನಾಮಕರಣ ಮಾಡುವ ಸಂಬಂಧ ಸೆ. 8ರಂದು ಪಾಲಿಕೆಯ ಕೌನ್ಸಿಲ್ ಸಭೆ ನಿರ್ಣಯ ಕೈಗೊಂಡಿತ್ತು. ಈ ಹಿನ್ನೆಲೆಯಲ್ಲಿ ಆಕ್ಷೇಪಣೆ, ಸಲಹೆಗಳನ್ನು ಆಹ್ವಾನಿಸಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿತ್ತು . ಇದಕ್ಕೆ ಸಂಸದರಾದ ಅನಂತ ಕುಮಾರ್ ಹೆಗಡೆ, ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ ಸೇರಿದಂತೆ ಹಲವರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ನಾಳೆ ಲಸಿಕಾ ತಾಲೀಮು

## ದೇಶಾದ್ಯಂತ ಕೋವಿಡ್ ಲಸಿಕೆ ಕಾರ್ಯಕ್ರಮದ ಪೂರ್ವಪ್ರಯೋಗ

**ನವದೆಹಲಿ:** ಅಧಿಕೃತ ಅನುಮೋದನೆ ಸಿಗುತ್ತಿದ್ದಂತೆ ಕರೊನಾ ಲಸಿಕೆ ವಿತರಿಸಲು ಸಕಲ ಸಿದ್ಧತೆ ಮಾಡಿಕೊಂಡಿರುವ ಕೇಂದ್ರ ಸರ್ಕಾರ, ಶನಿವಾರ ಎಲ್ಲ ರಾಜ್ಯಗಳಲ್ಲಿ ಲಸಿಕೆ ಕಾರ್ಯಕ್ರಮದ ಪೂರ್ವಪ್ರಯೋಗ ತಾಲೀಮು (ಡ್ರೈ ರನ್) ನಡೆಸಲಿದೆ.

ಲಸಿಕೆ ಬಳಕೆಗೆ ಶೀಘ್ರವೇ ಅನುಮೋದನೆ ಸಿಗುವ ಸಂಭವ ಇರುವುದರಿಂದ ಅದರ ಸಾಗಾಟ, ಸಂಗ್ರಹ, ರೋಗಿಗಳಿಗೆ ನೀಡಿಕೆ, ಅಡ್ಡಪರಿಣಾಮ ಮುಂತಾದ ಅಂಶಗಳನ್ನು ತಿಳಿದು ಅದರ ಅನುಭವದ ಆಧಾರದಲ್ಲಿ ಲಸಿಕೆ ಅಭಿಯಾನವನ್ನು ಸುವ್ಯವಸ್ಥಿತಗೊಳಿಸಲು ಡ್ರೈ ರನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡಿಸೆಂಬರ್ 28 ಮತ್ತು 29ರಂದು ನಾಲ್ಕು ರಾಜ್ಯಗಳ ಆಯ್ದ ಜಿಲ್ಲೆಗಳಲ್ಲಿ ಈಗಾಗಲೇ ಈ ಕಾರ್ಯವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಕೇಂದ್ರ ಆರೋಗ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ತಾಲೀಮು ನಡೆಸಲು ನಿರ್ಧರಿಸಲಾಗಿದೆ.



### ಹೊಸ ವರ್ಷಕ್ಕೆ ಲಸಿಕೆ?

'**ವಿ**ಶೇಷದೊಂದಿಗೆ ಹೊಸ ವರ್ಷವನ್ನು ಆಚರಿಸಲಿದ್ದೇವೆ. ಇಷ್ಟು ಸುಳಿವನ್ನು ಮಾತ್ರ ನಾನು ನೀಡಬಲ್ಲೆ' ಎಂದಿರುವ ಔಷಧಗಳ ಮಹಾ ನಿಯಂತ್ರಕ ಡಾ. ವಿ.ಜಿ. ಸೋಮಾನಿ, ಕರೊನಾ ಲಸಿಕೆಗೆ ಅನುಮೋದನೆ ಸಿಗುವ ಸುಳಿವು ನೀಡಿದ್ದಾರೆ. ಲಸಿಕೆಯ ತುರ್ತು ಬಳಕೆಗೆ ಅನುಮೋದನೆ ನೀಡಬೇಕಾದ ತಜ್ಞರ ಸಮಿತಿ ಸಭೆ ಶುಕ್ರವಾರ ನಡೆಯಲಿದ್ದು, ಅದಕ್ಕೂ ಒಂದು ದಿನ ಮೊದಲೇ ಹಿರಿಯ ಅಧಿಕಾರಿ ಈ ಮಾಹಿತಿ ಹಂಚಿಕೊಂಡಿದ್ದಾರೆ. ದೇಶದಲ್ಲಿ ಉತ್ಪಾದನೆ ಆಗುತ್ತಿರುವ ಎರಡು ಪ್ರಮುಖ ಲಸಿಕೆಗಳಾದ ಆಕ್ಸ್ ಫರ್ಡ್-ಆಸ್ಟ್ರಾಜೆನಿಕಾ ಮತ್ತು ಭಾರತ್ ಬಯೋಟೆಕ್ ಲಸಿಕೆಗೆ ಅನುಮೋದನೆ ಸಿಗುವುದು ಬಹುತೇಕ ಖಚಿತವಾಗಿದೆ. ಬುಧವಾರ ನಡೆದಿದ್ದ ತಜ್ಞರ ಸಮಿತಿ ಸಭೆ, ಸಂಬಂಧಿತ ದತ್ತಾಂಶಗಳನ್ನು ಪರಿಶೀಲಿಸಿ ಇನ್ನಷ್ಟು ವಿವರ ನೀಡುವಂತೆ ಕಂಪನಿಗಳಿಗೆ ಸೂಚಿಸಿತ್ತು. ಶುಕ್ರವಾರ ಮತ್ತೆ ಸಭೆ ಸೇರುವ ಸಮಿತಿ ಮಹತ್ವದ ನಿರ್ಧಾರ ಕೈಗೊಳ್ಳುವ ಸಂಭವವಿದೆ.

### ಐವರಲ್ಲಿ ರೂಪಾಂತರಿ ಕರೊನಾ ಸೋಂಕು

**ಬ್ರಿ**ಟನ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವ ಕರೊನಾದ ರೂಪಾಂತರಿತ ವೈರಸ್‌ನ ಹೊಸ 5 ಪ್ರಕರಣಗಳು ದೃಢಪಟ್ಟಿದ್ದು, ಭಾರತದಲ್ಲಿ ಅದರ ಒಟ್ಟು ಸಂಖ್ಯೆ 25ಕ್ಕೆ ಏರಿದೆ. ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಯಲ್ಲಿ ನಾಲ್ಕು ಹಾಗೂ ನ್ಯಾಷನಲ್ ಜಿನೊಮಿಕ್ಸ್ ಮತ್ತು ಸಮಗ್ರ ಜೀವಶಾಸ್ತ್ರ ಸಂಸ್ಥೆಯಲ್ಲಿ (ಐಜಿಐಬಿ) ಒಂದು ಪ್ರಕರಣ ಹೊಸದಾಗಿ ಪತ್ತೆಯಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ. ಎಲ್ಲ 25 ರೋಗಿಗಳನ್ನು ಐಸೋಲೇನ್‌ನಲ್ಲಿ ಇರಿಸಲಾಗಿದೆ.

ಭಾರತದಲ್ಲಿ ಹೊಸ ಸೋಂಕಿತರು
**21,882**

ಒಟ್ಟು ಸೋಂಕಿತರು
**1.02 ಕೋಟಿ.**

ಸಾವು: **299**

ಒಟ್ಟು ಸಾವು
**1,48,738**

### ದವಾಯಿ ಭೀ, ಕಡಾಯಿ ಭೀ



**ಔ**ಷಧಕ್ಕೂ ಜೈ, ಮುನ್ನೆಚ್ಚರಿಕೆಗೂ ಸೈ (ದವಾಯಿ ಭೀ, ಕಡಾಯಿ ಭೀ) ಎಂಬುದು 2021ರ ಹೊಸ ಮಂತ್ರವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದ್ದಾರೆ. 'ಲಸಿಕೆ ಸಿಗುವವರೆಗೆ ವಿರಾಮವಿಲ್ಲ ಎಂಬುದು ಇದುವರೆಗಿನ ಘೋಷಣೆಯಾಗಿತ್ತು. ಅದೀಗ ಬದಲಾಗಿದೆ' ಎಂದು ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ (ಏಮ್ಸ್) ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿಸಿದ ವೇಳೆ ಮೋದಿ ಹೇಳಿದರು. ದೇಶದಲ್ಲಿ ಕರೊನಾ ವೈರಸ್ ವ್ಯಾಧಿಯ ಹೊಸ ಪ್ರಕರಣಗಳು ಕಡಿಮೆಯಾಗುತ್ತಿದ್ದರೂ ಜನರು ಎಚ್ಚರಿಕೆಯಿಂದ ಇರಬೇಕು. ಲಸಿಕೆ ನೀಡಿಕೆ ನಂತರವೂ ಕರೊನಾ ವೈರಸ್ ಸುರಕ್ಷತಾ ಕ್ರಮ ಗಳನ್ನು ಮುಂದುವರಿಸಬೇಕು. ಲಸಿಕೆ ಕಾರ್ಯಕ್ರಮದ ಪೂರ್ವ ಸಿದ್ಧತೆ ಅಂತಿಮ ಹಂತದಲ್ಲಿದೆ. ಭಾರತದಲ್ಲೇ ತಯಾರಾದ ಲಸಿಕೆಯನ್ನು ಜನರು ಪಡೆಯಲಿದ್ದಾರೆ ಎಂದು ಹೇಳಿದ್ದಾರೆ.




### ಏರಿದ ಗುಣಮುಖ ಪ್ರಮಾಣ

**ದೇ**ಶದಲ್ಲಿ ಕರೊನಾದಿಂದ ಚೇತರಿಕೆ ಕಂಡವರ ಪ್ರಮಾಣ ಶೇಕಡ 96 ದಾಟಿದೆ. ಕೋವಿಡ್-19 ವಿರುದ್ಧದ ಹೋರಾಟದಲ್ಲಿ ಮಹತ್ವದ ಸಾಧನೆಯಾಗಿದೆ. ಇದು ಜಗತ್ತಿನಲ್ಲೆ ಅತಿ ಹೆಚ್ಚಿನ ಗುಣಮುಖ ಪ್ರಮಾಣದಲ್ಲಿ ಒಂದಾಗಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ. ಕೇರಳದಲ್ಲಿ ಒಂದೇ ದಿನ 5,707 ಜನರು ಚೇತರಿಸಿಕೊಂಡಿರುವುದು ಗರಿಷ್ಠವಾಗಿದೆ. ಮಹಾರಾಷ್ಟ್ರದಲ್ಲಿ 4,913, ಛತ್ತೀಸ್‌ಗಢದಲ್ಲಿ 1,588 ಜನರು ಚೇತರಿಸಿಕೊಂಡಿದ್ದಾರೆ.

### ಹೊಸ ವರ್ಷದ ಸಂಭ್ರಮಕ್ಕೆ ಬ್ರೇಕ್

**ಕ**ರೊನಾ ಹಿನ್ನೆಲೆಯಲ್ಲಿ ದೆಹಲಿ, ಮುಂಬೈ, ಚೆನ್ನೈ ಸಹಿತ ಹಲವು ಮಹಾನಗರಗಳಲ್ಲಿ ಹೊಸ ವರ್ಷಾಚರಣೆಯನ್ನು ನಿಷೇಧಿಸಲಾಗಿತ್ತು. ಕರೊನಾ ಹರಡುವುದನ್ನು ತಪ್ಪಿಸುವ ಕ್ರಮವಾಗಿ ದೇಶದ ಅನೇಕ ನಗರಗಳಲ್ಲಿ ರಾತ್ರಿ ಕರ್ಫ್ಯೂ ಸಹಿತ ಅನೇಕ ನಿರ್ಬಂಧಗಳನ್ನು ವಿಧಿಸಲಾಗಿತ್ತು.

- ಆಕ್ಸ್‌ಫರ್ಡ್-ಆಸ್ಟ್ರಾಜೆನಿಕಾ ಅಭಿವೃದ್ಧಿಪಡಿಸಿದ 'ಕೊವಿಶೀಲ್ಡ್' ಲಸಿಕೆಯನ್ನು ಸೆರಂ ಸಂಸ್ಥೆ ತಯಾರಿಸುತ್ತಿದೆ.
- ಭಾರತ್ ಬಯೋಟೆಕ್ ಕಂಪನಿ, 'ಕೊವಾಕ್ಸಿನ್' ತಯಾರಿಸಲು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಜೊತೆ ಕೈಜೋಡಿಸಿದೆ.



- ಪಾಕಿಸ್ತಾನ ಕ್ರಮ: ಚೀನಾದ ಸಿನೊಫಾರ್ಮ್‌ ನಿಂದ 1.2 ಮಿಲಿಯನ್ ಡೋಸ್ ಕರೊನಾ ಲಸಿಕೆ ಖರೀದಿಸಲು ಪಾಕಿಸ್ತಾನ ಮುಂದಾಗಿದೆ.

### ಚೀನಾ ಹಠಮಾರಿತನ

**ಕೋ**ವಿಡ್ ಸೋಂಕು ಮಾನವರಿಗೆ ಹೇಗೆ ಹರಡಿತು ಎಂಬುದನ್ನು ತಿಳಿದುಕೊಳ್ಳುವಲ್ಲಿ ಚೀನಾದ ಹಠಮಾರಿತನವೇ ಅಡ್ಡಿಯಾಗಿದೆ. ಅಧಿಕಾರಿಗಳು ಯಾವುದೇ ಮಾಹಿತಿಯನ್ನು ಬಿಟ್ಟುಕೊಡದಿರುವುದು ಸಮಸ್ಯೆಯಾಗಿ ಪರಿಣಮಿಸಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಚೀನಾದ ವುಹಾನ್ ಪ್ರಾಂತ್ಯದಲ್ಲಿ ಸೋಂಕು ಮೊದಲು ಸ್ಫೋಟಗೊಂಡಿತ್ತು.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಸುವಿಧಾ ಕ್ಯಾಬಿನ್ ನಿರ್ಮಾಣ ಟೆಂಡರ್‌ನಲ್ಲಿ ಭಾರಿ ಅಕ್ರಮ?

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಪೌರಕಾರ್ಮಿಕರಿಗೆ ಮಸ್ಟರಿಂಗ್ ಕೇಂದ್ರಗಳಲ್ಲಿ ಬಟ್ಟೆ ಬದಲಿಸಿಕೊಳ್ಳಲು, ವಿಶ್ರಾಂತಿಗೆ ಹಾಗೂ ಶೌಚಗೃಹ ಸೌಲಭ್ಯ ಒದಗಿಸುವ 'ಸುವಿಧಾ ಕ್ಯಾಬಿನ್' ನಿರ್ಮಾಣ ಟೆಂಡರ್‌ನಲ್ಲಿ ಅಕ್ರಮ ನಡೆದಿದ್ದು, ಟೆಂಡರ್ ಅನುಮೋದನೆ ತಡೆಯುವಂತೆ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗೆ ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷ ಎನ್.ಆರ್. ರಮೇಶ್ ದೂರು ಸಲ್ಲಿಸಿದ್ದಾರೆ.

**» ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಆರೋಪ**

ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪೌರಕಾರ್ಮಿಕರಿಗೆ ಮೂಲಸೌಕರ್ಯ ಕೊರತೆ ಕೇಳಿಬಂದ ಹಿನ್ನೆಲೆಯಲ್ಲಿ 'ಶುಭ್ರ ಬೆಂಗಳೂರು' ಯೋಜನೆ ಅನುದಾನದಡಿ ಮಸ್ಟರಿಂಗ್ ಕೇಂದ್ರಗಳಲ್ಲಿ 221 'ಸುವಿಧಾ ಕ್ಯಾಬಿನ್' ನಿರ್ಮಾಣಕ್ಕೆ 20 ಕೋಟಿ ರೂ. ಮೊತ್ತದ ಟೆಂಡರ್ ಕರೆಯಲಾಗಿತ್ತು. ಈ ಟೆಂಡರ್ ಅನ್ನು ಅರ್ಹತೆಯಿಲ್ಲದ ಗುತ್ತಿಗೆದಾರನಿಗೆ ಕಾನೂನುಬಾಹಿರವಾಗಿ ನೀಡಲಾಗಿದೆ. ಹೀಗಾಗಿ ಟೆಂಡರ್‌ಗೆ ಪಾಲಿಕೆ ಘನತ್ಯಾಜ್ಯ ನಿರ್ವಹಣೆ ಇಲಾಖೆಯ ಅಧಿಕಾರಿಗಳು ನೀಡಿರುವ ಅನುಮೋದನೆಯನ್ನು ತಿರಸ್ಕರಿಸಬೇಕು ಹಾಗೂ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ರಮೇಶ್ ಮನವಿ ಮಾಡಿದ್ದಾರೆ.

ತಲಾ 1 ಕ್ಯಾಬಿನ್‌ಗೆ 7.90 ಲಕ್ಷ ರೂ.ಗಳಂತೆ 221 ಕ್ಯಾಬಿನ್‌ಗಳಿಗೆ (ಜಿಎಸ್‌ಟಿ ಬಿಟ್ಟು) 17.45 ಕೋಟಿ ರೂ.ಗಳಿಗೆ ಅಲ್ಪಾವಧಿ ಟೆಂಡರ್ ಕರೆಯಲಾಗಿತ್ತು. ನಂತರ ಮೆ. ಅಗ್ರ್ಯಾ ಇನ್‌ಫ್ರಾಟೆಕ್ ಸಂಸ್ಥೆಗೆ 18.31 ಕೋಟಿ ರೂ.ಗೆ ಟೆಂಡರ್ ನೀಡಲಾಗಿದೆ. ಈ ಸಂಸ್ಥೆ 2020ರ ಫೆಬ್ರವರಿಯಲ್ಲಿ ಸರ್ಕಾರದಲ್ಲಿ ನೋಂದಣಿ ಮಾಡಿಸಿಕೊಂಡಿದೆ. ಆದರೆ, 2015-16 ರಿಂದ 2019-20ರ ಅವಧಿಯಲ್ಲಿ ಕಾರ್ಯ ನಿರ್ವಹಿಸಿದ ಬಗ್ಗೆ ನಕಲಿ ಪ್ರಮಾಣ ಪತ್ರವನ್ನು ಪಾಲಿಕೆಗೆ ಸಲ್ಲಿಸಿದೆ. ಜತೆಗೆ, ಈ ಸಂಸ್ಥೆಯು ಫೆಬ್ರವರಿಯಲ್ಲಿ 1.34 ಕೋಟಿ ರೂ. ವಾರ್ಷಿಕ ವಹಿವಾಟು ತೋರಿಸಿತ್ತು. ಕೇವಲ 7 ತಿಂಗಳ ನಂತರ 42.53 ಕೋಟಿ ರೂ. ಎಂದು ವಹಿವಾಟು ತೋರಿಸಿದೆ ಎಂದು ಅವರು ಆರೋಪಿಸಿದ್ದಾರೆ.

## 1.25 ಲಕ್ಷ ರೂ.ಗೆ ಕಂಟೇನರ್ ಲಭ್ಯ

**ಪೌರಕಾರ್ಮಿಕರಿಗೆ ನಿರ್ಮಿಸುತ್ತಿರುವ 'ಸುವಿಧಾ ಕ್ಯಾಬಿನ್' ಅನ್ನು ಕಂಟೇನರ್‌ನಲ್ಲಿ ನಿರ್ಮಿಸುತ್ತಿದ್ದು, ಪ್ರತಿ ಕಂಟೇನರ್‌ಗೆ 7.90 ಲಕ್ಷ ರೂ. ನಿಗದಿ ಮಾಡಲಾಗಿದೆ. ಆದರೆ, ವಾಸ್ತವಿಕವಾಗಿ ಗುಣಮಟ್ಟದ ಕಂಟೇನರ್‌ಗಳು 1.25 ಲಕ್ಷ ರೂ.ಗಳಿಗೆ ದೊರೆಯುತ್ತವೆ. ಪಾಲಿಕೆ ಹಣ ಲೂಟಿ ಮಾಡುವ ಉದ್ದೇಶದಿಂದಲೇ ಅಗ್ರ್ಯಾ ಇನ್ಫ್ರಾಟೆಕ್ ಸಂಸ್ಥೆಗೆ ಟೆಂಡರ್ ನೀಡಲಾಗಿದೆ ಎಂದು ಎನ್.ಆರ್. ರಮೇಶ್ ಆರೋಪಿಸಿದ್ದಾರೆ.**



Bengaluru Edition
Jan 1, 2021 Page No. 5
Powered by : eReleGo.com

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ರಸ್ತೆಗಳು ಖಾಲಿ ಮನೆಯಲ್ಲೇ ಜಾಲಿ

**ಕಳೆಗುಂದಿದ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್**

**ಪಬ್, ಬಾರ್, ರೆಸಾರ್ಟ್‌ಗಳಲ್ಲಿ ಗ್ರಾಹಕರ ಹಿಗ್ಗು**



ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನಾ ಸೋಂಕು ಹರಡುವ ಭೀತಿ ಮತ್ತು ನಿಷೇಧಾಜ್ಞೆ ಹಿನ್ನೆಲೆಯಲ್ಲಿ ಉದ್ಯಾನನಗರಿಯ ಜನರು ಸರಳವಾಗಿ ಸಂಭ್ರಮಿಸುವ ಮೂಲಕ ಹೊಸ ವರ್ಷ 2021ನ್ನು ಸ್ವಾಗತಿಸಿದ್ದಾರೆ.

ಪ್ರತಿ ವರ್ಷ ಸಂಭ್ರಮಾಚರಣೆಯ ಕೇಂದ್ರ ಬಿಂದುವಾಗಿದ್ದ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ನಲ್ಲಿ ರಂಗುರಂಗಿನ ದೀಪದ ಅಲಂಕಾರ, ಮಾದಕ ಕುಣಿತವಿಲ್ಲದೆ ಸಂಭ್ರಮಾಚರಣೆಯ ಪಾರ್ಟಿಗಳು ಕಳೆಗುಂದಿದ್ದವು. ಪೊಲೀಸ್ ಸರ್ಪಗಾವಲು ನಡುವೆ ಬೆರಳಿಕೆಯ ಜನ ರಸ್ತೆಯಲ್ಲಿ ಪರಸ್ಪರ ಶುಭಕೋರಿ ಹೊಸ ವರ್ಷವನ್ನು ಬರಮಾಡಿಕೊಂಡರು.

ಗುರುವಾರ ಮಧ್ಯಾಹ್ನ 12 ಗಂಟೆಯಿಂದಲೇ ನಗರದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ರಾತ್ರಿ 8 ಗಂಟೆಗೆ ಎಂ.ಜಿ. ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆ, ಇಂದಿರಾನಗರ ಮತ್ತು ಕೋರಮಂಗಲದ ಪ್ರಮುಖ ರಸ್ತೆಗಳನ್ನು ಬಂದ್ ಮಾಡಲಾಗಿತ್ತು. ಇದರಿಂದ ಹೆಚ್ಚಾಗಿ ಜನರು ಬರಲಿಲ್ಲ. ಕಮರ್ಷಿಯಲ್ ಸ್ಟ್ರೀಟ್ ರಸ್ತೆಗಳಲ್ಲಿ ಝಗಮಗಿಸುವ ವಿದ್ಯುತ್ ದೀಪಾಲಂಕಾರದ ಇದ್ದರೂ ಬೆರಳೆಣಿಕೆ ಜನರು ಶಾಪಿಂಗ್ ಮಾಡಿ ಮನೆಯಕಡೆ ಮುಖ ಮಾಡಿದರು. ಪ್ರತಿವರ್ಷದ ಕೊನೇ ದಿನ ತುಂಬಿ ತುಳುಕುತ್ತಿದ್ದ ಪಬ್, ಕ್ಲಬ್‌ಗಳು, ಹೋಟೆಲ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಗ್ರಾಹಕರ ಸಂಖ್ಯೆ ವಿರಳವಾಗಿತ್ತು. ಒಂದೇ ರಾತ್ರಿಯಲ್ಲಿ ಲಕ್ಷಾಂತರ ರೂ. ವ್ಯಾಪಾರ ನಡೆಸುತ್ತಿದ್ದವರು ಈ ಬಾರಿ ನಿರಾಸೆಗೆ ಒಳಗಾದರು. ಪ್ರಮುಖ ರಸ್ತೆಗಳನ್ನು ರಾತ್ರಿ ಆಗುತ್ತಿದಂತೆ ಪೊಲೀಸರು ರಸ್ತೆಗಳ ಪ್ರವೇಶ ಹಾಗೂ ನಿರ್ಗಮನ ತಡೆದು ಬ್ಯಾರಿಕೇಡ್ ಹಾಕಿದ್ದ ಪರಿಣಾಮ ಜನಸಂಚಾರವೇ ಇಲ್ಲದಂತಾಗಿ ಬಿಕೋ ಎನ್ನುವ ವಾತಾವರಣ ನಿರ್ಮಾಣವಾಗಿತ್ತು.

ಮುಂಗಡವಾಗಿ ಬುಕಿಂಗ್ ಮಾಡಿದ್ದ ಬೆರಳೆಣಿಕೆ ಮಂದಿ ಸಂಜೆ 6 ಗಂಟೆಗೆ ಪಬ್, ಬಾರ್, ಹೋಟೆಲ್, ಕ್ಲಬ್‌ಗಳನ್ನು ಸೇರಿಕೊಂಡು ಹೊಸವರ್ಷ ಆಚರಿಸಿದರು. ಇಂದಿರಾನಗರ, ಕಲ್ಯಾಣನಗರ, ಕೋರಮಂಗಲ, ವೈಟ್‌ಫೀಲ್ಡ್, ಐಟಿಪಿಎಲ್ ಸುತ್ತಲ ಪ್ರದೇಶಗಳ ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು, ಹೋಟೆಲ್‌ಗಳಲ್ಲಿ ಗ್ರಾಹಕರ ಸಂಖ್ಯೆ ಕೊಂಚ ಹೆಚ್ಚಾಗಿತ್ತು. ಪಾನಮತ್ತ ಮಂದಿ ಮನಸೋ ಇಚ್ಛೆ ಕುಣಿದು ಕುಪ್ಪಳಿಸಿದರು.



ಬ್ರಿಗೇಡ್ ರಸ್ತೆಗೆ ಪೊಲೀಸರ ಕಾವಲು.

ಚಿತ್ರಗಳು: ಸುಧೀಂದ್ರ ಶಿರಂಗರಾಜು



ಎಂ.ಜಿ. ರಸ್ತೆ ಖಾಲಿ.

## ಪೊಲೀಸರ ಸರ್ಪಗಾವಲು

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಮ್ಯೂಸಿಯಂ ರಸ್ತೆ, ರೆಸ್ಟ್ ಹೌಸ್ ಪಾರ್ಕ್ ರಸ್ತೆ, ರೆಸಿಡೆನ್ಸಿ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ ಪೊಲೀಸರು ಕಾವಲಿಗಿದ್ದರು. ನಗರ ಪೊಲೀಸ್ ಆಯುಕ್ತ ಕಮಲ್ ಪಂತ್, ಹೆಚ್ಚುವರಿ ಪೊಲೀಸ್ ಆಯುಕ್ತ ಸೌಮೇಂದು ಮುಖರ್ಜಿ, ಕೇಂದ್ರ ವಿಭಾಗ ಡಿಸಿಪಿ ಎಂ.ಎನ್. ಅನುಚೇತ್ ಮೊಕ್ಕಾಂ ಹೂಡಿದ್ದರು. ಹೆಚ್ಚುವರಿ ಸಿಸಿ ಕ್ಯಾಮರಾ ಅಳವಡಿಸಿ ನಿಗಾವಹಿಸಿದ್ದರು. 44 ಮೇಲ್ಸೆತುವೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ವ್ಹೀಲಿಂಗ್, ಡ್ರ್ಯಾಗ್‌ರೇಸ್, ಅತಿವೇಗದ ಚಾಲನೆ ಮಾಡುತ್ತಿದ್ದವರಿಗೆ ಬಿಸಿ ಮುಟ್ಟಿಸಿದರು. ಪ್ರಮುಖ ರಸ್ತೆಗಳು, ವೃತ್ತಗಳು, ಜಂಕ್ಷನ್‌ಗಳಲ್ಲಿ 191 ಕಡೆ ವಾಹನ ತಪಾಸಣೆ ನಡೆಸಿದರು. ಹೊಯ್ಸಳ ಮತ್ತು ಚೀತಾ ವಾಹನಗಳು ಗಸ್ತು ತಿರುಗುತ್ತಿದ್ದವು.

## ಸುರಕ್ಷತಾ ಕೇಂದ್ರ

ಮಹಿಳೆ ಮತ್ತು ಮಕ್ಕಳ ಸುರಕ್ಷತೆ ಸಲುವಾಗಿ ನಗರದ ಎಲ್ಲೆಡೆ ಟೆಂಟ್ ನಿರ್ಮಾಣ ಮಾಡಿ ಸುರಕ್ಷತಾ ಕೇಂದ್ರಗಳನ್ನು ನಿರ್ಮಾಣ ಮಾಡಿ ಮಹಿಳಾ ಸಿಬ್ಬಂದಿಯನ್ನು ನಿಯೋಜನೆ ಮಾಡಿದ್ದರು.

## ಮಾಸ್ಕ್ ಧರಿಸದವರಿಗೆ ದಂಡ

ಡ್ರಂಕ್ ಆ್ಯಂಡ್ ಡ್ರೈವ್, ವಾಹನ ತಪಾಸಣೆ ಜತೆಗೆ ಮಾಸ್ಕ್ ಧರಿಸದೆ ಕಾರಿನಲ್ಲಿ ಓಡಾಡುತ್ತಿದ್ದ ಮಂದಿಗೆ ಅಶೋಕನಗರ ಮತ್ತು ಕಬ್ಬನ್‌ಪಾರ್ಕ್ ಪೊಲೀಸರು ದಂಡ ವಿಧಿಸಿದರು. ಕುಡಿದು ವಾಹನ ಚಲಾಯಿಸಿ ಸಿಕ್ಕಿಬಿದ್ದ ಚಾಲಕ/ಸವಾರರ ಚಾಲನ ಪರವಾನಗಿ ಮತ್ತು ವಾಹನ ಜಪ್ತಿ ಮಾಡಿದರು.

## ಹೊರವಲಯದಲ್ಲಿ ಪಾರ್ಟಿ-ಸಂಭ್ರಮ

ಪೊಲೀಸರ ಬಿಗಿಭದ್ರತೆ ಭಯದಿಂದಾಗಿ ಹಲವರು ಮಧ್ಯಾಹ್ನವೇ ತಂಡೋಪ ತಂಡವಾಗಿ ಬೆಂಗಳೂರು ಹೊರವಲಯದ ರೆಸಾರ್ಟ್, ಫಾರ್ಮ್ ಹೌಸ್‌ಗಳು, ತೋಟಗಳನ್ನು ಸೇರಿ ಕೊಂಡು ಪಾರ್ಟಿಗಳನ್ನು ಮಾಡಿದರು. ಇದರ ಪರಿಣಾಮ ತುಮಕೂರು ರಸ್ತೆ, ಏರ್‌ಪೋರ್ಟ್ ರಸ್ತೆ, ಮೈಸೂರು ರಸ್ತೆ, ಹೊಸೂರು ಹೆದ್ದಾರಿಗಳಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿತ್ತು. ಟೋಲ್‌ಗಳಲ್ಲಿ ಕಿ.ಮೀ. ವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.




## ಭಣಗುಟ್ಟಿದ ಕೇಕ್, ಬಟ್ಟೆ ಮಳಿಗೆಗಳು



ಬೆಂಗಳೂರು: ಪ್ರತಿವರ್ಷ ಕೇಕ್ ಕತ್ತರಿಸಿ ಕುಟುಂಬಸ್ಥರೊಂದಿಗೆ, ಗೆಳೆಯ,ಗೆಳತಿರೊಂದಿಗೆ ಖುಷಿ ಪಡುತ್ತಿದ್ದವರು ಈ ಬಾರಿ ಸರ್ಕಾರದ ಕೆಲ ಕಟ್ಟುನಿಟ್ಟಿನ ನಿಯಮಗಳಿಂದಾಗಿ ಕೇಕ್ ಅಂಗಡಿಗಳತ್ತ ಹೆಚ್ಚು ಮುಖ ಮಾಡಲಿಲ್ಲ. ಹೀಗಾಗಿ ಮೊದಲೇ ಬಗೆ ಬಗೆಯ ಕೇಕ್, ಹೊಸ ಶೈಲಿಯ ಬಟ್ಟೆಗಳು, ಪೂಜಾ ಸಾಮಗ್ರಿಗಳನ್ನು ತರಿಸಿ ಇಟ್ಟಿದ್ದ ಹೆಚ್ಚಿನ ಅಂಗಡಿ ಮಾಲೀಕರಿಗೆ ನಿರಾಶೆ ಉಂಟಾಯಿತು.



ಬಾಲಗಂಗಾಧರನಾಥ ಸ್ವಾಮೀಜಿ ಮೇಲು ರಸ್ತೆಯನ್ನು ಬಂದ್ ಮಾಡಲಾಗಿತ್ತು.


ಆರ್.ಆರ್. ನಗರದ ವಸತಿ ಸಮುಚ್ಚಯದಲ್ಲಿ ವರ್ಷಾಚರಣೆ ಸಂಭ್ರಮ.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1

ಸಂಸದರು, ಮುಖಂಡರಿಂದ ತೀವ್ರ ಆಕ್ಷೇಪ | ಪಾಲಿಕೆ ಆಯುಕ್ತರಿಂದ ಸರ್ಕಾರಕ್ಕೆ ಪ್ರಸ್ತಾವನೆ

# ಪಾದರಾಯನಪುರ ರಸ್ತೆ, ವೃತ್ತಗಳ ನಾಮಕರಣ ರದ್ದು?

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಪಾದರಾಯನಪುರ ವಾರ್ಡ್‌ನ ಪ್ರಮುಖ 9 ರಸ್ತೆ ಹಾಗೂ 2 ವೃತ್ತಗಳಿಗೆ ಸಮಾಜ ಸೇವಕರ ಹೆಸರಿಡುವ ವಿಚಾರದಲ್ಲಿ ಸಂಸದರು ಹಾಗೂ ವಿವಿಧ ಮುಖಂಡರಿಂದ ಆಕ್ಷೇಪಣೆ ವ್ಯಕ್ತವಾದ ಹಿನ್ನೆಲೆಯಲ್ಲಿ ನಾಮಕರಣ ಪ್ರಕ್ರಿಯೆ ರದ್ದುಗೊಳಿಸುವಂತೆ ಸರ್ಕಾರಕ್ಕೆ ಬಿಬಿಎಂಪಿ ಆಯುಕ್ತ ಮಂಜುನಾಥಪ್ರಸಾದ್ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಸೆ. 8ರಂದು ನಡೆದ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಪಾದರಾಯನಪುರ ವಾರ್ಡ್‌ನ 11 ರಸ್ತೆ ಮತ್ತು ಎರಡು ವೃತ್ತಗಳಿಗೆ ಸಮಾಜ ಸೇವಕರ ಹೆಸರಿಡಲು ನಿರ್ಣಯಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪಾಲಿಕೆಯು ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸಿತ್ತು. ಇದಕ್ಕೆ ಸಂಸದರಾದ ಅನಂತಕುಮಾರ್ ಹೆಗಡೆ, ಪಿ.ಸಿ. ಮೋಹನ್, ತೇಜಸ್ವಿ



ಮಲ್ಯ, ಎನ್.ಆರ್. ರಮೇಶ್ ಸೇರಿ ಹಲವು ಸಾರ್ವಜನಿಕರಿಂದ ಸಾಮಾಜಿಕ ಮಾಧ್ಯಮ, ಇಮೇಲ್ ಹಾಗೂ ಪತ್ರಮುಖೇನ ಆಕ್ಷೇಪಣೆ ವ್ಯಕ್ತವಾಗಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಮುನ್ಸಿಪಲ್ ಕಾಯ್ದೆ-1976 ಪ್ರಕರಣ 98ರ ಅನ್ವಯ ನಾಮಕರಣ ಪ್ರಕ್ರಿಯೆ ರದ್ದುಗೊಳಿಸುವಂತೆ ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗೆ ಬಿಬಿಎಂಪಿ ಆಯುಕ್ತರು ಪತ್ರ ಬರೆದಿದ್ದಾರೆ.

**ರೌಡಿ ಶೀಟರ್, ದಲ್ಲಾಳಿ:** ಪಾದರಾಯನಪುರದ ರಸ್ತೆ, ವೃತ್ತಗಳ ನಾಮಕರಣದ ಪ್ರಸ್ತಾವಿತ ಹೆಸರುಗಳಲ್ಲಿ ಯಾರೊಬ್ಬರೂ ನಾಡು, ನುಡಿ, ಜಲ ಅಥವಾ ನಗರದ ಅಭಿವೃದ್ಧಿಗೆ ಸೇವೆ ಸಲ್ಲಿಸಿಲ್ಲ. ಪ್ರಸ್ತಾವಿತ ಹೆಸರಿನ ವ್ಯಕ್ತಿಗಳಾದ ಪೆಹಲ್ವಾನ್ ಫಾರೂಕ್ ಪಾಷಾ ಸಾಬ್ ಈ ವಾರ್ಡ್‌ನ ಮಾಜಿ ಸದಸ್ಯ ಇಮ್ರಾನ್ ಪಾಷಾ ತಾತ. ಎಲ್ದಿರ್ ಬಾಬು ಸಾಬ್ ರೌಡಿಶೀಟರ್. ಟೋಪಿ ರಫೀಕ್ ಸಾಬ್ ಮತ್ತು ರೋಷನ್ ಫಯಾಜ್ ಬಾಡಿಗೆ ಮನೆ ಕೊಡಿಸುವ ದಲ್ಲಾಳಿಗಳು. ಹಾಜಿ ವಝೀರ್ ಸಾಬ್ ಮತ್ತು ಹಾಜಿ ಶಾಮಿರ್ ಸಾಬ್ ರಿಯಲ್‌ಎಸ್ಟೇಟ್ ಉದ್ಯಮಿಗಳು. ಸಮಾಜಕ್ಕೆ ಯಾವುದೇ ಕೊಡುಗೆ ನೀಡದ, ಹಲವು ಆರೋಪ ಎದುರಿಸುವ ವ್ಯಕ್ತಿಗಳ ಹೆಸರನ್ನು ರಸ್ತೆಗೆ ನಾಮಕರಣ ಮಾಡಲು ಅನುಮೋದನೆ ನೀಡಬಾರದು ಎಂದು ಬೆಂಗಳೂರು ದಕ್ಷಿಣ ಜಿಲ್ಲೆ ಬಿಜೆಪಿ ಜಿಲ್ಲಾಧ್ಯಕ್ಷ ಹಾಗೂ ಪಾಲಿಕೆ ಮಾಜಿ ಆಡಳಿತ ಪಕ್ಷದ ನಾಯಕ ಎನ್.ಆರ್. ರಮೇಶ್ ಆಕ್ಷೇಪ ವ್ಯಕ್ತಪಡಿಸಿದರು.

## ಸ್ವಾತಂತ್ರ್ಯ ಹೋರಾಟಗಾರರ ಹೆಸರಿಡಿ

**ಪಾದರಾಯನಪುರ ವಾರ್ಡ್‌ನಲ್ಲಿ ಕೇವಲ ಮುಸ್ಲಿಂ ಸಮುದಾಯದವರ ಹೆಸರಿಡುವುದಕ್ಕೆ ಸಂಸದ ಅನಂತಕುಮಾರ್ ಹೆಗಡೆ ಬುಧವಾರ ಆಕ್ಷೇಪ ವ್ಯಕ್ತಪಡಿಸಿ ಪತ್ರ ಬರೆದಿದ್ದರು. ಗುರುವಾರ ಸಂಸದ ತೇಜಸ್ವಿ ಸೂರ್ಯ ಈ ನಿಟ್ಟಿನಲ್ಲಿ ದನಿ**



**ಗೂಡಿಸಿದ್ದರು. 'ಈ ಪ್ರದೇಶದಲ್ಲಿ ಮುಸ್ಲಿಮರು ಹೆಚ್ಚಾಗಿದ್ದಾರೆ. ಅವರೊಂದಿಗೆ ಹಿಂದುಗಳು ಕೂಡ ವಾಸವಾಗಿದ್ದಾರೆ. ಆದರೆ, ಪ್ರಸ್ತಾವಿತ ರಸ್ತೆ ಮತ್ತು ವೃತ್ತಗಳ ನಾಮಕರಣದಲ್ಲಿ ಹಿಂದುಗಳ ಹೆಸರಿಲ್ಲ. ಇದು ದ್ವಿರಾಷ್ಟ್ರ ಸಿದ್ಧಾಂತದಂತಿದ್ದು, ಬಿಬಿಎಂಪಿ ಬೇಜವಾಬ್ದಾರಿತನ ಪ್ರದರ್ಶಿಸಿದೆ. ನಾಮಕರಣ ಮಾಡುವುದೇ ಆದಲ್ಲಿ ದೇಶಭಕ್ತರು, ಸ್ವಾತಂತ್ರ್ಯ ಹೋರಾಟಗಾರರ ಹೆಸರಿಡಬೇಕು. ಆದರೆ, ಒಂದು ನಿರ್ದಿಷ್ಟ ಕೋಮಿನವರನ್ನು ತೃಪ್ತಿಪಡಿಸಲು ಮತ್ತು ವೈಭವೀಕರಿಸಲು ಎಡೆ ಮಾಡಿಕೊಡದೆ, ಈ ನಾಮಕರಣ ಪ್ರಕ್ರಿಯೆ ಕೈಬಿಡಬೇಕು ಎಂದು ಆಗ್ರಹಿಸಿದರು.**

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಪ್ರವಾಹ ನಿಯಂತ್ರಣಕ್ಕೆ ತಂತ್ರಜ್ಞಾನ



## 211 ಪ್ರವಾಹ ಪೀಡಿತ ಸ್ಥಳದಲ್ಲಿ ನಿಗಾ

**ಸಿಲಿಕಾನ್ ಸಿಟಿಯಲ್ಲಿ ಮಳೆಯಿಂದ ಪ್ರವಾಹಕ್ಕೊಳಗಾಗುವ 211 ತಗ್ಗು ಪ್ರದೇಶಗಳನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ಉಪಗ್ರಹದ ನೆರವಿನೊಂದಿಗೆ ಗುರುತಿಸಿದೆ. ಇದರಲ್ಲಿ ಪೂರ್ವ 20, ಪಶ್ಚಿಮ 38, ದಕ್ಷಿಣ 10, ಬೊಮ್ಮನಹಳ್ಳಿ 19, ಆರ್.ಆರ್.ನಗರ 39, ದಾಸರಹಳ್ಳಿ 13, ಮಹದೇವಪುರ 32, ಯಲಹಂಕ 11, ಕೋರಮಂಗಲದಲ್ಲಿ 29 ಪ್ರದೇಶಗಳಿವೆ. ಇದರಲ್ಲಿ 58 ಅತಿ ಸೂಕ್ಷ್ಮ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಹೆಚ್ಚು ನಿಗಾ ವಹಿಸಲಾಗಿತ್ತು. ಈ ಮೂಲಕ ಪ್ರವಾಹ ನಿಯಂತ್ರಣಕ್ಕೆ ಪ್ರತ್ಯೇಕ ತಂಡಗಳನ್ನು ರಚಿಸಿ ಕಾರ್ಯಾಚರಣೆ ಮಾಡಲಾಗುತ್ತಿತ್ತು.**

■ **ಸತೀಶ್ ಕಂದಗಲ್‌ಪುರ** ಬೆಂಗಳೂರು

ನಗರದಲ್ಲಿ ಪ್ರತಿ ಮಳೆಗಾಲದ ಸಂದರ್ಭದಲ್ಲಿ ತಗ್ಗು ಪ್ರದೇಶಗಳು, ರಾಜಕಾಲುವೆ ಒತ್ತುವರಿ ಮಾಡಿ ನಿರ್ಮಾಣ ಮಾಡಿದ ಮನೆಗಳ ಸ್ಥಳದಲ್ಲಿ ಪ್ರವಾಹ ಉಂಟಾಗಿ ಮನೆಗಳಿಗೆ ನೀರು ನುಗ್ಗುತ್ತದೆ. ಅದನ್ನು ತಡೆಯುವ ನಿಟ್ಟಿನಲ್ಲಿ ಬಿಬಿಎಂಪಿ ತಂತ್ರಜ್ಞಾನ ಬಳಕೆ ಮತ್ತು ಪ್ರವಾಹ ನಿಯಂತ್ರಣ ತಂಡಗಳನ್ನು ರಚಿಸಿದೆ.

ನಗರದಲ್ಲಿ ಮಳೆಗಾಲದಲ್ಲಿ ಉಂಟಾಗುವ ಪ್ರವಾಹದಿಂದ ಉಂಟಾಗುವ ಹಾನಿಯನ್ನು ತಡೆಗಟ್ಟಲು ಎಲ್ಲ ವಿಧಾನಸಭಾ ಕ್ಷೇತ್ರಾವಾರು ವಿಪತ್ತು ನಿರ್ವಹಣಾ ತಂಡಗಳ ರಚನೆ ಮಾಡಲಾಗಿದೆ. ಹವಾಮಾನ ಇಲಾಖೆ ನೆರವಿನೊಂದಿಗೆ ಮಳೆಯ ಮುನ್ಸೂಚನೆಗೆ ತಂತ್ರಜ್ಞಾನ ಬಳಕೆ ಮಾಡಿಕೊಳ್ಳಲಾಗಿದೆ. ಜತೆಗೆ, ಪ್ರಸ್ತುತ ವರ್ಷದಲ್ಲಿ ಮಳೆ ಹಾನಿಯಿಂದ ಮೃತರ ಕುಟುಂಬಗಳಿಗೆ ಮಾತ್ರವಲ್ಲದೆ ಮನೆಗಳಿಗೆ ನೀರು ನುಗ್ಗಿ ಹಾನಿಗೊಳಗಾದ ಕುಟುಂಬಗಳಿಗೂ ಪರಿಹಾರ ನೀಡುವ ಮೂಲಕ ಬಿಬಿಎಂಪಿ ಜನರ ರಕ್ಷಣೆಗೆ ಹಲವು ಕ್ರಮಗಳನ್ನು ಕೈಗೊಂಡಿದೆ.

**ಸಮರ್ಪಕ ಮಳೆ ಹಾನಿ ಪ್ರದೇಶ ನಿರ್ವಹಣೆ:** ಪ್ರಸ್ತುತ ವರ್ಷದಲ್ಲಿ ನಗರದಲ್ಲಿ 800 ಮಿ.ಮೀ ಗಿಂತ ಹೆಚ್ಚು ಮಳೆ ಸುರಿದಿದ್ದು, ವಾಡಿಕೆಗಿಂತ ಅಧಿಕವಾಗಿದೆ. ಆದರೆ, ನಗರದ ಹೊರ ವಲಯದ 110 ಹಳ್ಳಿಗಳ ವ್ಯಾಪ್ತಿಯಲ್ಲಿ ಯಾವುದೇ ನಕ್ಷೆಯಿಲ್ಲದೆ, ರಾಜಕಾಲುವೆಗಳಿಂದ ಬಫರ್ ವಲಯ ಬಿಡದೇ ಮನೆಗಳನ್ನು ನಿರ್ಮಾಣ ಮಾಡಿದ್ದರಿಂದ ಮನೆಗಳಿಗೆ ಮಳೆ ನೀರು ನುಗ್ಗಿ ತೀವ್ರ ಹಾನಿಯಾಗಿವೆ. ಎಲ್ಲ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿ ನೀರು ಹರಿಯಲು ಸೂಕ್ತ ಕ್ರಮವಹಿಸುವಲ್ಲಿ ಪಾಲಿಕೆ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಹೊಸಕೆರೆಹಳ್ಳಿ, ದತ್ತಾತ್ರೇಯ ನಗರ, ಸಪ್ತಗಿರಿ ಬಡಾವಣೆ, ಕುಮಾರಸ್ವಾಮಿ ಲೇಔಟ್, ರಾಜರಾಜೇಶ್ವರಿ ನಗರ, ಕೋರಮಂಗಲ, ಜೆ.ಪಿ. ನಗರ, ಸುಬ್ರಹ್ಮಣ್ಯ ಪುರದ ಸೇರಿ ದುರಸ್ತಿ ಕಾರ್ಯ ಕೈಗೊಂಡು ಮಳೆ ನೀರು ಮನೆಗೆ ನುಗ್ಗದಂತೆ ಕ್ರಮ ಕೈಗೊಳ್ಳಲಾಗಿದೆ.

**ಪ್ರವಾಹ ತಡೆಯಲು ಒತ್ತುವರಿ ತೆರವು:** ರಾಜಕಾಲುವೆ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಿದ ಪ್ರದೇಶಗಳಲ್ಲಿ 80 ಮಿ.ಮೀ. ಗಿಂತ ಹೆಚ್ಚು ಮಳೆಯಾದರೆ ಪ್ರವಾಹ ಸೃಷ್ಟಿಯಾಗುತ್ತದೆ. ಹೀಗಾಗಿ, ಒತ್ತುವರಿ ತೆರವು ಕಾರ್ಯ ಸಾಮಾನ್ಯವಾಗಿದೆ. ಹೀಗಾಗಿ, 2016ರ ಆಗಸ್ಟ್‌ನಲ್ಲಿ ಬಿಬಿಎಂಪಿ ನಡೆಸಿದ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಂಡಿತ್ತು. ಈವರೆಗೆ ಕಾರ್ಯಾಚರಣೆ 1,800 ಪ್ರದೇಶಗಳಲ್ಲಿ ಒತ್ತುವರಿ ಗುರುತಿಸಲಾಗಿದೆ. ಅದರಲ್ಲಿ 1,100 ಸ್ಥಳ ತೆರವುಗೊಳಿಸಲಾಗಿದ್ದು, ಉಳಿದ 700 ರಾಜಕಾಲುವೆ ಒತ್ತುವರಿ ತೆರವು ಮಾಡಿ ನೀರಿನ ಸರಾಗ ಹರಿವಿಗೆ ಅನುಕೂಲ ಮಾಡಿಕೊಡಲು ಪಾಲಿಕೆ ಯೋಜನೆ ರೂಪಿಸಿದೆ. ಜತೆಗೆ, ಹೊಸದಾಗಿ ಯಾವುದೇ ಪ್ರದೇಶಗಳು ಒತ್ತುವರಿಯಾಗದಂತೆ ಕ್ರಮ ಕೈಗೊಳ್ಳಲಾಗಿದೆ.

**ರಾಜಕಾಲುವೆ ಒತ್ತುವರಿ ಆಗದಂತೆ ಬಿಬಿಎಂಪಿ ನಿಗಾ ಪಾಲಿಕೆ ಅಭಿವೃದ್ಧಿ ಮಾಡಿದ ಕೆರೆಗಳು ಶೇ.53 ಭರ್ತಿ**



## ಹಾನಿಗೊಳಗಾದ ಕುಟುಂಬಕ್ಕೆ ನೆರವು

**ಹೊಸಕೆರೆಹಳ್ಳಿ, ದತ್ತಾತ್ರೇಯ ನಗರ, ಸಪ್ತಗಿರಿ ಬಡಾವಣೆ, ಕುಮಾರಸ್ವಾಮಿ ಲೇಔಟ್, ಹಾನಿಗೊಳಗಾದ ಮನೆಗಳಲ್ಲಿ ವಾಸಿಸುವವರ ಹೆಸರು, ಮನೆ ಮಾಲೀಕರ ಹೆಸರು ಮತ್ತು ಮೊಬೈಲ್ ಸಂಖ್ಯೆ, ಹಾನಿಗೊಳಗಾದ 300 ಕುಟುಂಬಗಳಿಗೆ ಬಿಬಿಎಂಪಿ ಮತ್ತು ಸರ್ಕಾರದಿಂದ ತಲಾ 25 ಸಾವಿರ ರೂ. ಪರಿಹಾರ ನೀಡಲಾಗಿದೆ. ಪರಿಹಾರದ ಚೆಕ್ ನೀಡುವ ಜತೆಗೆ, ಮನೆಗಳಿಗೆ ಅಕ್ಕಿ, ಬೇಳೆ, ಎಣ್ಣೆ ಹೊಂದಿದ ದಿನಸಿ ಕಿಟ್ ವಿತರಣೆ ಮಾಡಲಾಗಿದೆ.**



## ಪಾಲಿಕೆ ಅಭಿವೃದ್ಧಿ ಮಾಡಿದ ಕೆರೆಗಳಲ್ಲಿ ಶೇ.53 ಭರ್ತಿ

**ಬಿಬಿಎಂಪಿ ವ್ಯಾಪ್ತಿಯಲ್ಲಿ 205 ಹಾಗೂ ಬಿಡಿಎ ವ್ಯಾಪ್ತಿಯಲ್ಲಿ 5 ಸೇರಿ ಒಟ್ಟು 210 ಕೆರೆಗಳಿವೆ. ಬಿಬಿಎಂಪಿ ಅಭಿವೃದ್ಧಿ ಮಾಡಿದ 79 ಕೆರೆಗಳಲ್ಲಿ 42 ಕೆರೆಗಳು (ಶೇ.53) ಭರ್ತಿಯಾಗಿ ನಳನಳಿಸುತ್ತಿವೆ. ಉಳಿದಂತೆ ಅಭಿವೃದ್ಧಿಯಾಗದ 107 ಕೆರೆಗಳಲ್ಲಿ ಕೇವಲ 26 ಕೆರೆ ಭರ್ತಿಯಾಗಿವೆ. ಒಂದೇ ವರ್ಷದಲ್ಲಿ ಯಲಹಂಕ ವಲಯ 24, ಬೊಮ್ಮನಹಳ್ಳಿ 12, ಮಹದೇವಪುರ 11, ರಾಜರಾಜೇಶ್ವರಿ ನಗರ 10, ಪೂರ್ವ 1, ಪಶ್ಚಿಮ 1 ಹಾಗೂ ದಕ್ಷಿಣ ವಲಯದಲ್ಲಿ 3 ಸೇರಿ ಒಟ್ಟು 63 ಕೆರೆಗಳು ಭರ್ತಿಯಾಗಿರುವುದು ಇತಿಹಾಸವಾಗಿದೆ. ಈ ಮೂಲಕ ಅಂತರ್ಜಲ ಕೊರತೆಯಿಂದ ಒಣಗಿದ್ದ 30 ಸಾವಿರಕ್ಕೂ ಅಧಿಕ ಬೋರ್‌ವೆಲ್‌ಗಳಲ್ಲಿ ಜಲ ಮರುಪೂರಣಗೊಂಡಿದೆ.**

ವಿಜಯವಾಣಿ
ಕನ್ನಡಿಗರ ಧ್ವನಿ

# ಸಿಲಿಕಾನ್ ಸಿಟಿಯ ಎಲ್ಲೆಡೆ ಉಚಿತ ವೈಫೈ ಕೇಂದ್ರ ಲಭ್ಯ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ದೇಶದಲ್ಲಿ ಮಾಹಿತಿ ತಂತ್ರಜ್ಞಾನದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದ ಸಿಲಿಕಾನ್ ಸಿಟಿಯಲ್ಲಿ ಉಚಿತ ವೈಫೈ ಸೇವೆ ಒದಗಿಸುವಲ್ಲಿ ಮುಂಚೂಣಿಯಲ್ಲಿದೆ. ಸರ್ಕಾರದ ಸೂಚನೆ ಮೇರೆಗೆ ನಗರದಲ್ಲಿ 5,938 ಉಚಿತ ವೈಫೈ ಕೇಂದ್ರ ತೆರೆಯಲು ಬಿಬಿಎಂಪಿ ಅವಕಾಶ ನೀಡಿದೆ.

ಬೆಂಗಳೂರಿನಲ್ಲಿ ಈಗಾಗಲೇ 1,500ಕ್ಕೂ ಅಧಿಕ ಉಚಿತ ವೈಫೈ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ದೇಶದ ಉಚಿತ ವೈಫೈ ಒದಗಿಸುವ ನಗರದಲ್ಲಿ ಸಿಲಿಕಾನ್ ಸಿಟಿ ಕೂಡ ಮುಂಚೂಣಿಯಲ್ಲಿದೆ. ನಮಗೆ ಬೇಕಾದ ಮಾಹಿತಿ ಹುಡುಕಲು ಮತ್ತು ಹಂಚಿಕೊಳ್ಳಲು ಜನರಿಗೆ ಸಹಾಯ ಮಾಡಲು, ಸ್ನೇಹಿತರು, ಸಹೋದ್ಯೋಗಿಗಳು, ಕುಟುಂಬದೊಂದಿಗೆ ಸಂವಹನ ನಡೆಸಲು ಹಾಗೂ ಪ್ರಪಂಚದೊಂದಿಗೆ ಸಂಪರ್ಕ ಹೊಂದಲು ಇಂಟರ್ನೆಟ್ ಅಗತ್ಯವಿದೆ. ಸ್ಮಾರ್ಟ್ ಫೋನ್ ಖರೀದಿ ಮಾಡುವ ಜನರಿಗೆ ಡೇಟಾ ಹಾಕಿಸಿಕೊಳ್ಳುವುದು ಸವಾಲಾಗಿದೆ. ಹೀಗಾಗಿ, ವಿದ್ಯಾರ್ಥಿಗಳು, ಉದ್ಯೋಗಿಗಳು, ಸಾರ್ವಜನಿಕರಿಗೆ ಡೇಟಾ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕಳೆದ 5 ವರ್ಷಗಳ ಹಿಂದೆ ಉಚಿತ ವೈಫೈ ಯೋಜನೆ ಜಾರಿಗೊಳಿಸಿತ್ತು.

## ಬಳಕೆ ಹೇಗೆ ?

ನಿಮ್ಮ ಮೊಬೈಲ್‌ನ ವೈಫೈ ಮೆನು ಕ್ಲಿಕ್ ಮಾಡಿದರೆ ನಿಮ್ಮ ಸುತ್ತಲೂ ಕಾರ್ಯನಿರ್ವಹಿಸುತ್ತಿರುವ ವೈಫೈ ಸೇವೆ ಪಟ್ಟಿ ಲಭ್ಯವಾಗುತ್ತದೆ. ಅದರಲ್ಲಿ, ಲಾಕ್ ಮಾಡದಿರುವ ಹಾಗೂ ಈಗಾಗಲೇ ಉಚಿತವಾಗಿ ವೈಫೈ ನೀಡುವುದಾಗಿ ನೋಂದಣಿ ಮಾಡಿಸಿರುವ ಕಡೆಗಳಲ್ಲಿ ಲಭ್ಯವಾಗುವ ನೆಟ್‌ವರ್ಕ್‌ನನ್ನು ಕನೆಕ್ಟ್ ಮಾಡಿಕೊಳ್ಳಲು ನೋಂದಣಿ ಮಾಡಿಕೊಳ್ಳಬೇಕು. ನಂತರ ನಿಮ್ಮ ಸ್ಮಾರ್ಟ್ ಫೋನ್‌ಗೆ ಪಾಸ್‌ವರ್ಡ್ ಕಳುಹಿಸಿ, ನೋಂದಣಿ ಪೂರ್ಣಗೊಂಡ ನಂತರ ವೇಗದ ಮತ್ತು ವಿಶ್ವಾಸಾರ್ಹವಾಗಿ ವೈಫೈ ಬಳಕೆ ಮಾಡಬಹುದು.

**ಪಾಲಿಕೆಯಿಂದ 5,938 ಕೇಂದ್ರ ತೆರೆಯಲು ಒಪ್ಪಿಗೆ**

**ವೈಫೈ ಲಭ್ಯತೆ ಹುಡುಕಲು ಫೈಂಡರ್ ಆ್ಯಪ್**




## ಯಾವುದಕ್ಕೆ ಬಳಕೆಯಾಗುತ್ತಿವೆ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಕೋರಮಂಗಲ, ವೈಟ್‌ಫೀಲ್ಡ್, ಚರ್ಚ್ ಸ್ಟ್ರೀಟ್, ಜೆಪಿ ನಗರ, ಎಚ್‌ಎಸ್ ಆರ್ ಲೇಔಟ್ ಸೇರಿ ವಿವಿಧೆಡೆ ಉಚಿತ ವೈಫೈ ಲಭ್ಯವಿದೆ. ಬಹುತೇಕರು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂ, ವಾಟ್ಸ್ ಆ್ಯಪ್, ಆನ್‌ಲೈನ್ ಗೇಮ್ ಆಡಲು ಬಳಸುತ್ತಾರೆ. ಇನ್ನು ಕೆಲವರು ಮನರಂಜನೆಗಾಗಿ ಸಿನಿಮಾ ವೀಕ್ಷಣೆ, ಬೃಹತ್ ಫೈಲ್‌ಗಳು ಮತ್ತು ಆ್ಯಪ್‌ಗಳನ್ನು ಡೌನ್ ಲೋಡ್ ಮತ್ತು ಅಪ್‌ಲೋಡ್ ಹಾಗೂ ಅಪ್ ಡೇಟ್ ಮಾಡಲು ಬಳಕೆ ಮಾಡುತ್ತಾರೆ. ಜತೆಗೆ, ಸರ್ಕಾರ ನಿಷೇಧಿಸಿರುವ ಕೆಲವು ವೈಬ್‌ಸೈಟ್‌ಗಳನ್ನು ಬಳಸಲು ನಿರ್ಬಂಧಿಸಲಾಗಿದೆ.

## ವೈಫೈ ಫೈಂಡರ್ ಆ್ಯಪ್

ನಗರದಲ್ಲಿ ಯಾವ ಸ್ಥಳಗಳಲ್ಲಿ ಉಚಿತ ವೈಫೈ ಲಭ್ಯವಿದೆ ಎಂಬುದನ್ನು ಹುಡುಕಲು ವೈಫೈ ಫೈಂಡರ್ ಆ್ಯಪ್ ಅಭಿವೃದ್ಧಿ ಮಾಡಲಾಗಿದೆ. ಇದರಿಂದ ಉಚಿತ ವೈಫೈ ನೆಟ್‌ವರ್ಕ್‌ಗಳನ್ನು ಪತ್ತೆಹಚ್ಚಲು ಮತ್ತು ಸಂಪರ್ಕಿಸಲು ಸುಲಭವಾಗಿದೆ. ಶಾಪಿಂಗ್ ಮಾಲ್, ಮೀಟಿಂಗ್ ಮತ್ತು ಪ್ರೋಗ್ರಾಂ ಹಾಲ್‌ಗಳು, ಹೋಟೆಲ್‌ಗಳು, ಕೆಫೆ ಬಾರ್‌ಗಳು, ಉದ್ಯಾನಗಳು, ರೈಲು ನಿಲ್ದಾಣ, ಬಸ್ ನಿಲ್ದಾಣ, ವಿಮಾನ ನಿಲ್ದಾಣಗಳು, ರೆಸ್ಟೋರೆಂಟ್‌ಗಳಲ್ಲಿ ಯಾವುದೇ ಪಾಸ್‌ವರ್ಡ್ ಇಲ್ಲದೆ ಉಚಿತ ವೈಫೈ ಮೂಲಕ ಇಂಟರ್‌ನೆಟ್ ಬಳಕೆ ಮಾಡಬಹುದಾಗಿದೆ.

**ಉಚಿತ ವೈಫೈ ಒದಗಿಸಲಿರುವ ಕಂಪನಿಗಳು**

| ಕಂಪನಿ ಹೆಸರು | ವೈಫೈ ಕೇಂದ್ರ |
|---|---|
| ಇಂಡಸ್ ಟವರ್ಸ್ | 140 |
| ಹನಿಕೂಂಬ್ | 2,516 |
| ಡಿ-ವೊಯಿಸ್ | 2,516 |
| ಎಸಿಟಿ | 766 |
| ಒಟ್ಟು | 5,938 |



## ಪಾಲಿಕೆಗೆ ಅನುಮತಿ ನೀಡುವ ಹೊಣೆ

ಸಾರ್ವಜನಿಕರಿಗೆ ಉಚಿತ ಡೇಟಾ ಒದಗಿಸುವ ವೈಫೈ ಕೇಂದ್ರ ಆರಂಭಿಸುವುದಕ್ಕೆ ಅನುಮತಿ ನೀಡುವ ಹೊಣೆಯಲ್ಲಿ ಸರ್ಕಾರ ಬಿಬಿಎಂಪಿಗೆ ನೀಡಿದೆ. ಪಾಲಿಕೆ ವತಿಯಿಂದ ಈವರೆಗೆ 5,938 ವೈಫೈ ಕೇಂದ್ರ ತೆರೆಯಲು ಹಲವು ಸಂಸ್ಥೆಗಳಿಗೆ ಅನುಮತಿ ಕೊಟ್ಟಿದೆ. ಹೀಗಾಗಿ, ನಗರದಲ್ಲಿ ಯಾವುದೇ ಪ್ರದೇಶಗಳಿಗೆ ಹೋದರೂ ಉಚಿತ ವೈಫೈ ಪಡೆಯಲು ಅವಕಾಶ ಸಿಗುತ್ತದೆ.

ಉದಯವಾಣಿ
ಜನಮನದ ಜೀವನಾಡಿ

# 2020ರ ವರ್ಷಾಚರಣೆ 2021ರಲ್ಲಿ ಕಾಣಲಿಲ್ಲ

## ಕಳೆದ ಬಾರಿ ಬ್ರಿಗೇಡ್, ಎಂ.ಜಿ.ರಸ್ತೆಗಳಲ್ಲಿ ಸಂಭ್ರಮಿಸಿದ್ದ ಜನ | ಈ ಬಾರಿ ಹೋಟಲ್‌ಗಳಲ್ಲೇ ಸಂಭ್ರಮ

**ಬೆಂಗಳೂರು:** ಕೊರೊನಾ ಮಹಾಮಾರಿಯಿಂದ 2021ರ ಹೊಸ ವರ್ಷಾಚರಣೆ ಸಂಭ್ರಮಕ್ಕೆ ಸಂಪೂರ್ಣ ಬ್ರೇಕ್ ಬಿದ್ದಿದೆ. ಸಾರ್ವಜನಿಕರು ಮನೆ, ಹೋಟೆಲ್‌ಗಳಿಗಷ್ಟೇ ಸೀಮಿತವಾಗಿದ್ದಾರೆ.

ಸಿಬಿಡಿ ವ್ಯಾಪ್ತಿಗೆಬರುವ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಸೆಂಟ್ ಮಾರ್ಕ್ಸ್ ರಸ್ತೆ, ರೆಸ್ಟ್ ಹೌಸ್ ರಸ್ತೆ ಮತ್ತು ರೆಸಿಡೆನ್ಸಿ ರಸ್ತೆಗಳಲ್ಲಿ ರಾತ್ರಿ ಎಂಟು ಗಂಟೆಯಿಂದಲೇ ವಾಹನ ಸಂಚಾರ ಸಂಪೂರ್ಣ ಬಂದ್ ಮಾಡಲಾಗಿತ್ತು. ಈ ಭಾಗದ ಹೋಟೆಲ್‌ಗಳಲ್ಲಿ ಮೊದಲೇ ಟಿಕೆಟ್ ಕಾಯ್ದಿರಿಸಿದ್ದ ಮಂದಿಗೆ ಮಾತ್ರ ವಾಹನಗಳನ್ನು ಪಾರ್ಕಿಂಗ್ ಮಾಡಿ ನಡೆದುಕೊಂಡು ಹೋಗಲು ಅವಕಾಶ ನೀಡಲಾಗಿತ್ತು. ಇನ್ನೂ ಇಂದಿರಾನಗರ, ಕೋರಮಂಗಲ ಸೇರಿ ನಗರದ ಎಲ್ಲ ಕ್ಲಬ್, ಹೋಟೆಲ್‌ಗಳಲ್ಲಿಯೂ ಇದೇ ಪರಿಸ್ಥಿತಿ ಇತ್ತು. ಮುಂಗಡ ಪಾಸ್ ಪಡೆದು ಹೋಗುವವರು ನೋಂದಣಿ ಪುಸ್ತಕದಲ್ಲಿ ವಿಳಾಸ, ಮೊಬೈಲ್ ನಂಬರ್, ಸಹಿ ಹಾಕಿ ತೆರಳುತ್ತಿದ್ದದ್ದು ಕಂಡು ಬಂತು.

### ಸಂಚಾರ ದಟ್ಟಣೆ

ನಗರದಲ್ಲಿ ನಿಷೇಧಾಜ್ಞೆ ಜತೆಗೆ ಸಂಚಾರ ಮಾರ್ಗ ಬದಲಾವಣೆ ಹಿನ್ನೆಲೆ ನಗರದ ಕೆಲ ರಸ್ತೆಗಳಲ್ಲಿ ಸಂಚಾರ ದಟ್ಟಣೆ ನಿರ್ಮಾಣವಾಗಿತ್ತು. ಕಬ್ಬನ್ ರಸ್ತೆ, ಡಿಕ್ಕನ್ ರಸ್ತೆ, ಟ್ರಿನಿಟಿ ವೃತ್ತ ಸೇರಿ ಕೆಲ ರಸ್ತೆಗಳಲ್ಲಿ ಭಾರೀ ಸಂಚಾರ ದಟ್ಟಣೆ ಉಂಟಾಗಿದ್ದು, ಗಂಟೆಗೂ ಅಧಿಕ ಕಾಲ ವಾಹನ ಸವಾರರು ಟ್ರಾಫಿಕ್‌ನಲ್ಲೇ ನಿಂತು ಹೈರಾಣಾದರು.



### ನಿರಂತರ ಗಸ್ತು ತಿರುಗಿದರು...

ನಗರದ ಸಂಚಾರ ಸೇರಿ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 15000 ಅಧಿಕಾರಿ-ಸಿಬ್ಬಂದಿ ಕರ್ತವ್ಯ ನಿರ್ವಹಿಸಿದರು. ಇದರೊಂದಿಗೆ ಹಿರಿಯ ಪೊಲೀಸ್ ಅಧಿಕಾರಿಗಳು ಸೇರಿ ಹೊಯ್ಸಳ, ಗಸ್ತು ಪೊಲೀಸರು ಎಲ್ಲೆಡೆ ನಿರಂತರವಾಗಿ ಗಸ್ತು ತಿರುಗುತ್ತಿದ್ದು, ಹೋಟೆಲ್‌ನಿಂದ ಗ್ರಾಹಕರು ಹೊರಬಾರದಂತೆ ನೋಡಿಕೊಳ್ಳುವಂತೆ ಮಾಲಿಕರಿಗೆ ಸೂಚಿಸಿದ್ದರು. ಹೀಗಾಗಿ ಯಾರೂ ಹೊರಬಾರದೆ ಹೋಟೆಲ್ ಆವರಣದಲ್ಲೇ ಹೊಸವರ್ಷಾಚರಣೆ ಆಚರಿಸಿಕೊಂಡು ಮನೆಗೆ ತೆರಳಿದರು. ಈ ಮಧ್ಯೆ ತಡರಾತ್ರಿ ಕೆಲವೆಡೆ ಮದ್ಯ ಸೇವಿಸಿ ವಾಹನ ಚಾಲನೆ ಮಾಡಲು ಮುಂದಾದ ಚಾಲಕರನ್ನು ವಶಕ್ಕೆ ಪಡೆದು ಕಾನೂನು ಕ್ರಮಕೈಗೊಳ್ಳಲಾಯಿತು.



### ವಾಹನ ತಪಾಸಣೆ

ರಾತ್ರಿ 10 ಗಂಟೆಯಿಂದಲೇ ನೈಸ್ ರಸ್ತೆ ಸೇರಿ ನಗರದ ಎಲ್ಲೆಡೆ ನಿಯೋಜಿಸಲಾಗಿರುವ ಚೆಕ್ ಪೋಸ್ಟ್‌ಗಳಲ್ಲಿ ವಾಹನಗಳ ತಪಾಸಣೆ ನಡೆಸಲಾಯಿತು. 191 ಕಡೆ ನಾಕಾಬಂದಿ ಹಾಕಲಾಗಿದ್ದು, 60 ಸೆಕ್ಟರ್‌ಗಳನ್ನು ನಿರ್ಮಾಣ ಮಾಡಲಾಗಿತ್ತು. ಜತೆಗೆ ಮಹಿಳೆಯರ ರಕ್ಷಣೆಗೆ ಆದ್ಯತೆ ನೀಡಿರುವ ಪೊಲೀಸರು ಪ್ರತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಹಿಳಾ ಸಹಾಯವಾಣಿ ಕೇಂದ್ರ ತೆರೆಯಲಾಗಿತ್ತು. ಅಲ್ಲದೆ, ನಗರದ 45 ಮೇಲ್ಸೇತುವೆಗಳಲ್ಲಿ ವಾಹನ ಸಂಚಾರ ನಿಷೇಧಿಸಲಾಗಿತ್ತು.




### ರಂಗು ಪಡೆದಿತ್ತು 2020

ಕಳೆದ ಹೊಸ ವರ್ಷಾಚರಣೆ(2020) ಸಂದರ್ಭದಲ್ಲಿ ರಂಗುರಂಗಿನ ದೀಪಗಳು, ಜನಜಂಗುಳಿಯೊಂದಿಗೆ ಬೆಂಗಳೂರಿನ ರಸ್ತೆಗಳು ಕಂಗೊಳಿಸುತ್ತಿದ್ದವು. ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಕೋರಮಂಗಲ, ಇಂದಿರಾನಗರ ಸೇರಿ ಬೆಂಗಳೂರಿನ ಕೆಲ ರಸ್ತೆಗಳು ಪ್ರತಿ ವರ್ಷ ವಿವಿಧ ಬಣ್ಣದ ದೀಪಗಳಿಂದ ರಂಗುಪಡೆದಿದ್ದವು. ಜತೆಗೆ ಸಾವಿರಾರು ಮಂದಿ ರಸ್ತೆ ಮಧ್ಯೆ ನಿಂತು ಹೊಸವರ್ಷವನ್ನು ಭವ್ಯವಾಗಿ ಸ್ವಾಗತಿಸಿದ್ದರು.

**ಪೊಲೀಸರ ಕಟ್ಟೆಚ್ಚರ ನಡುವೆಯೂ**

ಸಾರ್ವಜನಿಕರು ಪಟಾಕಿ ಸಿಡಿಸಿ ಹೊಸ ವರ್ಷವನ್ನು ಆಚರಿಸಿದರು. ಬ್ರಿಗೇಡ್, ರೆಸಿಡೆನ್ಸಿ ರಸ್ತೆಯಲ್ಲಿ ಪೊಲೀಸರಿಗೆ ಸಿಹಿ ಹಂಚಿದರು.



ಉದಯವಾಣಿ
ಜನಮನದ ಜೀವನಾಡಿ

### ಪಾದರಾಯನಪುರ ವಾರ್ಡ್‌ನ 9 ರಸ್ತೆ, 2 ವೃತ್ತಕ್ಕೆ ಹೆಸರಿಡುವ ಹಿನ್ನೆಲೆ

# ಹೆಸರು ಪ್ರಸ್ತಾವನೆ ಕೈಬಿಡಲು ಮನವಿ

**ಬೆಂಗಳೂರು:** ಪಾದರಾಯನಪುರ ವಾರ್ಡ್‌ನ ಪ್ರಮುಖ 9 ರಸ್ತೆ, 2 ವೃತ್ತಗಳಿಗೆ ಒಂದು ಕೋಮಿನ ಹೆಸರು ನಾಮಕರಣ ಮಾಡುವುದಕ್ಕೆ ಸಂಸದರು, ವಿವಿಧ ಪಕ್ಷದ ನಾಯಕರು ಹಾಗೂ ಸಾಮಾಜಿಕ ಜಾಲತಾಣದಲ್ಲಿ ಸಾರ್ವಜನಿಕರಿಂದ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಪ್ರಸ್ತಾವನೆ ಕೈಬಿಡುವಂತೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.



ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಸೆ.8ರಂದು ಪಾದರಾಯನಪುರ ವಾರ್ಡ್‌ನ 11 ರಸ್ತೆ, 2 ವೃತ್ತಗಳಿಗೆ ಒಂದು ನಿರ್ದಿಷ್ಟ ಕೋಮಿನ ಹೆಸರಿಡಲು ನಿರ್ಣಯ ಕೈಗೊಳ್ಳಲಾಗಿತ್ತು.

ಇದಕ್ಕೆ ಸಂಬಂಧಿಸಿದಂತೆ ಪಾಲಿಕೆ ಸಾರ್ವಜನಿಕರಿಂದ ಆಕ್ಷೇಪಣೆ ಕೋರಿತ್ತು. ಸಂಸದರಾದ ಅನಂತಕುಮಾರ್ ಹೆಗಡೆ, ಪಿ.ಸಿ. ಮೋಹನ್, ಮಲ್ಯ, ಎನ್.ಆರ್.ರಮೇಶ್ ಸೇರಿ ಹಲವರು ಸಾಮಾಜಿಕ ಮಾಧ್ಯಮ, ಇಮೇಲ್ ಹಾಗೂ ಪತ್ರ ಮುಖೇನ ಆಕ್ಷೇಪಣೆ ವ್ಯಕ್ತಪಡಿಸಿರುವ ಹಿನ್ನೆಲೆ ಮುನ್ಸಿಪಲ್ ಕಾಯ್ದೆ-1976 ಪ್ರಕರಣ 98ರ ಅನ್ವಯ ನಾಮಕರಣ ಪ್ರಕ್ರಿಯೆ ರದ್ದುಗೊಳಿಸುವಂತೆ ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗೆ ಆಯುಕ್ತರು ಮನವಿ ಮಾಡಿದ್ದಾರೆ.

**ಒಂದು ಕೋಮಿನವರನ್ನು ತೃಪ್ತಿಪಡಿಸುವ ಕೆಲ** ಇದ್ದಾರೆ. ಆದರೆ, ಪ್ರಸ್ತಾವಿತ ರಸ್ತೆ ವೃತ್ತಗಳ ನಾಮಕರಣದಲ್ಲಿ ಹಿಂದುಗಳ ಹೆಸರಿಲ್ಲ. ಇದು ದ್ವಿರಾಷ್ಟ್ರ ಸಿದ್ಧಾಂತದಂತಿದ್ದು, ಬಿಬಿಎಂಪಿ ಬೇಜವಾಬ್ದಾರಿತನ ಪ್ರದರ್ಶಿಸಿದೆ ಎಂದು ದೂರಿದ್ದಾರೆ. ಹೊಸ ಹೆಸರು ನಾಮಕರಣ ಮಾಡುವುದಿದ್ದರೆ, ದೇಶಭಕ್ತರು, ಸ್ವಾತಂತ್ರ್ಯ ಹೋರಾಟಗಾರರ ಹೆಸರಿಡಿ, ಒಂದು ಕೋಮಿನವರನ್ನು ತೃಪ್ತಿಪಡಿಸಲು, ವೈಭವೀಕರಿಸಲು ಎಡೆ ಮಾಡಿಕೊಡದೆ ಪ್ರಸ್ತಾವನೆ

## ಮಾಜಿ ಸದಸ್ಯರ ತಾತನ ಹೆಸರಿಡಬೇಡಿ

ಪಾದರಾಯನಪುರದ ರಸ್ತೆ, ವೃತ್ತಗಳ ನಾಮಕರಣದ ಪ್ರಸ್ತಾವಿತ ಹೆಸರುಗಳಲ್ಲಿ ಯಾರೊಬ್ಬರು ಸಮಾಜಕ್ಕೆ ಯಾವುದೇ ಕೊಡುಗೆ ನೀಡಿಲ್ಲ. ಪೆಹಲ್ವಾನ್ ಫಾರೂಕ್ ಪಾಷಾ ಸಾಬ್ ಈ ವಾರ್ಡ್‌ನ ಮಾಜಿ ಸದಸ್ಯ ಇಮ್ರಾನ್ ಪಾಷಾ ಅವರ ತಾತ. ಎಲ್ದಿರ್ ಬಾಬು ಸಾಬ್ ರೌಡಿಶೀಟರ್. ಟೋಪಿ ರಫೀಕ್ ಸಾಬ್ ಮತ್ತು ರೋಷನ್ ಫಯಾಜ್ ಬಾಡಿಗೆ ಮನೆ ಕೊಡಿಸುವ ದಲ್ಲಾಳಿಗಳು. ಹಾಜಿ ವಝೀರ್ ಸಾಬ್ ಮತ್ತು ಹಾಜಿ ಶಾಮಿರ್ ಸಾಬ್ ರಿಯಲ್ ಎಸ್ಟೇಟ್ ಉದ್ಯಮಿ ಇವರ ಹೆಸರನ್ನು ನಾಮಕರಣ ಮಾಡಬಾರದು ಎಂದು ಬೆಂಗಳೂರು ದಕ್ಷಿಣ ಜಿಲ್ಲೆ ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಆರ್.ರಮೇಶ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

# ಸುವಿಧಾ ಕ್ಯಾಬಿನ್ ಟೆಂಡರ್ ಅವ್ಯವಹಾರ: ಆರೋಪ

**ಬೆಂಗಳೂರು:** ನಗರದಲ್ಲಿ ಪೌರಕಾರ್ಮಿಕರಿಗೆ ಮಸ್ಟರಿಂಗ್ ಸೆಂಟರ್‌ನ ಸಮೀಪವೇ ವಿಶ್ರಾಂತಿ ಹಾಗೂ ಶೌಚಗೃಹ ಸೌಲಭ್ಯ ನೀಡುವ ಉದ್ದೇಶದಿಂದ ಪರಿಚಯಿಸಲಾಗಿರುವ 'ಸುವಿಧಾ ಕ್ಯಾಬಿನ್' ಯೋಜನೆಯಲ್ಲಿ ಅಕ್ರಮ ನಡೆದಿದ್ದು, ಕೂಡಲೇ ಟೆಂಡರ್ ಆದೇಶ ತಡೆ ರದ್ದುಪಡಿಸಬೇಕು ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಜೆಪಿ ಅಧ್ಯಕ್ಷ ಎನ್.ಆರ್. ರಮೇಶ್ ಆರೋಪಿಸಿದ್ದಾರೆ. ನಗರದಲ್ಲಿ ಪೌರಕಾರ್ಮಿಕರಿಗೆ ಮೂಲಸೌಲಭ್ಯ ನೀಡುವ ಉದ್ದೇಶದಿಂದ 'ಶುಭ್ರ ಬೆಂಗಳೂರು' ಯೋಜನೆ ಅನುದಾನದಲ್ಲಿ ಮಸ್ಟರಿಂಗ್ ಕೇಂದ್ರಗಳಲ್ಲಿ 221 'ಸುವಿಧಾ ಕ್ಯಾಬಿನ್' ನಿರ್ಮಾಣಕ್ಕೆ 18.31 ಕೋಟಿ ರೂ.ಮೊತ್ತದ ಟೆಂಡರ್ ಕರೆಯಲಾಗಿತ್ತು. ಆದರೆ, ಇದು ಕಾನೂನು ಬಾಹಿರವಾಗಿ ಅರ್ಹತೆಯಿಲ್ಲದ ಗುತ್ತಿಗೆದಾರರಿಗೆ ನೀಡಲಾಗಿದೆ. ಹೀಗಾಗಿ, ಈ ಪ್ರಸ್ತಾವನೆ ತಿರಸ್ಕರಿಸಬೇಕು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ,ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗೆ ಗುರುವಾರ ದೂರು ನೀಡಿದ್ದಾರೆ. ಈ ಸಂಬಂಧ ಪ್ರತಿಕ್ರಿಯಿಸಿದ ಎನ್. ಆರ್.ರಮೇಶ್ ಅವರು, ತಲಾ ಒಂದು ಸುವಿಧಾ ಕ್ಯಾಬಿನೆಟ್‌ಗೆ 7.90 ಲಕ್ಷ ರೂ. ಗಳಂತೆ 221 ಕ್ಯಾಬಿನ್‌ಗಳಿಗೆ (ಜಿಎಸ್‌ಟಿ ಬಿಟ್ಟು) 17.45 ಕೋಟಿ ರೂ.ಗೆ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಮೆ.ಅಗ್ರ್ಯಾ ಇನ್ಫ್ರಾಟೆಕ್ ಎಂಬ ಸಂಸ್ಥೆಗೆ 18.31 ಕೋಟಿ ರೂ.ಗೆ ಟೆಂಡರ್ ನೀಡಲಾಗಿದೆ. ಆದರೆ, ಈ ಸಂಸ್ಥೆ ಫೆ.2020ರಂದು ಸರ್ಕಾರದಲ್ಲಿ ನೋಂದಣಿ ಮಾಡಿಸಿಕೊಂಡಿದೆ. 2015-16 ರಿಂದ 2019-20ರ ಅವಧಿಯಲ್ಲಿ ಕಾರ್ಯ ನಿರ್ವಹಿಸಿದ ಬಗ್ಗೆ ನಕಲಿ ಪ್ರಮಾಣ ಪತ್ರ ಸಲ್ಲಿಸಿದ್ದಾರೆ. ಅಲ್ಲದೆ, ಫೆಬ್ರವರಿಯಲ್ಲಿ 1.34 ವಾರ್ಷಿಕ ವಹಿವಾಟು ತೋರಿಸಿದ್ದು, ಕೇವಲ 7 ತಿಂಗಳ ನಂತರ 42.53 ಕೋಟಿ ರೂ. ವಹಿವಾಟು ಲೆಕ್ಕ ತೋರಿಸಲಾಗಿದೆ ಎಂದು ಆರೋಪಿಸಿದರು.

ಉದಯವಾಣಿ
ಜನಮನದ ಜೀವನಾಡಿ

# ಹೊಸ ವರ್ಷಕ್ಕೆ ಲಸಿಕೆ ಸಿಹಿ

## ರಾಜ್ಯದ ಐದು ಜಿಲ್ಲೆಗಳಲ್ಲಿ ನಾಳೆ ಲಸಿಕೆ ವಿತರಣೆ ಪ್ರಾತ್ಯಕ್ಷಿಕೆ

## ಲಸಿಕೆಗೆ ಒಪ್ಪಿಗೆ ನೀಡುವ ಬಗ್ಗೆ ಇಂದು ತೀರ್ಮಾನ ಸಾಧ್ಯತೆ

**ಬೆಂಗಳೂರು/ನವದೆಹಲಿ:** ಹೊಸವರ್ಷ ಆಗಮಿಸುತ್ತಿರುವ ಹೊತ್ತಿನಲ್ಲೇ, ದೇಶ ಲಸಿಕೆಯ ಆಗಮನಕ್ಕಾಗಿ ಕಾದು ಕುಳಿತಿದೆ. ಈ ಸಂದರ್ಭದಲ್ಲೇ ದೇಶವಾಸಿಗಳಿಗೆ ಸಿಹಿ ಸುದ್ದಿ ನೀಡುವ ಬಗ್ಗೆ ಭಾರತ ಔಷಧ ನಿಯಂತ್ರಣ ನಿರ್ದೇಶನಾಲಯ ಸುಳಿವು ನೀಡಿದೆ.

ಈ ಮಧ್ಯೆ ಕೇಂದ್ರ ಸರ್ಕಾರ ಶನಿವಾರದಿಂದ ದೇಶದ ಎಲ್ಲಾ ರಾಜ್ಯಗಳಲ್ಲೂ ಡ್ರೈರನ್ ನಡೆಸುವಂತೆ ಸೂಚಿಸಿರುವುದು ಕೊರೊನಾ ವಿರುದ್ಧದ ಹೋರಾಟದಲ್ಲಿ ಹೊಸ ಆಶಾಭಾವ ಹುಟ್ಟಿಸಿದೆ.

ಇತ್ತ ಕರ್ನಾಟಕದಲ್ಲೂ ಡ್ರೈರನ್‌ಗೆ ಅಗತ್ಯ ಸಿದ್ಧತೆಗಳು ಶುರುವಾಗಿವೆ. ಶನಿವಾರ ನಡೆಯಲಿರುವ ವಿತರಣೆ ಪ್ರಾತ್ಯಕ್ಷಿಕೆ(ಡ್ರೈರನ್)ಗಾಗಿ ಆರೋಗ್ಯ ಇಲಾಖೆ ಸಜ್ಜಾಗಿದ್ದು, ಇದಕ್ಕಾಗಿ ಐದು ಜಿಲ್ಲೆಗಳ 15 ಆರೋಗ್ಯ ಕೇಂದ್ರಗಳನ್ನು ಆಯ್ಕೆ ಮಾಡಿದೆ. ಅಷ್ಟೇ ಅಲ್ಲ 100ಕ್ಕೂ ಹೆಚ್ಚು ಆರೋಗ್ಯ ಸಿಬ್ಬಂದಿಯನ್ನು ನಿಯೋಜಿಸಿದೆ.

ಬಿಬಿಎಂಪಿ (ಬೆಂಗಳೂರು ನಗರ ಒಳಗೊಂಡು), ಮೈಸೂರು, ಶಿವಮೊಗ್ಗ, ಕಲಬುರಗಿ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಡ್ರೈ ರನ್ ನಡೆಯಲಿದೆ. ಈ ಜಿಲ್ಲೆಗಳ ಜಿಲ್ಲಾಸ್ಪತ್ರೆ, ಒಂದು ತಾಲೂಕು ಆಸ್ಪತ್ರೆ ಮತ್ತು ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿ ತಲಾ ಮೂರು ಆರೋಗ್ಯ ಕೇಂದ್ರವನ್ನು ಗುರುವಾರ ಆಯ್ಕೆ ಮಾಡಲಾಗಿದೆ. ಈ ಕೇಂದ್ರಗಳಲ್ಲಿ ತಲಾ ಐದು ಸಿಬ್ಬಂದಿ, ಲಸಿಕೆ ವಿತರಣೆಗೆ ಬೇಕಾದ ಅಗತ್ಯ ಸಲಕರಣೆಗಳನ್ನು ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ನಿಯೋಜನೆಗೊಂಡ ಆರೋಗ್ಯ ಸಿಬ್ಬಂದಿಗೆ ಶುಕ್ರವಾರ (ಜ.1) ಮಧ್ಯಾಹ್ನ 2 ಗಂಟೆಗೆ ಕೇಂದ್ರ ಸರ್ಕಾರವು ಆನ್‌ಲೈನ್ ಮೂಲಕ ತರಬೇತಿ ನೀಡಲಿದೆ.

**ಸಿಬ್ಬಂದಿಗೆ ಅನುಭವ:** ಮೊದಲ ಹಂತದ ಲಸಿಕೆ ವಿತರಣೆ ಸಂದರ್ಭದಂತೆಯೇ ಎಲ್ಲಾ ಕ್ರಮಗಳು ಕೈಗೊಳ್ಳಲಾಗುತ್ತದೆ. ಭವಿಷ್ಯದಲ್ಲಿ ಕೊರೊನಾ ಲಸಿಕಾ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಡೆಸಲು ಸಹಾಯಕವಾಗುವ ನಿಟ್ಟಿನಲ್ಲಿ ಈ ಡ್ರೈ ರನ್ ಹಮ್ಮಿಕೊಳ್ಳಲಾಗಿದೆ. ಈ ವೇಳೆ ಎದುರಾಗುವ ಹೊಸ ಸಮಸ್ಯೆ, ಗೊಂದಲಗಳನ್ನು ಪಟ್ಟಿ ಮಾಡಿ ಕೇಂದ್ರಕ್ಕೆ ವರದಿ ನೀಡಬೇಕು. ಜತೆಗೆ ಸಿಬ್ಬಂದಿಗೆ ಲಸಿಕೆಯ ವಿತರಣೆ ಕುರಿತು ಅನುಭವ ಸಿಗಲಿದೆ ಎಂದು ಆರೋಗ್ಯ ಇಲಾಖೆ ಲಸಿಕೀಕರಣ ವಿಭಾಗದ ಉಪ ನಿರ್ದೇಶಕಿ ಡಾ.ಬಿ.ಎನ್.ರಜನಿ ತಿಳಿಸಿದ್ದಾರೆ.



| | |
|---|---|
| ಆಯ್ಕೆಯಾದ ಜಿಲ್ಲೆಗಳು 5 | ಆರೋಗ್ಯ ಕೇಂದ್ರ ಗಳು 15 |
| ಆರೋಗ್ಯ ಸಿಬ್ಬಂದಿ ನಿಯೋಜನೆ 100 | ಪ್ರಾತ್ಯಕ್ಷಿಕೆ ಫಲಾನು ಭವಿಗಳು 375 |

### ಮೊದಲ ದಿನವೇ ಸಿಹಿಸುದ್ದಿ

ಇನ್ನು ಭಾರತ ಔಷಧ ನಿಯಂತ್ರಣ ಪ್ರಾಧಿಕಾರ ಹೊಸ ವರ್ಷದ ಮೊದಲ ದಿನವೇ ಸಿಹಿ ಸುದ್ದಿ ನೀಡುವುದಾಗಿ ಹೇಳಿದೆ. ಲಸಿಕೆ ತಯಾರಕ ಸಂಸ್ಥೆಗಳು ತುರ್ತು ಬಳಕೆಗೆ ಅನುಮತಿ ನೀಡುವಂತೆ ಮನವಿ ಮಾಡಿಕೊಂಡಿವೆ. ಬುಧವಾರ ಮೊದಲ ಹಂತದ ಸಭೆ ನಡೆದು, ಶುಕ್ರವಾರ 2ನೇ ಹಂತದ ಪರಿಶೀಲನಾ ಸಭೆ ನಡೆಯಲಿದೆ. ಈ ವೇಳೆ ಲಸಿಕೆಗೆ ಒಪ್ಪಿಗೆ ಸಿಗಬಹುದಾಗಿದೆ.

### 375 ಮಂದಿ ಪ್ರಾತ್ಯಕ್ಷಿಕೆ ಫಲಾನುಭವಿಗಳು

ಡ್ರೈ ರನ್‌ನಲ್ಲಿ ಫಲಾನುಭವಿಗಳಾಗಿ (ಲಸಿಕೆ ಪಡೆಯುವರು) ಭಾಗವಹಿಸಲು ಪ್ರತಿ ಆರೋಗ್ಯ ಕೇಂದ್ರಕ್ಕೆ ತಲಾ 25 ಮಂದಿಯಂತೆ ಒಟ್ಟು 15 ಆರೋಗ್ಯ ಕೇಂದ್ರಕ್ಕೆ 375 ಮಂದಿಯನ್ನು ನಿಯೋಜಿಸಲಾಗಿದೆ. ಇವರು ಲಸಿಕೆ ಪಡೆಯುವಾಗ ಬರುವಂತೆ ಅಗತ್ಯ ದಾಖಲಾತಿಯನ್ನು ತರಬೇಕಿದೆ. ಈ ದಾಖಲಾತಿಗಳನ್ನು ಕೇಂದ್ರ ಸರ್ಕಾರದ ಅಧಿಕೃತ ವೆಬ್‌ಸೈಟ್‌ನಲ್ಲಿ ಆರೋಗ್ಯ ಕೇಂದ್ರದ ಸಿಬ್ಬಂದಿ ಪರಿಶೀಲನೆ ನಡೆಸಲಿದ್ದಾರೆ. ಈ ಎಲ್ಲಾ ಪ್ರಾತ್ಯಕ್ಷಿಕೆ ಫಲಾನುಭವಿಗಳು ಆರೋಗ್ಯ ಕಾರ್ಯಕರ್ತರೇ ಆಗಿರಲಿದ್ದಾರೆ.

### ಹೇಗಿರಲಿದೆ ಲಸಿಕೆ ಡ್ರೈ ರನ್ ಆರೋಗ್ಯ ಕೇಂದ್ರ?

ಆರೋಗ್ಯ ಕೇಂದ್ರದಲ್ಲಿ ಮೂರು ಕೊಠಡಿಗಳಿರಲಿವೆ. ಒಂದರಲ್ಲಿ ಫಲಾನುಭವಿಗಳ ಮಾಹಿತಿ ಸಂಗ್ರಹ/ ವಿಚಾರಣೆ, ಮತ್ತೊಂದರಲ್ಲಿ ಆರೋಗ್ಯ ತಪಾಸಣೆ ಮತ್ತು ಮಾಹಿತಿ, ಮೂರನೆಯದ್ದು, ಲಸಿಕೆ/ ಚುಚ್ಚು ಮದ್ದಿನ ಕೊಠಡಿಯಾಗಿರುತ್ತದೆ. ಆ ಬಳಿಕ ವಿಶ್ರಾಂತಿಗೆ ಸ್ಥಳವನ್ನು ನಿಯೋಜಿಸಲಾಗಿರುತ್ತದೆ. ಈ ವೇಳೆ ಚುಚ್ಚು ಮದ್ದು ನೀಡುವುದೊಂದನ್ನು ಬಿಟ್ಟು ಬಾಕಿ ಎಲ್ಲಾ ಚಟುವಟಿಕೆಗಳು ನಡೆಯಲಿವೆ ಎಂದು ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.



ಕಟ್ಟಕಡೆಯ ಅರ್ಹ ಫಲಾನುಭವಿಗೂ ಸ್ವದೇಶಿಯಾಗಿ ಅಭಿವೃದ್ಧಿಪಡಿಸಿರುವ ಲಸಿಕೆ ಸಿಗುವ ಹಾಗೆ ಮಾಡಲಾಗುತ್ತದೆ. ಜಗತ್ತಿನ ಅತಿ ದೊಡ್ಡ ಲಸಿಕೆ ವಿತರಣೆಗೆ ನಾವು ಸಿದ್ಧವಾಗುತ್ತಿದ್ದೇವೆ.

• ನರೇಂದ್ರ ಮೋದಿ, ಪ್ರಧಾನಿ

### ಮೊಬೈಲ್ ಸಂದೇಶ

ಡ್ರೈ ರನ್ ಹಿಂದಿನ ದಿನ ನಿಯೋಜಿಸಿರುವ 375 ಫಲಾನುಭವಿಗಳ ಮೊಬೈಲ್‌ಗೆ ಸಂದೇಶ ಬರಲಿದೆ. ಇದರಲ್ಲಿ ಆರೋಗ್ಯ ಕೇಂದ್ರ, ಸಮಯ ಇರುತ್ತದೆ. ಅಧಿಕೃತ ಗುರುತಿನ ಚೀಟಿ ತರುವಂತೆ ಸೂಚಿಸಲಾಗಿರುತ್ತದೆ.



ಡ್ರೈ ರನ್‌ಗೆ ಬೇಕಾದ ಅಗತ್ಯ ತಯಾರಿ ಮಾಡಿಕೊಳ್ಳಲಾಗಿದೆ. ಶುಕ್ರವಾರ ಕೇಂದ್ರದ ತರಬೇತಿ ನಡೆಯಲಿದ್ದು, 100 ಆರೋಗ್ಯ ಇಲಾಖೆ ಸಿಬ್ಬಂದಿ ಭಾಗವಹಿಸುತ್ತಿದ್ದಾರೆ.

• ಜಾವೇದ್ ಅಖ್ತರ್, ಆ. ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ

ಸಂಯುಕ್ತ ಕರ್ನಾಟಕ

# ಈ ವರ್ಷದ ವರ್ಷಾಚರಣೆ ಒಣ ಗಣೇಶ

ಸಂ.ಕ ಸಮಾಚಾರ ಬೆಂಗಳೂರು

ಹೊಸ ವರ್ಷಾಚರಣೆಗೆ ಸಿದ್ಧವಾಗುತ್ತಿದ್ದ ಬೆಂಗಳೂರಿಗರಿಗೆ ಈ ಬಾರಿ ಕೊರೊನಾ ಕಡಿವಾಣ ಹಾಕಿದ್ದು ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡ ಹಿನ್ನೆಲೆಯಲ್ಲಿ ನಗರದ ಹೊಸ ವರ್ಷಾರಣೆಗೆ ರಂಗು ನೀಡುತ್ತಿದ್ದ ರಸ್ತೆಗಳು ಕಳೆಗುಂದಿದ್ದವು.

ಹೊಸ ವರ್ಷಕ್ಕೆ ಸ್ವಾಗತ ಕೋರಲು ಎಂಜಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ಗಳಲ್ಲಿ ಜನಜಂಗುಳಿಯೇ ಸೇರುತ್ತಿತ್ತು. ಮಧ್ಯರಾತ್ರಿ ಆಗುವ ವೇಳೆಗೆ ಈ ರಸ್ತೆಗಳಲ್ಲಿ ಜನಸಾಗರವೇ ಸೇರಿ ಗುಂಡುಸೂಜಿ ಬಿದ್ದರೂ ಕೆಳಗೆ ಬೀಳದಂತಹ ಜನರು ಸೇರುತ್ತಿದ್ದರು. ಅದರಲ್ಲೂ ಯುವ ಜನತೆ ಸಂಜೆ 5ರಿಂದಲೇ ಈ ರಸ್ತೆಗಳತ್ತ ಧಾವಿಸುತ್ತಿದ್ದರು. ಆದರೆ, ಈ ಬಾರಿ ಬೆರಳೆಣಿಕೆಯಷ್ಟು ಮಂದಿಯನ್ನು ಬಿಟ್ಟರೆ ಜನರೇ ಕಾಣಿಸಲಿಲ್ಲ.

ಕ್ರಿಸ್‌ಮಸ್ ಹಬ್ಬ ಆರಂಭವಾಗುತ್ತಿದ್ದಂತೆಯೇ ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಎಂ.ಜಿ. ರಸ್ತೆಗಳಲ್ಲಿ ವಾಣಿಜ್ಯ ವ್ಯವಹಾರ ಜೋರಾಗುತ್ತಿತ್ತು. ಯುವಜನತೆ ಕೂಡಾ ಸಂಜೆ ವೇಳೆಗೆ ಇತ್ತ ಹೆಜ್ಜೆ ಹಾಕುತ್ತಾ ತಮ್ಮದೇ ಆದ ಲೋಕದಲ್ಲಿ ತೇಲುತ್ತಿದ್ದರು. ಆದರೆ, ಈ ಬಾರಿ ಇಲ್ಲಿ ಹೊಸ ವರ್ಷದ ಆಹ್ವಾನದ ಕಳೆಯೇ ಇಲ್ಲವಾಗಿದೆ.

2020ರ ಆರಂಭಕ್ಕೆ ಸ್ವಾಗತ ಕೋರಲು ಜನರ ಗುಂಪು ಸೇರಿತ್ತು. ಈ ಭಾಗದಲ್ಲಿರುವ ಬಾರ್, ಪಬ್, ರೆಸ್ಟೋರೆಂಟ್‌ಗಳಲ್ಲಿ ಕಿಕ್ಕಿರಿದು ಜನ ಸೇರಿದ್ದರು. ನಿಷೇಧಾಜ್ಞೆ ಜಾರಿ ಹಾಗೂ ವಾಹನಗಳ ನಿಲುಗಡೆಗೆ ಅವಕಾಶವೇ ಇಲ್ಲವಾದ್ದರಿಂದ ಇತ್ತ ಕಡೆ ತಲೆ ಹಾಕಲೇ ಇಲ್ಲ. ಕೆಲವರು ಮಾತ್ರ ರೆಸ್ಟೋರೆಂಟ್, ಪಬ್‌ಗಳಿಗೆ ಭೇಟಿ ನೀಡಿದರಾದರೂ ಕೆಲವೇ ಗಂಟೆಗಳಲ್ಲಿ ಜಾಗ ಖಾಲಿ ಮಾಡಿದ್ದರು.

ಬಾರ್, ಪಬ್, ರೆಸ್ಟೋರೆಂಟ್‌ಗಳಿಗೆ ಬರುವವರು ಮುಂಚಿತವಾಗಿಯೆ ಕಾಯ್ದಿರಿಸಿ ಕೂಪನ್ ಪಡೆದುಕೊಳ್ಳಬೇಕು. ಕೂಪನ್ ತೋರಿಸಿದಲ್ಲಿ ಮಾತ್ರ ಬ್ರಿಗೇಡ್ ರಸ್ತೆ, ಚರ್ಚ್ ಸ್ಟೀಟ್, ಎಂ.ಜಿ. ರಸ್ತೆಗಳಿಗೆ ಪ್ರವೇಶ ನೀಡಲಾಗುತ್ತಿತ್ತು. ಇದು ಇಂದಿರಾನಗರ, ಕೋರಮಂಗಲದ ರಸ್ತೆಗಳಲ್ಲೂ ಮಾತ್ರವಲ್ಲದೆ ನಗರದ ಇನ್ನಿತರ ಪ್ರದೇಶಕ್ಕೂ ಅನ್ವಯವಾಗಿತ್ತು. ಆದಾಗ್ಯೂ ಎಂ.ಜಿ ರಸ್ತೆ, ಚರ್ಚ್‌ಸ್ಟ್ರೀಟ್ ಹಾಗೂ ಕೋರಮಂಗಲ ಸೇರಿದಂತೆ ಕೆಲವಡೆ ತಮ್ಮ ಕುಟುಂಬದವರು ಹಾಗೂ ಗೆಳೆಯರೊಂದಿಗೆ ಹಲವರು ಪಬ್, ಹೋಟೆಲ್ ಬಾರ್‌ಗಳಲ್ಲಿ ಮುಂಚಿತವಾಗಿ ಬುಕ್ಕಿಂಗ್ ಮಾಡಿ ಹೊಸ ವರ್ಷದ ಸಂಭ್ರಮ ಆಚರಿಸಿದ ಬಗೆಗೂ ವರದಿಯಾಗಿವೆ.



**ವರ್ಷಾರಣೆ ವೇಳೆ ಅಹಿತಕರ ಘಟನೆ ನಡೆಯದಂತೆ ಹಾಗೂ ಜನರು ಸೇರದಂತೆ ಎಲ್ಲ ಕಡೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದರು.**

## ವಾಹನ ಸಂಚಾರ ವಿರಳ

ಹೊಸ ವರ್ಷಾಚರಣೆಗೆ ಅವಕಾಶ ಇಲ್ಲದೇ ಇದ್ದುದರಿಂದ ಹಾಗೂ ವಾಹನಗಳ ಸಂಚಾರಕ್ಕೆ ಕಡಿವಾಣ ಹಾಕಿದ ಹಿನ್ನೆಲೆಯಲ್ಲಿ ನಗರದ ಬಹುತೇಕ ರಸ್ತೆಗಳು ಖಾಲಿ ಹೊಡೆಯುತ್ತಿದ್ದರೆ ರೆಸ್ಡಿಡೆನ್ಸಿ ರಸ್ತೆ ಸೇರಿದಂತೆ ಅನೇಕ ಕಡೆ 9ರ ವೇಳೆ ಬಾರ್ ಮತ್ತು ಪಬ್‌ಗಳತ್ತ ಧಾವಿಸುವವರ ಸಂಖ್ಯೆ ಅಧಿಕವಾಗಿದ್ದರಿಂದ ಹಲವಾರು ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಕಂಡುಬಂದವು.

## ಮಾಸ್ಕ್ ಇಲ್ಲದವರಿಗೆ ದಂಡ

ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಎಂ.ಜಿ. ರಸ್ತೆಗಳಲ್ಲಿ ಕೆಲವರು ಮಾಸ್ಕ್ ಧರಿಸದೇ ರಾಜಾರೋಷವಾಗಿ ಓಡಾಡುತ್ತಿದ್ದನ್ನು ಗಮನಿಸಿದ ಪೊಲೀಸರು ಅಂತಹವರಿಗೆ ಸ್ಥಳದಲ್ಲೇ ದಂಡ ವಿಧಿಸಿದ್ದಲ್ಲದೆ, ಮತ್ತೆ ಮಾಸ್ಕ್ ಧರಿಸದೇ ಓಡಾಡಿದರೆ ದುಪ್ಪಟ್ಟು ದಂಡ ವಿಧಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

## ಎಲ್ಲೆಡೆ ಸಿಸಿ ಕ್ಯಾಮೆರಾ

ವರ್ಷಾಚರಣೆಯ ಸ್ಥಳಗಳಾದ ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ರೆಸಿಡೆನ್ಸಿ ರಸ್ತೆ ಮತ್ತು ಮ್ಯೂಸಿಯಂ ರಸ್ತೆಗಳಲ್ಲಿ ವಾಹನ ನಿಲುಗಡೆಗೂ ಸಹ ನಿರ್ಬಂಧ ವಿಧಿಸಲಾಗಿತ್ತು. ಗುಂಪು ಸೇರದಂತೆ ಗಮನಿಸಲು ಎಲ್ಲ ಕಡೆ ಸಿಸಿ ಕ್ಯಾಮೆರಾ ಅಳವಡಿಸಿ ಅದರ ಮೂಲಕ ಎಲ್ಲರ ಚಲನವಲನವನ್ನು ಗಮನಿಸಲಾಗುತ್ತಿತ್ತು.

## ಮೇಲ್ಸೇತುವೆ ಸಂಚಾರ ಬಂದ್

ನಿಷೇಧಾಜ್ಞೆ ಹಿನ್ನೆಲೆಯಲ್ಲಿ ರಾತ್ರಿ ನಗರದ ಎಲ್ಲ ಮೇಲ್ಸೇತುವೆಗಳನ್ನು ಬಂದ್ ಮಾಡಲಾಯಿತು. ಇದು ಮಾತ್ರವಲ್ಲದೆ, ಎಂ.ಜಿ. ರಸ್ತೆ ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ಗಳಲ್ಲಿ ವಾಹನಗಳ ಸಂಚಾರಕ್ಕೆ ಕಡಿವಾಣ ಹಾಕಿದ್ದಲ್ಲದೆ ಅನಗತ್ಯವಾಗಿ ಜನರ ಓಡಾಟಕ್ಕೂ ನಿಷೇಧ ಹೇರಲಾಯಿತು.

## ಪೊಲೀಸರ ಕಣ್ಗಾವಲು

ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಎಂ.ಜಿ. ರಸ್ತೆಗಳಲ್ಲಿ ಹೊಸ ವರ್ಷಾಚರಣೆಯನ್ನು ಕಟ್ಟುನಿಟ್ಟಾಗಿ ನಿಷೇಧ ಮಾಡಿದ್ದರಿಂದ ಎಲ್ಲ ಕಡೆ ಪೊಲೀಸರನ್ನು ನಿಯೋಜನೆ ಮಾಡಲಾಗಿತ್ತು. ಈ ರಸ್ತೆಗಳಲ್ಲಿ ಸಂಜೆಯಿಂದಲೇ ಶ್ವಾನದಳದ ಮೂಲಕ ಪರಿಶೀಲನೆ ಮಾಡಲಾಯಿತು. ಪೊಲೀಸರು ವಾಹನಗಳ ತಪಾಸಣೆ ಮಾಡುತ್ತಿದ್ದರು.

ಸಂಯುಕ್ತ ಕರ್ನಾಟಕ

# ಹೊಸದಾಗಿ ರೂಪಾಂತರ ಸೋಂಕು ತಗುಲಿಲ್ಲ

**ಸಂ.ಕ. ಸಮಾಚಾರ ಬೆಂಗಳೂರು:** ರಾಜ್ಯದಲ್ಲಿ ಏಳು ಮಂದಿಯನ್ನು ಹೊರತುಪಡಿಸಿದರೆ ವಿದೇಶದಿಂದ ಬಂದ ಬೇರೆಯವರಿಗೆ ರೂಪಾಂತರ ಸೋಂಕು ತಗುಲಿಲ್ಲ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಬ್ರಿಟನ್‌ನಿಂದ ಬಂದ 34 ಪ್ರಯಾಣಿಕರಿಗೆ ಕೊರೊನಾ ಪಾಸಿಟಿವ್ ಬಂದಿದ್ದು, ಅವರ ಸಂಪರ್ಕದಲ್ಲಿದ್ದ ನಾಲ್ಕು ಜನರಿಗೂ ಕೊರೊನಾ ಸೋಂಕು ದೃಢಪಟ್ಟಿದೆ. 34 ಜನರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ತೀವ್ರತರದ ರೋಗ ಸಮಸ್ಯೆ ಕಂಡುಬಂದಿಲ್ಲ. ರೂಪಾಂತರಗೊಂಡ ಕೊರೊನಾ ವೈರಾಣು ಬಿಬಿಎಂಪಿ ವ್ಯಾಪ್ತಿಯ ಮೂರು ಹಾಗೂ ಶಿವಮೊಗ್ಗದ ಏಳು ಮಂದಿಯಲ್ಲಿ ಕೊರೊನಾ ದೃಢಪಟ್ಟಿದೆ. ಮತ್ತೆ ಹೊಸ ಪ್ರಕರಣ ದೃಢಪಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು.

ವಿದೇಶದಿಂದ ಆಗಮಿಸಿ ನಾಪತ್ತೆಯಾಗಿದ್ದ ಕೆಲವರನ್ನು ಪತ್ತೆ ಮಾಡಲಾಗಿದೆ. 199 ಮಂದಿ ಪತ್ತೆಯಾಗಿಲ್ಲ. ಇವರಲ್ಲಿ 80 ಮಂದಿ ನಮ್ಮ ದೇಶದವರಲ್ಲ. ಅವರನ್ನೂ ಪತ್ತೆಹಚ್ಚುವ ಕೆಲಸವನ್ನು ಗೃಹ ಇಲಾಖೆ ಮಾಡುತ್ತಿದೆ. ಅವರಲ್ಲಿ 24 ಜನ ನಮ್ಮ ದೇಶದವರು. ವಿದೇಶದಿಂದ ಆಗಮಿಸಿರುವ ಪ್ರಯಾಣಿಕರನ್ನು ಶುಕ್ರವಾರ ಬೆಳಗ್ಗೆ ವೇಳೆಗೆ ಗೃಹ ಇಲಾಖೆ ಪತ್ತೆಹಚ್ಚುವ ಸಾಧ್ಯತೆಗಳಿವೆ ಎಂದು ತಿಳಿಸಿದರು.

ರಾತ್ರಿ ಕರ್ಫ್ಯೂ ಈಗ ಅಪ್ರಸ್ತುತ. ತಾವು

ಸಂಯುಕ್ತ ಕರ್ನಾಟಕ

# ಬ್ರಿಟನ್ ಸೋಂಕಿನ ಆತಂಕ ಬೇಡ, ಎಚ್ಚರವಾಗಿರಿ...



**ಸಂ.ಕ. ಸಮಾಚಾರ ಬೆಂಗಳೂರು**

ಬ್ರಿಟನ್‌ನ ರೂಪಾಂತರ ಕೊರೊನಾ ಸೋಂಕಿಗೆ ನಾಗರಿಕರು ಆತಂಕ ಪಡದೇ ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ನಿಯಮ ಪಾಲನೆ ಮಾಡಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೂಪಾಂತರ ಕೋವಿಡ್ ವೈರಾಣು ವೇಗವಾಗಿ ಹರಡಲಿದೆ. ಹೀಗೆಂದು ಸಾರ್ವಜನಿಕರು ಆತಂಕ ಪಡಬೇಕಿಲ್ಲ. ಈ ಹಿಂದೆ ಅನುಸರಿಸಿದಂತೆ ಸಾರ್ವಜನಿಕ ಸ್ಥಳದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಮತ್ತು ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಅನಾವಶ್ಯಕವಾಗಿ ಓಡಾಡದಿರುವುದು, ಚೆನ್ನಾಗಿ ಕೈ ತೊಳೆದುಕೊಳ್ಳುವುದು ಸೇರಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲನೆ ಮಾಡುವಂತೆ ಮನವಿ ಮಾಡಿದ್ದಾರೆ.

ಇನ್ನು ಡಿ.1 ರಿಂದ 21ರ ವರೆಗೆ ಒಟ್ಟು 1,293 ಮಂದಿ ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಆಗಮಿಸಿದ್ದಾರೆ. ಈ ಎಲ್ಲ ಪ್ರಯಾಣಿಕರನ್ನು ಕೋವಿಡ್ ಸೋಂಕು ಪರೀಕ್ಷೆಗೆ ಒಳಪಡಿಸಲಾಗಿದೆ. ಈ ಪೈಕಿ 18 ಮಂದಿ ಕೋವಿಡ್ ಸೋಂಕು ಕಾಣಿಸಿಕೊಂಡಿದೆ. ಇದರಲ್ಲಿ ಮೂವರಿಗೆ ಮಾತ್ರ ರೂಪಾಂತರಗೊಂಡ ಸೋಂಕು ಇರುವುದು ದೃಢಪಟ್ಟಿದೆ. ಸೋಂಕಿತರ ಪ್ರಾಥಮಿಕ ಮತ್ತು ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಿ ಸಾಂಸ್ಥಿತಿಕ ಕ್ವಾರಂಟೈನ್ ಮಾಡಲಾಗುತ್ತಿದೆ. ನಗರದಲ್ಲಿ ಮತ್ತೆ ಯಾವುದೇ ಹೊಸ ರೂಪಾಂತರ ಸೋಂಕು ಪ್ರಕರಣ ಪತ್ತೆಯಾಗಿಲ್ಲ ಎಂದು ತಿಳಿಸಿದರು.

**ಆಡಳಿತಾಧಿಕಾರಿ ಗೌರವ್ ಗುಪ್ತಾ ಮನವಿ**

ಸಂಯುಕ್ತ ಕರ್ನಾಟಕ

# ಸುವಿಧ ಕ್ಯಾಬಿನ್ ನಿರ್ಮಾಣದಲ್ಲೂ ಅಕ್ರಮ

## ಸಂಬಂಧಿತ ಟೆಂಡರ್ ಸ್ಥಗಿತಕ್ಕೆ ಬಿಜೆಪಿ ಆಗ್ರಹ

**ಸಂ.ಕ. ಸಮಾಚಾರ ಬೆಂಗಳೂರು**

ಬಿಬಿಎಂಪಿ ವ್ಯಾಪ್ತಿಯಲ್ಲಿ ಪೌರಕಾರ್ಮಿಕರಿಗೆ ಮಸ್ಟರಿಂಗ್ ಕೇಂದ್ರಗಳಲ್ಲಿ ಬಟ್ಟೆ ಬದಲಿಸಿಕೊಳ್ಳಲು ಸುವಿಧಾ ಕ್ಯಾಬಿನ್ ನಿರ್ಮಾಣದಲ್ಲೂ ಅಕ್ರಮ ನಡೆದಿದ್ದು ಇದಕ್ಕೆ ಸಂಬಂಧಿಸಿದಂತೆ ಕರೆಯಲಾಗಿರುವ ಟೆಂಡರ್ ಸ್ಥಗಿತ ಮಾಡುವಂತೆ ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲೆ ಅಧ್ಯಕ್ಷ ಎನ್.ಆರ್. ರಮೇಶ್ ನಗರಾಭಿವೃದ್ಧಿ ಇಲಾಖೆಗೆ ದೂರು ಸಲ್ಲಿಸಿದ್ದಾರೆ.

ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪೌರ ಕಾರ್ಮಿಕರಿಗೆ ಮೂಲ ಸೌಕರ್ಯಗಳಿಲ್ಲ ಎಂಬ ಕೊರತೆ ಕೇಳಿಬಂದ ಹಿನ್ನೆಲೆಯಲ್ಲಿ ವಿಶ್ರಾಂತಿಗೆ ಹಾಗೂ ಶೌಚಗೃಹ ಸೌಲಭ್ಯ ಒದಗಿಸಲು 'ಶುಭ್ರ ಬೆಂಗಳೂರು' ಯೋಜನೆ ಅನುದಾನದಡಿ ಮಸ್ಟರಿಂಗ್ ಕೇಂದ್ರಗಳಲ್ಲಿ




- **221 ಸುವಿಧಾ ಕ್ಯಾಬಿನ್ ನಿರ್ಮಾಣಕ್ಕೆ 20 ಕೋಟಿ ರೂ. ಮೊತ್ತದ ಟೆಂಡರ್**
- **ಅರ್ಹತೆ ಇಲ್ಲದ ಗುತ್ತಿಗೆದಾರನಿಗೆ ಟೆಂಡರ್**
- **ಟೆಂಡರ್ ಸಂಸ್ಥೆ ನೋಂದಣಿ 2020ರ ಫೆಬ್ರವರಿಯಲ್ಲಿ**
- **2015,2019ರಲ್ಲಿ ಕಾರ್ಯನಿರ್ವಹಿಸಿದ ನಕಲಿ ಪತ್ರ**

221 ಸುವಿಧಾ ಕ್ಯಾಬಿನ್ ನಿರ್ಮಾಣಕ್ಕೆ 20 ಕೋಟಿ ರೂ. ಮೊತ್ತದ ಟೆಂಡರ್ ಕರೆಯಲಾಗಿತ್ತು. ಈ ಟೆಂಡರನ್ನು ಕಾನೂನು ಬಾಹಿರವಾಗಿ ಅರ್ಹತೆಯಿಲ್ಲದ ಗುತ್ತಿಗೆದಾರನಿಗೆ ನೀಡಲಾಗಿದೆ. ಟೆಂಡರ್‌ಗೆ ಪಾಲಿಕೆ ಘನ ತ್ಯಾಜ್ಯ ನಿರ್ವಹಣೆ ಇಲಾಖೆಯ ಅಧಿಕಾರಿಗಳು ನೀಡಿರುವ ಅನುಮೋದನೆಯನ್ನು ತಿರಸ್ಕರಿಸುವಂತೆ ಹಾಗೂ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿ ಗುರುವಾರ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ದಾಖಲೆಗಳ ಸಹಿತ ದೂರನ್ನು ನೀಡಿದ್ದಾರೆ.

ವಾಸ್ತವಿಕವಾಗಿ ಗುಣಮಟ್ಟದ ಕಂಟೇನರ್‌ಗಳು 1.25 ಲಕ್ಷ ರೂ.ಗಳಿಗೆ ದೊರೆಯುತ್ತವೆ. ಪಾಲಿಕೆ ಹಣ ಲೂಟಿ ಮಾಡುವ ಉದ್ದೇಶದಿಂದಲೇ ಪಾಲಿಕೆ ಅಧಿಕಾರಿಗಳು ಒಂದು ಕ್ಯಾಬಿನ್‌ಗೆ 7.90 ಲಕ್ಷ ರೂ. ಗಳಂತೆ 221 ಕ್ಯಾಬಿನ್‌ಗಳಿಗೆ (ಜಿಎಸ್‌ಟಿ ಬಿಟ್ಟು) 17.45 ಕೋಟಿ ರೂ.ಗೆ ಅಲ್ಪಾವಧಿ ಟೆಂಡರ್ ಕರೆದು, ಮೆ.ಅಗ್ರಾ ್ಯ ಇನ್ಫ್ರಾಟೆಕ್ ಸಂಸ್ಥೆಗೆ 18.31 ಕೋಟಿ ರೂ.ಗೆ ಟೆಂಡರ್ ನೀಡಲಾಗಿದೆ. ಆದರೆ, ಈ ಸಂಸ್ಥೆ ಫೆ. 2020ರ ವೇಳೆ ಸರ್ಕಾರದಲ್ಲಿ ನೋಂದಣಿ ಮಾಡಿಸಿಕೊಂಡಿದ್ದು, 2015–16 ರಿಂದ 2019–20ರ ಅವಧಿಯಲ್ಲಿ ಕಾರ್ಯ ನಿರ್ವಹಿಸಿದ ಬಗ್ಗೆ ನಕಲಿ ಪ್ರಮಾಣ ಪತ್ರವನ್ನು ಪಾಲಿಕೆಗೆ ಸಲ್ಲಿಸಿದೆ. ಜತೆಗೆ, ಈ ಸಂಸ್ಥೆಯು ಫೆಬ್ರವರಿಯಲ್ಲಿ 1.34 ಕೋಟಿ ರೂ. ವಾರ್ಷಿಕ ವಹಿವಾಟು ತೋರಿಸಿದ್ದು, ಕೇವಲ 7 ತಿಂಗಳ ನಂತರ 42.53 ಕೋಟಿ ರೂ. ಎಂದು ವಹಿವಾಟು ತೋರಿಸಿದೆ ಎಂದು ಆರೋಪಿಸಿದ್ದಾರೆ.

ಸಂಯುಕ್ತ ಕರ್ನಾಟಕ

# ಕೊರೊನಾ ಭೀತಿಯ ನಡುವೆಯೂ 246 ಸಂತಾನಹರಣ ಶಸ್ತ್ರಚಿಕಿತ್ಸೆ

**ಸಂ.ಕ. ಸಮಾಚಾರ ಬೆಂಗಳೂರು:**
ಕೊರೊನಾ ಸೋಂಕು ಭೀತಿ ಹಾಗೂ ಎರಡನೆ ಅಲೆಯ ಆತಂಕದ ನಡುವೆಯೂ ಪಾಲಿಕೆಯ ಆಸ್ಪತ್ರೆಗಳಲ್ಲಿ 246 ಜನ ಸಂತಾಹರಣ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ.

ಕೊರೊನಾ ಸೋಂಕು ಭೀತಿಯಿಂದ ನಗರದ ರೆಫರಲ್ ಹಾಗೂ ಹೆರಿಗೆ (ಕ್ಲಿನಿಕ್) ಆಸ್ಪತ್ರೆಗಳಲ್ಲಿ ಸಂತಾಹರಣ ಶಸ್ತ್ರಚಿಕಿತ್ಸೆ ಹಾಗೂ ಹೊರರೋಗಿಗಳ ವಿಭಾಗದ ಕಾರ್ಯ ಚಟುವಟಿಕೆಗಳು ಸ್ಥಗಿತವಾಗಿದ್ದವು.

ಈ ಸಂಬಂಧ ಪಾಲಿಕೆಯ ಮುಖ್ಯ ಆರೋಗ್ಯಾಧಿಕಾರಿ ಡಾ. ನಿರ್ಮಲ ಬುಗ್ಗಿ ಮಾಹಿತಿ ನೀಡಿ ಕೊರೊನಾ ಸೋಂಕು ಭೀತಿಯಿಂದಾಗಿ ಕಳೆದ ಕೆಲವು ತಿಂಗಳುಗಳಿಂದ ಸಂತಾನಹರಣ ಶಸ ಚಿಕಿತ್ಸೆ ಪ್ರಕ್ರಿಯೆ ನಿಲ್ಲಿಸಲಾಗಿತ್ತು. ಕಳೆದ ಎರಡು ತಿಂಗಳಿನಿಂದ ಮತ್ತೆ ಪ್ರಾರಂಭಿಸಲಾಗಿದ್ದು, ಒಟ್ಟು 246 ಜನರನ್ನು ಸಂತಾನಹರಣ ಶಸ ಚಿಕಿತ್ಸೆಗೆ ಒಳಪಡಿಸಲಾಗಿದೆ ಎಂದಿದ್ದಾರೆ.

ಖಾಸಗಿ ಆಸ್ಪತ್ರೆಗಳಿಗಿಂತ ಹೆಚ್ಚು ಜನ ಪಾಲಿಕೆಯ ಆಸ್ಪತ್ರೆಗಳಲ್ಲಿ ಸಂತಾನಹರಣ ಶಸ ಚಿಕಿತ್ಸೆಗೆ ಒಲವು ತೋರಿಸಿದ್ದಾರೆ. ಹೊಸಹಳ್ಳಿ ಮತ್ತು ಸಿದ್ದಯ್ಯ ಆಸ್ಪತ್ರೆಗಳಲ್ಲಿ ಹೆಚ್ಚು ಸಂತಾನಹರಣ ಶಸ ಚಿಕಿತ್ಸೆ ನಡೆಯುತ್ತದೆ. ಇದೀಗ ತಾಯಿ ಮತ್ತು ಮಗುವಿಗೆ ಲಸಿಕೆ ನೀಡುವುದೂ ಸೇರಿದಂತೆ ಹಲವು ಚುಟುವಟಿಕೆಗಳು ಚುರುಕು ಪಡೆದುಕೊಂಡಿವೆ ಎಂದು ಹೇಳಿದರು.

ನಗರದಲ್ಲಿ ಸಕಾಲದಲ್ಲಿ ಸಂತಾನಹರಣ ಶಸ ಚಿಕಿತ್ಸೆ ನಡೆಯದೆ ಇದ್ದರೆ, ಅದು ಬೇರೆ ಸಮಸ್ಯೆಗಳಿಗೂ ಎಡೆ ಮಾಡಿಕೊಡುತ್ತದೆ. ಮಹಿಳೆಯರು ಮತ್ತೆ ಗರ್ಭ ಧರಿಸುವ ಸಾಧ್ಯತೆಯೂ ಇರುತ್ತದೆ. ಕೆಲವೊಮ್ಮೆ ಪರಿಸ್ಥಿತಿ ಕೈಮೀರಿರುತ್ತದೆ ಎಂದರು.

ಕೊರೊನಾ ಸೋಂಕು ಭೀತಿ ಹಾಗೂ ಲಾಕ್‌ಡೌನ್‌ನಿಂದಾಗಿ ಈ ವರ್ಷ ಪಾಲಿಕೆಯ ಹೆರಿಗೆ ಆಸ್ಪತ್ರೆಗಳಲ್ಲಿ ಹೆಚ್ಚು ಹೆರಿಗೆ ಆಗಿದೆ. ನವೆಂಬರ್ ಅಂತ್ಯದವರೆಗೆ ಪಾಲಿಕೆಯ ಹೆರಿಗೆ ಆಸ್ಪತ್ರೆಗಳಲ್ಲಿ 9,898 ಜನ ಹೆರಿಗೆ ಮಾಡಿಸಿಕೊಂಡಿದ್ದು, ಈ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ

## ರಸ್ತೆಗಳಿಗೆ ರೌಡಿಶೀಟರ್‌ಗಳ ಹೆಸರು

# ಪ್ರಕ್ರಿಯೆ ರದ್ದತಿಗೆ ಆಯುಕ್ತರ ಪತ್ರ

- ಬಿಬಿಎಂಪಿ ಅಧಿಕಾರಿಗಳ ಕಾರ್ಯಕ್ಕೆ ಕಡಿವಾಣ
- ಸಮಾಜಸೇವಕರೆಂಬಂತೆ ರೌಡಿಗಳ ಹೆಸರು ನಾಮಕರಣ
- ಬಿಜೆಪಿ ನಾಯಕರಿಂದ ತೀವ್ರ ಆಕ್ಷೇಪ, ಆಯುಕ್ತರಿಗೆ ಪತ್ರ

**ಸಂ.ಕ.ಸಮಾಚಾರ ಬೆಂಗಳೂರು**

ಪಾದರಾಯನಪುರ ವಾರ್ಡ್‌ನ ಪ್ರಮುಖ 9 ರಸ್ತೆ ಹಾಗೂ 2 ವೃತ್ತಗಳಿಗೆ ಒಂದೇ ಸಮುದಾಯದ ವ್ಯಕ್ತಿಗಳು ಮಾತ್ರವಲ್ಲದೆ ರೌಡಿಶೀಟರ್‌ಗಳು, ದಲ್ಲಾಳಿಗಳ ಹೆಸರನ್ನು ನಾಮಕರಣ ಮಾಡಲು ಹೊರಟಿದ್ದ ಪಾಲಿಕೆಯ ಅಧಿಕಾರಿಗಳ ಕಾರ್ಯಕ್ಕೆ ಕಡಿವಾಣ ಬಿದ್ದಿದ್ದು ನಾಮಕರಣ ಪ್ರಕ್ರಿಯೆ ರದ್ದುಗೊಳಿಸುವಂತೆ ಆಯುಕ್ತ ಮಂಜುನಾಥ ಪ್ರಸಾದ್ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಬಿಬಿಎಂಪಿ ಸಾಮಾನ್ಯ ಸಭೆಯಲ್ಲಿ ಪಾಲಿಕೆ ವಾರ್ಡ್ 135 ರ ವ್ಯಾಪ್ತಿಗೆ ಬರುವ ಹೆಚ್.ಎಂ.ರಸ್ತೆಗೆ ಫೈಲ್ವಾನ್ ಫಾರೂಕ್ ಪಾಷಾ ಸಾಬ್ ಸರ್ಕಲ್, ಹತ್ತನೆ ಅಡ್ಡರಸ್ತೆಗೆ ಫೈಲ್ವಾನ್ ಫಾರೂಕ್ ಪಾಷಾ ಸಾಬ್ ರಸ್ತೆ, 7ನೇ ಅಡ್ಡರಸ್ತೆಗೆ ಟೋಪಿ ರಫೀಕ್ ಸಾಬ್ ರಸ್ತೆ, 7ನೆ ಮುಖ್ಯರಸ್ತೆಗೆ ರೋಷನ್ ಫಯಾಜ್ ಸಂಗಂ ಸರ್ಕಲ್, 9ನೇ ಅಡ್ಡರಸ್ತೆಗೆ ಅಲೀಲ್ ಪಟೇಲ್ ರಸ್ತೆ, ವಿನಾಯಕ ನಗರ 9ನೇ ಅಡ್ಡರಸ್ತೆಗೆ ಎಲ್ದೀರ್ ಬಾಬು ಸಾಬ್ ರಸ್ತೆ, 8ನೇ ಮುಖ್ಯ ರಸ್ತೆಗೆ ಹಾಜಿ ಅಬೀಬ್ ಬೇಗ್ ರಸ್ತೆ, 11ನೇ ಸಿ ಅಡ್ಡರಸ್ತೆ ಹಾಜಿ ವಜೀರ್ ಸಾಬ್ ರಸ್ತೆ, 9ನೇ ಅಡ್ಡರಸ್ತೆಯ ರೇಹಮಾನಿಯಾ ಮಸೀದಿ ರಸ್ತೆಗೆ ಹಾಜಿ ಶಮೀರ್ ಸಾಬ್ ರಸ್ತೆ, 13 ನೇ ಸಿ ಅಡ್ಡರಸ್ತೆಗೆ ಹಾಜಿ ದಸ್ತಗೀರ್ ರಸ್ತೆ, 10 ನೇ ಮುಖ್ಯರಸ್ತೆಗೆ ಹಾಜಿ



ನೂರ್ಸಾಬ್ ಹೆಸರನ್ನು ಸಮಾಜ ಸೇವಕರುಗಳು ಎಂದು ತಿಳಿಸಿ ನಾಮಕರಣ ಮಾಡಲು ತೀರ್ಮಾನಿಸಿ ಇದಕ್ಕಾಗಿ ಆಕ್ಷೇಪಣೆ ಆಹ್ವಾನಿಸಲಾಗಿತ್ತು.

ಇದಕ್ಕೆ ಸಂಸದರಾದ ಅನಂತಕುಮಾರ್ ಹೆಗಡೆ, ಪಿ.ಸಿ. ಮೋಹನ್, ತೇಜಸ್ವಿಸೂರ್ಯ, ಬಿಜೆಪಿ ಮುಖಂಡರಾದ ಎನ್.ಆರ್. ರಮೇಶ್, ಹರೀಶ್, ರಂಗನಾಥ್ ಮಲ್ಯ ಸೇರಿದಂತೆ ಹಲವರು ಆಕ್ಷೇಪ ವ್ಯಕ್ತಪಡಿಸಿ ಆಯುಕ್ತರಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ಬರೆದು ಈ ಪ್ರಕ್ರಿಯೆ ಸ್ಥಗಿತ ಮಾಡಬೇಕೆಂದು ಕೋರಿದ್ದರು. ಇದು ಮಾತ್ರವಲ್ಲದೇ ನೂರಾರು ಮಂದಿ ಇ-ಮೇಲ್, ಪತ್ರದ ಮುಖೇನ ಆಕ್ಷೇಪ ವ್ಯಕ್ತಪಡಿಸಿದ್ದರು. ಪ್ರಮುಖವಾಗಿ ಪಾದರಾಯನಪುರದಲ್ಲಿ ಎಲ್ಲ ಸಮುದಾಯದವರೂ ವಾಸವಾಗಿದ್ದರೂ ಒಂದೇ ಸಮುದಾಯದವರ ಹೆಸರನ್ನು ನಾಮಕರಣಕ್ಕೆ ಸೂಚಿಸಿರುವುದು ವಿವಾದಕ್ಕೆಡೆಯಾಗಲಿದೆ ಎಂದು ಆಕ್ಷೇಪಣೆಯಲ್ಲಿ ತಿಳಿಸಿದ್ದರು.

ಈ ಎಲ್ಲ ಆಕ್ಷೇಪಣೆಗಳಿಗೆ ಸ್ಪಂದಿಸಿದ ಆಯುಕ್ತ ಮಂಜುನಾಥ ಪ್ರಸಾದ್ ಅವರು, ಕರ್ನಾಟಕ ಮುನ್ಸಿಪಲ್ ಕಾಯ್ದೆ-1976 ಪ್ರಕರಣ 98ರ ಅನ್ವಯ ನಾಮಕರಣ ಪ್ರಕ್ರಿಯೆ ರದ್ದುಗೊಳಿಸುವಂತೆ ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಅವರಿಗೆ ಬಿಬಿಎಂಪಿ ಆಯುಕ್ತರು ಪತ್ರ ಬರೆದಿದ್ದಾರೆ.

ಸಂಯುಕ್ತ ಕರ್ನಾಟಕ

# 554 ಜನರಿಗೆ ನಂಜು

ಸಂ.ಕ.ಸಮಾಚಾರ, ಬೆಂಗಳೂರು

ಹೊಸ ವರ್ಷಕ್ಕೂ ಮುನ್ನಾದಿನ ಕೊರೊನಾ ಸೋಂಕಿಗೆ 9 ಜನ ಸೋಂಕಿತರು ಮೃತಪಟ್ಟಿದ್ದಾರೆ. ಇವರಲ್ಲಿ ಬೆಂಗಳೂರಿನ 6 ಮಂದಿ ಸೇರಿದ್ದಾರೆ. ರಾಜಧಾನಿಯಲ್ಲಿ 554 ಜನರಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು, ಈ ಮೂಲಕ ಒಂದೇ ದಿನ ಒಟ್ಟು 952 ಜನರಿಗೆ ಕೊರೊನಾ ತಗುಲಿದೆ. ಇಷ್ಟಾದರೂ ಎಂದಿನಂತೆ ಗುಣಮುಖರ ಸಂಖ್ಯೆಯಲ್ಲಿ ಏರಿಕೆ ಮುಂದುವರಿದಿದ್ದು, ಕಳೆದ 24 ಗಂಟೆಯಲ್ಲಿ 1,282 ಸೋಂಕಿತರು ಗುಣಮುಖರಾಗಿ ವಿವಿಧ ಆಸ್ಪತ್ರೆಗಳಿಂದ ಬಿಡುಗಡೆ ಹೊಂದಿದ್ದಾರೆ.

ಇನ್ನುಳಿದಂತೆ 11,271 ಮಂದಿ ನಿಗದಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಲ್ಲಿಯವರೆಗೆ ಒಟ್ಟು 8,96,116 ಸೋಂಕಿತರು ಗುಣಮುಖರಾಗಿದ್ದರೆ, ಇದುವರೆಗಿನ ಕೊರೊನಾ ಸೋಂಕಿತರ ಸಂಖ್ಯೆ 9,19,496 ಕ್ಕೆ ಏರಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಸಂಯುಕ್ತ ಕರ್ನಾಟಕ Fri, 01 Januar
epaper.samyukt

ಹೊಸ ದಿಗಂತ
9
01 Jun 2021

ಆಂಧ್ರಪ್ರದೇಶ, ಗುಜರಾತ್, ಅಸ್ಸಾಂ ಹಾಗೂ ಪಂಜಾಬ್‌ನಲ್ಲಿ ಎರಡು ದಿನ ನಡೆಸಿದ ಕೊರೋನಾ ಲಸಿಕೆಯ ಪೂರ್ವ ಪ್ರಯೋಗ (ಡ್ರೈ ರನ್)ವು ಯಶಸ್ವಿಯಾದ ಬೆನ್ನಲ್ಲೇ ಕೇಂದ್ರ ಸರ್ಕಾರವು ಜನವರಿ 2ರಂದು ದೇಶಾದ್ಯಂತ ಡ್ರೈ ರನ್‌ಗೆ ನಿರ್ಧರಿಸಿದೆ. ದೇಶದಲ್ಲಿ ಲಸಿಕೆ ವಿತರಣೆಗೆ ಸಕಲ ಸಿದ್ಧತೆ ನಡೆಯುತ್ತಿರುವ ಬೆನ್ನಲ್ಲೇ ಪೂರ್ವ ಪ್ರಯೋಗ ನಡೆಯುತ್ತಿರುವುದು ಮಹತ್ವ ಪಡೆದಿದ್ದು, ಪ್ರಯೋಗದ ಬಳಿಕ ಯಶಸ್ವಿಯಾಗಿ ಕೋಟ್ಯಂತರ ಜನರಿಗೆ ಲಸಿಕೆ ವಿತರಿಸಲು ಸಹಕಾರಿಯಾಗಲಿದೆ. ಹಾಗಾದರೆ ದೇಶಾದ್ಯಂತ ಹೇಗೆ ಡ್ರೈ ರನ್ ನಡೆಯಲಿದೆ? ಯಾವ ಪ್ರಕ್ರಿಯೆ ಅನುಸರಿಸಲಾಗುತ್ತದೆ?

# ದೇಶಾದ್ಯಂತ ನಾಳೆ ಲಸಿಕೆ ಡ್ರೈ ರನ್

## ನಾಳೆಯೇ ಪ್ರಯೋಗ

ಆಂಧ್ರಪ್ರದೇಶ, ಗುಜರಾತ್, ಅಸ್ಸಾಂ ಹಾಗೂ ಪಂಜಾಬ್‌ನಲ್ಲಿ ಡಿಸೆಂಬರ್ 28 ಹಾಗೂ 29ರಂದು ಡ್ರೈ ರನ್ ನಡೆಸಿರುವುದು ಯಶಸ್ವಿಯಾದ ಹಿನ್ನೆಲೆಯಲ್ಲಿ ದೇಶದ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ರಾಜಧಾನಿಗಳಲ್ಲಿ ಪ್ರಾಯೋಗಿಕವಾಗಿ ಲಸಿಕೆ ವಿತರಣೆ, ಸಂಗ್ರಹ ನಡೆಸಲಾಗುತ್ತದೆ. ಇದಕ್ಕಾಗಿ ಸಕಲ ಸಿದ್ಧತೆ ನಡೆಯುತ್ತಿದ್ದು, ಕೆಲವು ರಾಜ್ಯಗಳಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಜಿಲ್ಲೆಗಳಲ್ಲೂ ಡ್ರೈ ರನ್ ನಡೆಸಲಾಗುತ್ತದೆ.

## ಪ್ರಯೋಗ ವಿಸ್ತರಣೆ ಸಾಧ್ಯತೆ

ಸದ್ಯಕ್ಕೆ ಶನಿವಾರ ಒಂದೇ ದಿನ ದೇಶಾದ್ಯಂತ ಪೂರ್ವ ಪ್ರಯೋಗ ನಡೆಸಲಾಗುತ್ತಿದ್ದು, ಇದು ಯಶಸ್ವಿಯಾದರೆ, ಫಲಾನುಭವಿಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ (ಕೋ-ವಿನ್ ಆ್ಯಪ್ ಮೂಲಕ) ಮಾಡಿಕೊಂಡರೆ ಜನವರಿಯಲ್ಲೇ ಮತ್ತೊಂದು ಸುತ್ತಿನಲ್ಲಿ ಪೂರ್ವ ಪ್ರಯೋಗ ನಡೆಸಲಾಗುತ್ತದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ. ಕೋಟ್ಯಂತರ ಜನರಿಗೆ ಲಸಿಕೆ ವಿತರಿಸಬೇಕಾಗಿರುವುದರಿಂದ ಹಲವು ಹಂತದ ಪ್ರಯೋಗದಿಂದ ಆತ್ಮವಿಶ್ವಾಸ ಹೆಚ್ಚಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದ್ದು, ಜನರ ಸಹಕಾರವೂ ಬೇಕಾಗಿದೆ ಎಂದು ತಿಳಿಸಿದೆ.



**ಪ್ರಯೋಗದ ಉದ್ದೇಶ?**
ಲಸಿಕೆ ಲಭ್ಯವಾದರೆ ದೇಶಾದ್ಯಂತ ಸುಲಭ ಹಾಗೂ ಕ್ಷಿಪ್ರವಾಗಿ ವಿತರಣೆ ಮಾಡಲು

## ಎಲ್ಲಿ ಪ್ರಯೋಗ?

ಆಯಾ ರಾಜ್ಯಗಳ ರಾಜಧಾನಿಯಲ್ಲಿ.

## ಯಾರಿಗೆ ಪ್ರಯೋಗ?

ಕೋ-ವಿನ್ ಆ್ಯಪ್ ಮೂಲಕ ನೋಂದಣಿ ಮಾಡಿಕೊಂಡವರಿಗೆ

## ಜಿಲ್ಲೆಗಳಲ್ಲೂ ಪ್ರಯೋಗ ಇದೆಯಾ?

ಸರಬರಾಜು ಹಾಗೂ ಸಾಗಣೆಗೆ ಕಷ್ಟ ಇರುವ ಕೆಲವು ರಾಜ್ಯಗಳ ಕೆಲ ಜಿಲ್ಲೆಗಳಲ್ಲೂ ಪ್ರಯೋಗ

## ದೇಶಾದ್ಯಂತ ಪ್ರಯೋಗ ವಿಸ್ತರಣೆ ಏಕೆ?

ನಾಲ್ಕು ರಾಜ್ಯಗಳಲ್ಲಿ ಕೈಗೊಂಡಿರುವ ಅಣಕು ಲಸಿಕೆ ಪ್ರಯೋಗವು ಯಶಸ್ವಿಯಾಗಿರುವುದರಿಂದ ಹಾಗೂ ಯಾವಾಗ ಬೇಕಾದರೂ ಕೊರೋನಾ ಲಸಿಕೆಗೆ ಸರ್ಕಾರ ಅನುಮತಿ ನೀಡುವ ಸಾಧ್ಯತೆ ಇರುವುದರಿಂದ ದೇಶಾದ್ಯಂತ ಪ್ರಯೋಗ ಮಾಡಲಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. 2021ರ ಮಧ್ಯಭಾಗದ ವೇಳೆಗೆ ದೇಶದ 25-30 ಕೋಟಿ ಜನರಿಗೆ ಲಸಿಕೆ ವಿತರಣೆ ಮಾಡುವುದು ಕೇಂದ್ರ ಸರ್ಕಾರದ ಗುರಿಯಾಗಿದ್ದು, ಇದನ್ನು ಸಾಕಾರಗೊಳಿಸುವ ದಿಸೆಯಲ್ಲಿ ಸಕಲ ಸಿದ್ಧತೆ ಕೈಗೊಳ್ಳಲಾಗುತ್ತಿದೆ. ಪ್ರಯೋಗವೂ ಇದರ ಭಾಗವಾಗಿದೆ.



## ಹೀಗಿರುತ್ತದೆ ಪ್ರಕ್ರಿಯೆ

- ಲಸಿಕೆ ಸಂಗ್ರಹ ಕೇಂದ್ರದಿಂದ ಬೇರೆ ಸ್ಥಳಗಳಲ್ಲಿರುವ ಶೈತ್ಯಾಗಾರಗಳಿಗೆ ಲಸಿಕೆ ರವಾನಿಸುವುದು.
- ಶೈತ್ಯಾಗಾರಗಳಿಗೆ ಲಸಿಕೆ ಸಾಗಿಸಿ, ಫಲಾನುಭವಿಗಳಿಗೆ ಲಸಿಕೆ ವಿತರಣೆಗೆ ಸಕಲ ಸಿದ್ಧತೆ ಮಾಡುವುದು.
- ಲಸಿಕೆ ಸಂಗ್ರಹ, ವಿತರಣೆ ಕುರಿತು ಕೋ-ವಿನ್ ಆ್ಯಪ್‌ಗೆ ದತ್ತಾಂಶ ಅಳವಡಿಸುವುದು.
- ಲಸಿಕೆ ಪ್ರಯೋಗದಲ್ಲಿ ಯಾವುದಾದರೂ ವ್ಯತ್ಯಯ ಆಗಿದೆಯಾ ಎಂಬುದು ಗುರುತಿಸುವುದು.
- ನೈಜ ಲಸಿಕೆ ಲಭ್ಯವಾದರೆ ಅದನ್ನು ವಿತರಿಸಲು ಯಾವ ಕ್ರಮ ಅನುಸರಿಸಬೇಕು ಎಂಬುದನ್ನು ದೃಢಪಡಿಸಿಕೊಳ್ಳುವುದು.
- ವಿತರಣೆ ವೇಳೆ ಸಾಮಾಜಿಕ ಅಂತರ, ಮಾಸ್ಕ್ ಧರಿಸುವುದು, ಸ್ಯಾನಿಟೈಸರ್ ಸೇರಿ ಎಲ್ಲ ವ್ಯವಸ್ಥೆ ಮಾಡುವುದು.

ಹೊಸ ದಿಗಂತ

## ಮೊದಲ ಬಾರಿಗೆ ಎಂಜಿ ರಸ್ತೆ , ಬ್ರಿಗೇಡ್ ರಸ್ತೆ ಖಾಲಿ, ಎಲ್ಲೆಡೆ ಬಿಗಿ ಪೊಲೀಸ್ ಪಹರೆ

# ಮನೆಯೊಳಗೆ ವರ್ಷಾಚರಣೆ

**ಬೆಂಗಳೂರು:** ಪ್ರತಿವರ್ಷ ಹೊಸ ವರ್ಷಾಚರಣೆ ವೇಳೆ ನಗರದ ಪ್ರಮುಖ ರಸ್ತೆ ಹಾಗೂ ಬಾರ್, ರೆಸ್ಟೋರೆಂಟ್ ಪಬ್‌ಗಳು ಜನರಿಂದ ಗಿಜುಗುಡುತ್ತಿದ್ದವು. ಸಾವಿರಾರು ಮಂದಿ ಸೇರಿ ಮೋಜು ಮಸ್ತಿ ಮಾಡುತ್ತಿದ್ದರು. ಆದರೆ, ಈ ಬಾರಿ ಕೊರೋನಾ ಹಿನ್ನೆಲೆಯಲ್ಲಿ ಬೆಂಗಳೂರು ಪೊಲೀಸರು ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದರಿಂದ ಹೆಚ್ಚಿನ ಜನರು ಮನೆಯಲ್ಲೇ ಕೇಕ್ ಕತ್ತರಿಸಿ ಹೊಸ ವರ್ಷವನ್ನು ಬರಮಾಡಿಕೊಂಡರು.

ಪೊಲೀಸ್ ಆಯುಕ್ತರ ಆದೇಶ ಹಿನ್ನೆಲೆಯಲ್ಲಿ ಜನರು ಕೂಡ ಸಂಜೆಯಾಗುತ್ತಿದ್ದಂತೆ ಗಿಜುಗುಡುತ್ತಿದ್ದ ನಗರ ಪ್ರಮುಖ ರಸ್ತೆಗಳು, ಮೇಲ್ಸೇತುವೆಗಳು ಖಾಲಿ ಖಾಲಿಯಾಗಿದ್ದವು. ಆದರೆ, ಕೆಲವೆಡೆ ರಸ್ತೆ ಮಾರ್ಗಗಳನ್ನು ಬಂದ್ ಮಾಡಿದ್ದರಿಂದ ಕೆಲ ಗಂಟೆಗಳ ಕಾಲ ಸಂಚಾರ ದಟ್ಟಣೆಯಾಗಿತ್ತು. ಅದನ್ನು ಹೊರತುಪಡಿಸಿದರೆ ಗುರುವಾರ ಸಂಜೆ ಹಾಗೂ ತಡರಾತ್ರಿ ಯಾವುದೇ ರೀತಿಯ ಸಂಭ್ರಮ ಹಾಗೂ ಗಲಾಟೆಗಳು ನಡೆಯಲಿಲ್ಲ.

ಮತ್ತೊಂದೆಡೆ ಕೊರೋನಾಗೆ ಹೆದರಿದ ಜನ ರಸ್ತೆಗಿಳಿಯಲು ಭಯಪಟ್ಟು ಮನೆಯಲ್ಲೇ ಮನೆಯವರ ಜತೆಗೆ ಸಂಭ್ರಮಾಚರಣೆ ಮಾಡಿದರು. ತಡರಾತ್ರಿ ಯಾವರೂ ಯಾರೊಬ್ಬರೂ ಪಟಾಕಿ ಹೊಡೆಯದೇ, ರಸ್ತೆಗಿಳಿದು ಕೂಗಾಡದೇ, ಡಿಜೆ ಶಬ್ದ ಮಾಡದೇ ಪೊಲೀಸರ ಆದೇಶವನ್ನು ಪಾಲನೆ ಮಾಡಿರುವುದು ಕಂಡುಬಂತು.






> ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಈಗಾಗಲೇ ಎಲ್ಲ ಕಡೆ ನಿರ್ಬಂಧ ಹೇರಲಾಗಿದೆ. ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ನಗರದ ಮುಖ್ಯ ರಸ್ತೆ , ಮೈದಾನ ಸೇರಿದಂತೆ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಹೊಸ ವರ್ಷಾಚರಣೆಗೆಂದು ಗುಂಪುಗೂಡುವುದನ್ನು ನಿಷೇಧಿಸಿದೆ. ಶುಕ್ರವಾರವೂ ನಗರದೆಲ್ಲೆಡೆ ಕಟ್ಟೆಚ್ಚರ ವಹಿಸಲಿದ್ದೇವೆ.
>
> ■ ಕಮಲ್ ಪಂತ್, ನಗರ ಪೊಲೀಸ್ ಆಯುಕ್ತ

**ಕದ್ದುಮುಚ್ಚಿ ಮದ್ಯ ಖರೀದಿ ಜೋರು:** ಪೊಲೀಸ್ ಬಂದೋಬಸ್ತ್ ನಡುವೆಯೂ ಮದ್ಯದ ಅಂಗಡಿಗಳು ತೆರೆದಿದ್ದು, ಒಬ್ಬರಿಗೆ 2.5 ಲೀ. ಖರೀದಿಗೆ ಸರ್ಕಾರ ಅವಕಾಶ ಕಲ್ಪಿಸಿತ್ತು. ನಗರಾದ್ಯಂತ ಇರುವ ಮದ್ಯದ ಅಂಗಡಿಗಳಲ್ಲಿ ಭರ್ಜರಿ ವ್ಯಾಪಾರ ನಡೆದಿತ್ತು. ಖರೀದಿಸಿದ ಮದ್ಯವನ್ನು ತಮ್ಮ ಕಾರು, ಬೈಕ್‌ನಲ್ಲಿ ತೆಗೆದುಕೊಂಡು ಹೋಗುತ್ತಿದ್ದ ದೃಶ್ಯ ಕಂಡಿತು. ಕಬ್ಬನ್‌ಪಾರ್ಕ್ ಬಳಿಯ ಟಾನಿಕ್ ವೈನ್ ಶಾಪ್ ಎದುರು ಸರತಿ ಸಾಲಿನಲ್ಲಿ ನಿಂತಿದ್ದ ದೃಶ್ಯ ಮದ್ಯ ಬಿಕರಿಗೆ ಸಾಕ್ಷಿಯಾಯಿತು. ಗುರುವಾರ ಸಂಜೆಯಿಂದಲೇ ಮದ್ಯ ಖರೀದಿ ಜೋರಾಗಿತ್ತು. ಮತ್ತೊಂದೆಡೆ ಜನ ಮಾಂಸ ಖರೀದಿಸಲು ಸರತಿ ಸಾಲಿನಲ್ಲಿ ನಿಂತಿದ್ದರು. ತಡರಾತ್ರಿವರೆಗೂ ಅಂಗಡಿಗಳು ತೆರೆದು ಖದ್ದುಮುಚ್ಚಿ ಮಾರಾಟವೂ ನಡೆದಿತ್ತು.

ಹೊಸ ದಿಗಂತ

ಹೊಸ ದಿಗಂತ

12

01 Jun 2021

# ಕ್ಯಾಬಿನ್ ನಿರ್ಮಾಣ ಟೆಂಡರ್ ರದ್ದತಿಗೆ ಪತ್ರ

**ಬೆಂಗಳೂರು:** ಸುವಿಧ ಕ್ಯಾಬಿನ್ ನಿರ್ಮಾಣ ಕಾರ್ಯಕ್ಕೆ ಆರ್ಥ್ಯ ಇನ್ಫ್ರಾ ಟೆಕ್ ಸಂಸ್ಥೆಗೆ ನೀಡಿದ ಗುತ್ತಿಗೆಯನ್ನು ಕೂಡಲೇ ರದ್ದು ಮಾಡಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್.ಆರ್.ರಮೇಶ್ ಒತ್ತಾಯಿಸಿದ್ದಾರೆ.



ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಬಟ್ಟೆ ಬದಲಾಯಿಸಲು, ವೈಯಕ್ತಿಕ ಸಾಮಾಗ್ರಿಗಳನ್ನು ಇಡಲು ಮತ್ತು ಶೌಚಾಲಯ ಅನುಕೂಲ ಕಲ್ಪಿಸಲು ಸುವಿಧ ಕ್ಯಾಬಿನ್ ನಿರ್ಮಾಣದ ಯೋಜನೆ ಇದಾಗಿದೆ.

ತಲಾ ಒಂದು ಕ್ಯಾಬಿನ್‌ಗೆ 7.90ಲಕ್ಷ ರೂ. ನಂತೆ ಒಟ್ಟು 221 ಕ್ಯಾಬಿನ್‌ಗೆ ಜಿಎಸ್‌ಟಿ ಹೊರತುಪಡಿಸಿ17,45,91,465 ರೂ.ಗೆ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರ ಪೈಕಿ ಪಿ.ವಿನೋದ್ ಕುಮಾರ್ ಮಾಲೀಕತ್ವದ ಆರ್ಥ್ಯ ಇನ್ಫ್ರಾ ಟೆಕ್ ಮತ್ತು ಹರಿನಾಥ್ ರಾಜೇಶ್ ಮಾಲೀಕತ್ವದ ಜಿಜಿಆರ್ ಎಂಟರ್‌ಪ್ರೈಸಸ್ ಸಂಸ್ಥೆಗಳನ್ನು ಯಶಸ್ವಿ ಬಿಡ್‌ದಾರರು ಎಂದು ಪರಿಗಣಿಸಲಾಗಿದೆ. ಶೇ.4.90ರಷ್ಟು ಅಧಿಕ ಮೊತ್ತದೊಂದಿಗೆ ಒಟ್ಟು 18,31,50,437 ರೂ. ನಮೂದಿಸಿದ್ದ ಆರ್ಥ್ಯ ಇನ್ಫ್ರಾ ಟೆಕ್ ಸಂಸ್ಥೆಯನ್ನು ಎಲ್-1 ಎಂದೂ ಹಾಗೂ ಶೇ.8.32ರಷ್ಟು ಅಧಿಕ ಮೊತ್ತದೊಂದಿಗೆ 18,91,15,904 ರೂ. ನಮೂದಿಸಿದ್ದ ಜಿಜಿಆರ್ ಎಂಟರ್‌ಪ್ರೈಸಸ್ ಸಂಸ್ಥೆಯನ್ನು ಎಲ್-2ಎಂದು ಪರಿಗಣಿಸಿ ಕಾನೂನು ಬಾಹಿರವಾಗಿ ಕ್ಯಾಬಿನ್ ನಿರ್ಮಾಣಕ್ಕೆ ಗುತ್ತಿಗೆ ನೀಡಲಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಎರಡೂ ಸಂಸ್ಥೆಗಳು ಒದಗಿಸಿರುವ ದಾಖಲೆಗಳು ನಕಲಿಯಾಗಿದ್ದು, ಆರ್ಥ್ಯ ಸಂಸ್ಥೆಗೆ ಗುತ್ತಿಗೆ ನೀಡುವ ನಿಟ್ಟಿನಲ್ಲಿ ನಕಲಿ ಡಿಪಿಆರ್ ತಯಾರಿಸಲು ಅನುವು ಮಾಡಲಾಗಿದೆ. ನಗರಾಭಿವೃದ್ಧಿ ಇಲಾಖೆ ಆರ್ಥ್ಯ ಸಂಸ್ಥೆಗೆ ಕೇಳಿರುವ ಪ್ರಶ್ನೆಗಳಿಗೆ ಪಾಲಿಕೆ ಅಧಿಕಾರಿಗಳು ಉತ್ತರ ನೀಡಿದ್ದಾರೆ. 2020ರ ಫೆ.28ರಂದು ಆರ್ಥ್ಯ ಇನ್ಫ್ರಾ ಟೆಕ್ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, ಯಾವುದೇ ಅನುಭವದ ಪ್ರಮಾಣ ಪತ್ರ ನೀಡಿಲ್ಲ. ಜಿಜಿಆರ್ ಎಂಟರ್‌ಪ್ರೈಸಸ್ ಲೆಕ್ಕಪರಿಶೋಧಕ ನೀಡಿದ 2015-16 ರಿಂದ 2019-20 ರ ವಾರ್ಷಿಕ ವಹಿವಾಟಿನ 2 ಪ್ರತ್ಯೇಕ ದೃಢೀಕರಣ ಪತ್ರಗಳ ಪೈಕಿ ಒಂದು ಪತ್ರವು ನಕಲಿಯಾಗಿದೆ ಎಂದು ತಿಳಿಸಿದ್ದಾರೆ.

## ನಿಯಮಕ್ಕೆ ಕಿಮ್ಮತ್ತಿಲ್ಲ

ರಾಜಕೀಯ ಪ್ರಭಾವಗಳಿಗೆ ಮತ್ತು ದೊಡ್ಡ ಮೊತ್ತದ ಹಣದ ಆಮಿಷಕ್ಕೆ ಒಳಗಾಗಿರುವ ಪಾಲಿಕೆ ಘನತ್ಯಾಜ್ಯ ಇಲಾಖೆ ಅಧಿಕಾರಿಗಳು ಪೂರ್ವ ನಿಗದಿತ ಗುತ್ತಿಗೆದಾರ ಸಂಸ್ಥೆ ಆರ್ಥ್ಯ ಇನ್ಫ್ರಾ ಟೆಕ್ ಸಂಸ್ಥೆಯ ವಿನೋದ್ ಕುಮಾರ್‌ನೊಂದಿಗೆ ಶಾಮೀಲಾಗಿ ಟೆಂಡರ್ ನಿಯಮಗಳನ್ನು ಗಾಳಿಗೆ ತೂರಿ ನಿಯಮ ಬಾಹಿರವಾಗಿ ಟೆಂಡರ್ ಅನುಮೋದನೆ ನೀಡಲಾಗಿದೆ. ಕ್ಯಾಬಿನ್ ಹೆಸರಿನಲ್ಲಿ 15ಕೋಟಿ ರೂ. ಹೆಚ್ಚು ಮೊತ್ತವನ್ನು ಲೂಟಿ ಮಾಡಲು ಕಾನೂನು ಬಾಹಿರವಾಗಿ ಅನುವು ಮಾಡಿಕೊಟ್ಟ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸಬೇಕು ಎಂದು ಎನ್.ಆರ್. ರಮೇಶ್ ಒತ್ತಾಯಿಸಿದ್ದಾರೆ.

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ನೂತನ ವರ್ಷದ ಸಂಭ್ರಮಕ್ಕೆ ರೂಪಾಂತರಿತ ಕೊರೋನ ನಿರ್ಬಂಧ

ಬೆಂಗಳೂರು, ಡಿ. 31: ರಾಜ್ಯದಲ್ಲಿ ರೂಪಾಂತರಿತ ಕೋವಿಡ್-19 ವೈರಸ್ ನಿಯಂತ್ರಣ ದೃಷ್ಟಿಯಿಂದ 2021ರ ನೂತನ ವರ್ಷಾಚರಣೆಗೆ ನಿರ್ಬಂಧ ಹೇರಿದ್ದು, ಗುರುವಾರ ಮಧ್ಯಾಹ್ನ 12 ಗಂಟೆಯಿಂದ ಜ.1ರ 6 ಗಂಟೆಯವರೆಗೆ ಕಲಂ 144ರ ಅನ್ವಯ ನಿಷೇಧಾಜ್ಞೆ ವಿಧಿಸಲಾಗಿತ್ತು. ಹೀಗಾಗಿ ಜನರು ತಮ್ಮ ಮನೆಗಳಲ್ಲಿ ನೂತನ ವರ್ಷವನ್ನು ಸ್ವಾಗತಿಸುವ ಮೂಲಕ ಸಂಭ್ರಮಿಸಿದರು.

ರಾಜಧಾನಿ ಬೆಂಗಳೂರು, ಸಾಂಸ್ಕೃತಿಕ ನಗರ ಮೈಸೂರು, ಕರಾವಳಿಯ ಮಂಗಳೂರು, ಅವಳಿನಗರ ಹುಬ್ಬಳ್ಳಿ-ಧಾರವಾಡ, ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್ ಸೇರಿದಂತೆ ರಾಜ್ಯದ ವಿವಿಧ ನಗರಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಅಲ್ಲದೆ, ರೂಪಾಂತರಿತ ಕೊರೋನ ಸೋಂಕು ನಿಯಂತ್ರಣ ಸೃಷ್ಟಿಯಿಂದ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.



**ಕಠಿಣ ಕ್ರಮದ ಎಚ್ಚರಿಕೆ:** ರೂಪಾಂತರಿತ ಕೊರೋನ ಸೋಂಕು ನಿಯಂತ್ರಣ ದೃಷ್ಟಿಯಿಂದ ನಿರ್ಬಂಧ ಹೇರಲಾಗಿದ್ದು, ಸಾರ್ವಜನಿಕರು ಪೊಲೀಸರೊಂದಿಗೆ ಸಹಕರಿಸಬೇಕು. ಒಂದು ವೇಳೆ ಯಾರಾದರೂ ನಿಯಮಗಳನ್ನು ಗಾಳಿಗೆ ತೂರಿ ಹದ್ದುಮೀರಿ ವರ್ತಿಸುವುದು ಕಂಡುಬಂದರೆ ಅಂತಹವರ ವಿರುದ್ಧ ಐಪಿಸಿ ಸೆಕ್ಷನ್ 188 ಹಾಗೂ ಎನ್‌ಡಿಎಂಎ ಕಾಯ್ದೆಯಡಿ ದೂರು ದಾಖಲಿಸಲಾಗಿದೆ.

ಬೆಂಗಳೂರು ನಗರಕ್ಕೆ ಸಂಪರ್ಕ ಕಲ್ಪಿಸುವ ಇಲೆಕ್ಟ್ರಾನಿಕ್ ಸಿಟಿ, ತುಮಕೂರು ರಸ್ತೆ, ಕೆ.ಆರ್.ಪುರಂ, ಮೈಸೂರು ರಸ್ತೆ, ಹೆಬ್ಬಾಳ ಸೇರಿದಂತೆ ಒಟ್ಟು 44 ಮೇಲ್ಸೇತುವೆಗಳನ್ನು ಬೆಳಗ್ಗೆ 6ಗಂಟೆವರೆಗೆ ಸಂಪೂರ್ಣವಾಗಿ ಬಂದ್ ಮಾಡಲಾಗಿತ್ತು. ಇಲ್ಲಿನ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಕೋರಮಂಗಲ, ಇಂದಿರಾನಗರ ಸೇರಿದಂತೆ ಮತ್ತಿತರ ಕಡೆ ವಿಶೇಷ ನಿಗಾ ವಹಿಸಲಾಗಿತ್ತು.

ಪ್ರಮುಖ ರಸ್ತೆಗಳಲ್ಲಿ ಹಾಗೂ ಸಂಭ್ರಮಾಚರಣೆ ನಡೆಸುವ ಸಾಧ್ಯತೆ ಇರುವ ಪ್ರದೇಶಗಳಲ್ಲಿ ಪೊಲೀಸರು ನಾಕಾಬಂದಿ ಹಾಕಿ ಎಲ್ಲ ವಾಹನಗಳನ್ನೂ ಪರಿಶೀಲನೆ ನಡೆಸಿದ್ದು, ರಾತ್ರಿ 11ಗಂಟೆಗೆ ನಗರದಲ್ಲಿನ ಎಲ್ಲ ಮದ್ಯದಂಗಡಿಗಳನ್ನು ಮುಚ್ಚಿಸಲಾಗಿತ್ತು. ಬಾರ್ ಆ್ಯಂಡ್ ರೆಸ್ಟೋರೆಂಟ್, ಪಬ್, ಡಿಸ್ಕೋಥೆಕ್, ಲೈವ್ ಬಾಂಡ್‌ಗಳ ಮೇಲೆ ವಿಶೇಷ ನಿಗಾ ವಹಿಸಲಾಗಿತ್ತು.

ಬೆಂಗಳೂರು ಸೇರಿದಂತೆ ಮೈಸೂರು, ಚಿಕ್ಕಬಳ್ಳಾಪುರ, ಮಂಗಳೂರು, ಉಡುಪಿ, ಕಾರವಾರ, ಚಾಮರಾಜನಗರ, ತುಮಕೂರು, ದಾವಣಗೆರೆ, ಶಿವಮೊಗ್ಗ ಸೇರಿದಂತೆ ಬಹುತೇಕ ರಾಜ್ಯದ ಎಲ್ಲ ಪ್ರವಾಸಿ ತಾಣಗಳಲ್ಲಿ ಹೊಸ ವರ್ಷಾಚರಣೆಗೆ ನಿರ್ಬಂಧ ಹೇರಲಾಗಿತ್ತು. ಎಲ್ಲೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

> ರೂಪಾಂತರಿತ ಕೊರೋನ ವೈರಸ್ ಸೋಂಕು ಹರಡುವ ಆತಂಕದ ಹಿನ್ನೆಲೆಯಲ್ಲಿ ಹೊಸ ವರ್ಷಾಚರಣೆಗೆ ನಿರ್ಬಂಧ ಹೇರಲಾಗಿದೆ. ರಾಜ್ಯದ ಜನರ ಆರೋಗ್ಯದ ದೃಷ್ಟಿಯಿಂದ ಈ ತೀರ್ಮಾನ ಮಾಡಿದ್ದು, ಸಾರ್ವಜನಿಕರು ಸಹಕಾರ ನೀಡಬೇಕು. ಕೋವಿಡ್ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. 2021ರ ನೂತನ ವರ್ಷ ನಾಡಿನ ಜನರಿಗೆ ಸುಖ, ಶಾಂತಿ,ನೆಮ್ಮದಿ ತರಲಿ ಎಂದು ಹಾರೈಸುತ್ತೇನೆ.
>
> -ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ

> ಬೆಂಗಳೂರು ನಗರದ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಕೋರಮಂಗಲ, ಇಂದಿರಾನಗರ ಸೇರಿದಂತೆ ಮತ್ತಿತರ ಕಡೆ ವಿಶೇಷ ನಿಗಾ ವಹಿಸಲಾಗಿದೆ. ಇಲ್ಲಿ ಪ್ರತಿವರ್ಷ ಹೆಚ್ಚಿನ ಜನರು ಸೇರುವುದರಿಂದ ರೂಪಾಂತರಿತ ಕೊರೋನ ಸೋಂಕು ಬಹುಬೇಗನೆ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಹೀಗಾಗಿ ಸಾರ್ವಜನಿಕರು ತಮ್ಮ-ತಮ್ಮ ಮನೆಗಳಲ್ಲೇ ಹೊಸ ವರ್ಷಾಚರಣೆ ಆಚರಿಸಬೇಕು.
>
> -ಬಸವರಾಜ ಬೊಮ್ಮಾಯಿ, ಗೃಹ ಸಚಿವ

Bengaluru Edition
Jan 1, 2021 Page No.12

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ನಾಳೆಯಿಂದ ಎಲ್ಲ ರಾಜ್ಯಗಳಲ್ಲಿ ಅಣಕು ಲಸಿಕೆ ನೀಡಿಕೆ ಆರಂಭ

ಹೊಸದಿಲ್ಲಿ,ಡಿ.31: ಎಲ್ಲ ರಾಜ್ಯಗಳಲ್ಲಿ ಅಣಕು ಕೋವಿಡ್ ಲಸಿಕೆ ನೀಡಿಕೆಯು ಜ.2ರಿಂದ ಆರಂಭಗೊಳ್ಳಲಿದೆ ಎಂದು ಸರಕಾರವು ತಿಳಿಸಿದೆ. ಇದೇ ವೇಳೆ, ಶೀಘ್ರವೇ ಲಸಿಕೆಗೆ ಅನುಮತಿ ದೊರೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದು ದೇಶದಲ್ಲಿ ನಡೆಯುತ್ತಿರುವ ಎರಡನೇ ಅಣಕು ಲಸಿಕೆ ನೀಡಿಕೆ ಕಾರ್ಯಕ್ರಮವಾಗಿದೆ. ಮೊದಲ ಅಣಕು ಲಸಿಕೆ ನೀಡಿಕೆಯನ್ನು ನಾಲ್ಕು ರಾಜ್ಯಗಳಲ್ಲಿ ಡಿ.28 ಮತ್ತು 29ರಂದು ನಡೆಸಲಾಗಿದ್ದು, ತೃಪ್ತಿಕರ ಫಲಿತಾಂಶವನ್ನು ನೀಡಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ತಿಳಿಸಿದೆ.

ಗುರುವಾರ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಆರೋಗ್ಯ ಸಚಿವಾಲಯವು ನಡೆಸಿದ ಉನ್ನತ ಮಟ್ಟದ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ.

ಪ್ರತಿ ರಾಜ್ಯದ ಆಯ್ದ ಸ್ಥಳಗಳಲ್ಲಿ ಅಣಕು ಲಸಿಕೆ ನೀಡಿಕೆಯು ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಭಾಗಿಯಾದವರಿಗೆ ಡಮ್ಮಿ ಕೋವಿಡ್ ಲಸಿಕೆಯನ್ನು ನೀಡಲಾಗುವುದು. ಅಸಲಿ ಲಸಿಕೆ ನೀಡಿಕೆ ಅಭಿಯಾನಕ್ಕೆ ಮುನ್ನ ಕಾರ್ಯವಿಧಾನದ ಪರೀಕ್ಷೆ ಮತ್ತು ವ್ಯವಸ್ಥೆಯಲ್ಲಿನ ಸಂಭಾವ್ಯ ಲೋಪಗಳನ್ನು ಕಂಡುಕೊಳ್ಳುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಭಾರತವು ಕೋವಿಡ್-19 ಲಸಿಕೆ ನೀಡಿಕೆಗೆ ಸಿದ್ಧವಾಗಿದೆ ಎನ್ನುವುದನ್ನು ಎರಡು ದಿನಗಳ ಅಣಕು ಕಾರ್ಯಾಚರಣೆಯು ತೋರಿಸಿದೆ. ಎಲ್ಲ ನಾಲ್ಕು ರಾಜ್ಯಗಳಲ್ಲಿ ತೃಪ್ತಿಕರ ಫಲಿತಾಂಶ ದೊರಕಿದೆ ಎಂದು ಆರೋಗ್ಯ ಸಚಿವಾಲಯವು ಮಂಗಳವಾರ ತಿಳಿಸಿತ್ತು.

ಹೊಸ ವರ್ಷದಲ್ಲಿ ಕೋವಿಡ್-19 ಲಸಿಕೆ ನೀಡಿಕೆ ಆರಂಭಗೊಳ್ಳಲಿದೆ ಎಂಬ ನಿರೀಕ್ಷೆಯ ನಡುವೆಯೇ ದೇಶವ್ಯಾಪಿ ಎರಡನೇ ಅಣಕು ಲಸಿಕೆ ನೀಡಿಕೆ ಕಾರ್ಯಕ್ರಮ ನಡೆಯಲಿದೆ.

ಬಹುಶಃ ಹೊಸ ವರ್ಷದಲ್ಲಿ ಲಸಿಕೆ ನೀಡಿಕೆ ಆರಂಭವಾಗಲಿದೆ ಎಂದು ಔಷಧಿಗಳ ಮಹಾ ನಿಯಂತ್ರಕ ಡಾ.ವಿ.ಜಿ.ಸೋಮಾನಿ ಗುರುವಾರ ತಿಳಿಸಿದರು.

ಲಸಿಕೆಯ ತುರ್ತು ಬಳಕೆಗೆ ಅಧಿಕಾರ ನೀಡುವ ತಜ್ಞರ ಸಮಿತಿಯು ಶನಿವಾರ ಸಭೆ ಸೇರಲಿದ್ದು,ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ,ಭಾರತ ಬಯೊಟೆಕ್ ಮತ್ತು ಫೈಝರ್ ಸಲ್ಲಿಸಿರುವ ಅರ್ಜಿಗಳನ್ನು ಅದು ಪರಿಶೀಲಿಸುತ್ತಿದೆ.

ಈ ಪೈಕಿ ಆಕ್ಸ್‌ಫರ್ಡ್ ವಿವಿ ಮತ್ತು ಪ್ರಮುಖ ಔಷಧಿ ತಯಾರಿಕೆ ಕಂಪನಿ ಅಸ್ಟ್ರಝೆನೆಕಾ ಅಭಿವೃದ್ಧಿಗೊಳಿಸಿರುವ, ಸೀರಮ್ ಇನ್‌ಸ್ಟಿಟ್ಯೂಟ್ ತಯಾರಿಸಿರುವ 'ಕೋವಿಶೀಲ್ಡ್' ಮುಂಚೂಣಿಯಲ್ಲಿರುವಂತಿದೆ. ಫೈಝರ್ ತನ್ನ ಪರೀಕ್ಷಾ ದತ್ತಾಂಶಗಳನ್ನು ಇನ್ನಷ್ಟೇ ಸಮಿತಿಗೆ ಸಲ್ಲಿಸಬೇಕಿದೆ. ಐಸಿಎಂಆರ್ ಸಹಭಾಗಿತ್ವದಲ್ಲಿ 'ಕೋವ್ಯಾಕ್ಸಿನ್ 'ಅನ್ನು ಅಭಿವೃದ್ಧಿಗೊಳಿಸಿರುವ ಭಾರತ ಬಯೊಟೆಕ್ ತನ್ನ ಮೂರನೇ ಹಂತದ ಟ್ರಯಲ್ ಅನ್ನು ಪೂರ್ಣಗೊಳಿಸಿಲ್ಲ.

Bengaluru Edition
Jan 1, 2021 Page No.9

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ರಾಜ್ಯದಲ್ಲಿ 952 ಹೊಸ ಕೊರೋನ ಪ್ರಕರಣ ದೃಢ, 9 ಮಂದಿ ಸಾವು

ಬೆಂಗಳೂರು, ಡಿ.31: ರಾಜ್ಯದಲ್ಲಿ ಗುರುವಾರ 952 ಹೊಸ ಕೊರೋನ ಪ್ರಕರಣಗಳು ದೃಢವಾಗಿವೆ. 9 ಜನರು ಸೋಂಕಿಗೆ ಬಲಿಯಾಗಿದ್ದು, 1,282 ಜನರು ಗುಣಮುಖರಾಗಿದ್ದಾರೆ.

ರಾಜ್ಯದಲ್ಲಿ ಈಗಾಗಲೇ ಒಟ್ಟು ಸೋಂಕಿತರ ಸಂಖ್ಯೆ 9,19,496ಕ್ಕೆ ತಲುಪಿದ್ದು, 194 ಜನ ಸೋಂಕಿತರು ಐಸಿಯುನಲ್ಲಿದ್ದಾರೆ.

ಇಲ್ಲಿಯವರೆಗೆ ಒಟ್ಟು ಸಾವಿನ ಸಂಖ್ಯೆ 12,090ಕ್ಕೆ ತಲುಪಿದ್ದು, ಒಟ್ಟು ಸಕ್ರಿಯ ಕೊರೋನ ಪ್ರಕರಣ ಸಂಖ್ಯೆ 11,271ಕ್ಕೆ ಏರಿಕೆಯಾಗಿದ್ದು, ಇವರೆಲ್ಲ ಸೋಂಕಿತರು ಆಸ್ಪತ್ರೆ, ಕೊರೋನ ಕೇರ್ ಸೆಂಟರ್ ಹಾಗೂ ಮನೆಗಳಲ್ಲಿ ಚಿಕಿತ್ಸೆ ಮತ್ತು ಆರೈಕೆಯಲ್ಲಿದ್ದಾರೆ.

**9 ಸೋಂಕಿತರು ಬಲಿ:** ಬೆಂಗಳೂರು ನಗರ 6, ಮೈಸೂರು 2, ವಿಜಯಪುರ ಜಿಲ್ಲೆಯಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ.

**ಎಲ್ಲೆಲ್ಲಿ ಎಷ್ಟು:** ರಾಜ್ಯದಲ್ಲಿ ಹೊಸದಾಗಿ 952 ಪ್ರಕರಣಗಳು ದೃಢವಾಗಿದ್ದು, ಅದರಲ್ಲಿ ಬಾಗಲಕೋಟೆ 9, ಬಳ್ಳಾರಿ 8, ಬೆಳಗಾವಿ 23, ಬೆಂಗಳೂರು ಗ್ರಾಮಾಂತರ 24, ಬೆಂಗಳೂರು ನಗರ 554, ಬೀದರ್ 5, ಚಾಮರಾಜನಗರ 6, ಚಿಕ್ಕಬಳ್ಳಾಪುರ 19, ಚಿಕ್ಕಮಗಳೂರು 9, ಚಿತ್ರದುರ್ಗ 20, ದಕ್ಷಿಣ ಕನ್ನಡ 35, ದಾವಣಗೆರೆ 16, ಧಾರವಾಡ 7, ಹಾಸನ 6, ಕಲಬುರಗಿ 18, ಕೊಡಗು 14, ಕೋಲಾರ 10, ಕೊಪ್ಪಳ 7, ಮಂಡ್ಯ 14, ಮೈಸೂರು 48, ಶಿವಮೊಗ್ಗ 19, ತುಮಕೂರು 28, ಉಡುಪಿ 20, ಉತ್ತರ ಕನ್ನಡ 9, ವಿಜಯಪುರ 7, ಯಾದಗಿರಿ ಜಿಲ್ಲೆಯಲ್ಲಿ 7 ಪ್ರಕರಣ ಪತ್ತೆಯಾಗಿವೆ.

Bengaluru Edition
Jan 1, 2021 Page No.8

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ರಸ್ತೆಗಳಿಗೆ ಮುಸ್ಲಿಮರ ಹೆಸರಿಟ್ಟರೆ ಕೋಮು ಸಾಮರಸ್ಯಕ್ಕೆ ಧಕ್ಕೆ

## ಸಂಸದರಾದ ತೇಜಸ್ವಿ ಸೂರ್ಯ, ಅನಂತ ಕುಮಾರ ಹೆಗಡೆ ಆಕ್ಷೇಪ

**ಬೆಂಗಳೂರು, ಡಿ. 31:** ಬಿಬಿಎಂಪಿಯ ವಾರ್ಡ್ ಸಂಖ್ಯೆ-135ರ ಮುಸ್ಲಿಮ್ ಬಾಹುಳ್ಯವಿರುವ ಇಲ್ಲಿನ ಪಾದರಾಯನಪುರದ ಅಡ್ಡರಸ್ತೆಗಳಿಗೆ ಮುಸ್ಲಿಮರ ಹೆಸರುಗಳನ್ನಿಡುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ತೀರ್ಮಾನಕ್ಕೆ ಸಂಸದರಾದ ತೇಜಸ್ವಿ ಸೂರ್ಯ ಮತ್ತು ಅನಂತಕುಮಾರ ಹೆಗಡೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಗುರುವಾರ ಈ ಸಂಬಂಧ ಸಂಸದರಿಬ್ಬರು ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆದಿದ್ದು, ಪಾದರಾಯನಪುರದ ಅಡ್ಡ ರಸ್ತೆಗಳಿಗೆ ಸಮಾಜ ಸೇವಕರ ಹೆಸರಿಡಬೇಕೆನ್ನುವ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ, ಈಗ ಸಮಾಜ ಸೇವಕರ ಹೆಸರಿನಲ್ಲಿ ಮುಸ್ಲಿಮರ ಹೆಸರುಗಳನ್ನು ಮಾತ್ರ ಶಿಫಾರಸ್ಸು ಮಾಡಲಾಗಿದೆ. ಒಂದು ಕೋಮಿನ ತುಷ್ಟೀಕರಣಕ್ಕೆ ಮುಂದಾಗಲಾಗಿದೆ ಎಂದು ದೂರಿದ್ದಾರೆ.



ಮುಸ್ಲಿಮ್ ಬಾಹುಳ್ಯವಿರುವ ಪ್ರದೇಶಗಳಲ್ಲಿ ಮುಸ್ಲಿಮರ ಹೆಸರುಗಳನ್ನು ನಾಮಕರಣ ಮಾಡುವ ವಿಚಾರವು ಭಾರತ ಮತ್ತು ಪಾಕಿಸ್ತಾನ ವಿಭಜನತೆ ಮೂಲವಾಗಿದ್ದ ದ್ವಿರಾಷ್ಟ್ರ ಸಿದ್ಧಾಂತದ ಪಳಯುಳಿಕೆಯಂತಾಗುತ್ತದೆ. ಈ ನಿರ್ಧಾರ ಬೇಜವಾಬ್ದಾರಿತನದ ಪರಮಾವಧಿ. ಸ್ವಾತಂತ್ರ್ಯ ಹೋರಾಟಗಾರರು, ದೇಶಕ್ಕಾಗಿ ಹೋರಾಡಿದ ವೀರ ಸೈನಿಕರು, ರಾಷ್ಟ್ರದ ಮಹಾನ್ ವ್ಯಕ್ತಿಗಳ ಹೆಸರನ್ನು ಇಡಬಹುದು. ಆದರೆ, ಮುಸ್ಲಿಮರ ಹೆಸರನ್ನು ಇಡುವುದಕ್ಕೆ ನನ್ನ ತೀವ್ರ ವಿರೋಧವಿದೆ ಎಂದು ಆಕ್ಷೇಪಿಸಿದ್ದಾರೆ.

ಒಂದೊಮ್ಮೆ ರಾಜ್ಯದ ಇತರ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್‌ಗಳೂ ಇದೇ ರೀತಿಯ ನಿರ್ಣಯ ತೆಗೆದುಕೊಂಡಲ್ಲಿ ಪರಿಸ್ಥಿತಿ ಊಹೆಗೂ ನಿಲುಕದಂತಿರುತ್ತದೆ. ಇದು ಕೋಮುಸಾಮರಸ್ಯ ಕೆಡುವುದಕ್ಕೆ ದಾರಿ ಮಾಡಿಕೊಡುತ್ತದೆ ಎಂದು ತೇಜಸ್ವಿ ಸೂರ್ಯ ಮತ್ತು ಅನಂತಕುಮಾರ್ ಹೆಗಡೆ ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

Bengaluru Edition
Jan 1, 2021 Page No.4

ಸಂಜೆವಾಣಿ
1982

# ಹೊಸವರ್ಷದ ಸಂಭ್ರಮಕ್ಕೆ ಕೊರೊನಾ ಕಾಟ
# ಮೋಜು ಮಸ್ತಿಗೆ ಬ್ರೇಕ್ ಎಲ್ಲೆಡೆ ಕಟ್ಟೆಚ್ಚರ

ಬೆಂಗಳೂರು,ಡಿ.31–ಮಹಾಮಾರಿ ಕೊರೊನಾ ಸೋಂಕು ಜನರನ್ನು ಕಂಗೆಡಿಸಿದಬೆನ್ನಲ್ಲೇ ಮತ್ತೆವಕ್ಕರಿಸಿರುವ ಬ್ರಿಟನ್ ರೂಪಾಂತರಿ ವೈರಸ್ ಹೊಸವರ್ಷದ ಸಂಭ್ರಮವನ್ನು ಕಸಿದುಕೊಂಡಿದೆ.

ಹೊಸವರ್ಷದಸಂಭ್ರಮದಲ್ಲಿಜನರು ಹೆಚ್ಚು ಹೆಚ್ಚಾಗಿ ಸೇರುವುದರಿಂದ ಕೊರೊನಾ ರೂಪಾಂತರಿ ವೈರಸ್ ವ್ಯಾಪಕವಾಗಿ ಹರಡುವುದರಿಂದ ರಾಜ್ಯ ಸರ್ಕಾರ ಹಲವು ರೀತಿಯ ಕಟ್ಟೆಚ್ಚರ ವಹಿಸಿರುವ ಹಿನ್ನೆಲೆಯಲ್ಲಿ ಹೊಸವರ್ಷಾಚರಣೆ ಮೋಜುಮಸ್ತಿಗೆ ತಣ್ಣೀರು ಎರಚಿದೆ.ಬೆಂಗಳೂರಿನಲ್ಲಿ ಇಂದು ಮಧ್ಯಾಹ್ನದಿಂದ ಸೆಕ್ಷನ್ 144ರ ಅನ್ವಯ ನಿಷೇಧಾಜ್ಞೆ ಜಾ–ರಿಯಾದರೆ ಇದೇ ರೀತಿಯಲ್ಲಿ ಮೈಸೂರು, ಮಂಗಳೂರು, ಹುಬ್ಬಳ್ಳಿ ಧಾರವಾಡ,ಗುಲ್ಬರ್ಗ ಇನ್ನಿತರಪ್ರಮುಖ ನಗರಗಳಲ್ಲಿಕಟ್ಟೆಚ್ಚರ ವಹಿಸಲಾಗಿದೆ. ಇದಲ್ಲದೇ ರಾಜ್ಯದ ಪ್ರಮುಖ ಪ್ರವಾಸಿ ತಾಣಗಳು, ಗಿರಿಧಾಮಗಳು, ದೇವಾಲಯಗಳುಸೇರಿದಂತೆ ಹೊಸ ವರ್ಷದ ಸಂಭ್ರಮಕ್ಕೆ ಪ್ರತಿವರ್ಷ ಸಾವಿರಾರು ಸಂಖ್ಯೆಯಲ್ಲಿ ಜನರು ಸೇರುತ್ತಿದ್ದ ಸ್ಥಳಗಳನ್ನು ಇಂದು ಸಂಜೆಯಿಂದಲೇಬಂದ್ ಮಾಡಲಾಗುತ್ತದೆ.

ಮೈಸೂರು, ಮಂಗಳೂರು, ಹುಬ್ಬಳ್ಳಿ ಧಾರವಾಡ,ಗುಲ್ಬರ್ಗಗಳಲ್ಲಿ ಪೊಲೀಸ್ ಕಮೀಷನರ್ ಗಳು ಜಿಲ್ಲೆಗಳಲ್ಲಿ ಎಸ್ ಪಿಗಳು ಜನ ಸಂದಣಿ ಸೇರುವ ಸ್ಥಳಗಳಲ್ಲಿ ಭದ್ರತೆಯನ್ನು

(ಎರಡನೇ ಪುಟ ನೋಡಿ)

## ನಿಷೇಧಿತ ಪ್ರದೇಶ

ಎಂಜಿರೋಡ್, ಬ್ರಿಗೇಡ್ ರೋಡ್, ಚರ್ಚ್ ಸ್ಟ್ರೀಟ್, ಕೋರಮಂಗಲ, ಇಂದಿರಾನಗರದಲ್ಲಿ ಕಠಿಣ ನಿಯಮ ಜಾರಿಯಲ್ಲಿರಲಿದೆ. ಈ ಐದು ಸ್ಥಳಗಳು ಅಂದು 'ನೋ ಮ್ಯಾನ್' ಝೋನ್ ಆಗಿರಲಿವೆ. ಬುಕ್ಕಿಂಗ್ ಕೂಪನ್ ಇದ್ದರೆ ಮಾತ್ರ ಈ ಸ್ಥಳಗಳಲ್ಲಿರುವ ಪಬ್, ಬಾರ್, ರೆಸ್ಟೋರೆಂಟ್ ಪ್ರವೇಶಕ್ಕೆ ಅನುಮತಿ ದೊರೆಯಲಿದ್ದು ಅಲ್ಲಿಯೂ ನಿಯಮಗಳು ಕಡ್ಡಾಯವಾಗಿದೆ.

ಸಂಜೆವಾಣಿ
1982

# ಮೋಜು ಮಸ್ತಿಗೆ ಬ್ರೇಕ್ ಎಲ್ಲೆಡೆ ಕಟ್ಟೆಚ್ಚರ

ಜನಗುಂಪು ಸೇರಿದಂತೆ ನೋಡಿಕೊಳ್ಳಲು ಹೆಚ್ಚಿನ ಪೊಲೀಸರನ್ನು ನಿಯೋಜಿಸಿ ವಾಹನ ತಪಾಸಣೆಯನ್ನು ರಾಜ್ಯದೆಲ್ಲೆಡೆ ಪೊಲೀಸರು ಕಟ್ಟು ನಿಟ್ಟಾಗಿ ನಡೆಸುತ್ತಿರುವುದರಿಅಮದ ನಗರ ಬಿಟ್ಟು ಬೇರೆಡೆ ಹೊಸ ವರ್ಷದ ಮೋಜು ಮಸ್ತಿಗೆ ತೆರಳುವವರ ಆಸೆ ಕೂಡ ಕಮರಿ ಹೋಗಿದೆ.

ಮಧ್ಯಾಹ್ನದಿಂದ ನಿಷೇಧಾಜ್ಞೆ:

ಕೊರೊನಾ ಹಿನ್ನೆಲೆ ಸುರಕ್ಷತೆ-ಯ ಹಿನ್ನೆಲೆಯಲ್ಲಿ ಎಚ್ಚರಿಕೆಯಿಂದ ನೂತನ ವರ್ಷವನ್ನು ಬರಮಾಡಿಕೊಳ್ಳಿ, ಅನಾವಶ್ಯಕವಾಗಿ ಓಡಾಡುವುದನ್ನು ನಿಲ್ಲಿಸಿ ಎಂದು ನಗರ ಪೊಲೀಸರು ಬೆಳಿಗ್ಗೆಯಿಂದಲೇ ಪೊಲೀಸರು ರಸ್ತೆಗಿಳಿದು ಎಚ್ಚರಿಕೆ ನೀಡತೊಡಗಿದ್ದಾರೆ. ನಗರದೆಲ್ಲೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಬಾರ್, ಪಬ್,



ಸಂಭ್ರಮ ಮಾಯೇ.... ಬ್ರಿಗೇಡ್ ರಸ್ತೆ ಬೀಕೋ ಎನ್ನುವಂತಿದೆ.

ರೆಸ್ಟೋರೆಂಟ್‌ಗಳಲ್ಲಿ ಕೋವಿಡ್ ನಿಯಮ ಉಲ್ಲಂಘನೆ ಮಾಡುವುದರ ಹದ್ದಿನ ಕಣ್ಣಿಟ್ಟಿದ್ದಾರೆ.

ಮಧ್ಯಾಹ್ನ 12 ಗಂಟೆಯಿಂದಲೇ 144 ಸೆಕ್ಷನ್ ಜಾರಿಗೆ ಮಾಡಿದ್ದು, ನಾಳೆ ಬೆಳಗ್ಗೆ 6 ರ ವರೆಗೂ ನಿಷೇಧಾಜ್ಞೆ ಮುಂದುವರೆಯಲಿದ್ದು ನಗರದ ಆಯಾಕಟ್ಟಿನ ಸ್ಥಳಗಳಲ್ಲಿ ಬ್ಯಾರಿಕೇಡ್ ಹಾಕಿ ಪೊಲೀಸರು ವಾಹನಗಳ ತಪಾಸಣೆ ನಡೆಸಿದ್ದಾರೆ.

ನಗರದ ಹಲವೆಡೆ ಅನುಮಾನಾಸ್ಪದವಾಗಿ ಸಂಚರಿಸುವ ವಾಹನಗಳನ್ನು ತಡೆದು ಮಾಹಿತಿ ಕಲೆ ಹಾಕಿದರು. ಜೊತೆಗೆ ಅನಗತ್ಯವಾಗಿ ಸುತ್ತಾಡುವವರಿಗೆ ದಂಡ ಹಾಕಿ, ಬಿಸಿ ಮುಟ್ಟಿಸಿದ್ದಾರೆ.

ಕಠಿಣ ಮಾರ್ಗ ಸೂಚಿ: ಐದು ಅಥವಾ ಅದಕ್ಕಿಂತ ಹೆಚ್ಚು ಜನ ಒಂದೆಡೆ ಒಟ್ಟಾಗಿ ಸೇರುವಂತಿಲ್ಲ, ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷದ ಅದ್ದೂರಿ ಆಚರಣೆಗೆ ಅವಕಾಶವಿಲ್ಲ. ಈ ನಿಯಮಗಳನ್ನು ಪಾಲಿಸದಿದ್ದರೆ ಪ್ರತ್ಯೇಕ ದಂಡ ವಿಧಿಸಲಾಗುವುದು. ಅಪಾರ್ಟ್‌ಮೆಂಟ್‌ಗಳು, ಕ್ಲಬ್ ಹೌಸ್‌ನಲ್ಲಿ ಆಚರಣೆ ಮಾಡಬಹುದು. ಆದರೆ ಪಬ್, ರೆಸ್ಟೋರೆಂಟ್‌ಗಳಲ್ಲಿ ಕೋವಿಡ್ ನಿಯಮಾವಳಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಪಬ್, ಬಾರ್, ರೆಸ್ಟೋರೆಂಟ್‌ಗಳು ಎಂದಿನಂತೆ ಕಾರ್ಯನಿರ್ವಹಿಸಬಹುದು. ಪಬ್, ಕ್ಲಬ್ ಹೌಸ್‌ಗಳಲ್ಲಿ ಈವೆಂಟ್ ಶೋ, ಸಂಗೀತ ಬ್ಯಾಂಡ್, ಮ್ಯೂಸಿಕ್ ಡ್ಯಾನ್ಸ್ ಮಾಡುವ ಹಾಗಿಲ್ಲ ಎಂದು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಎಚ್ಚರಿಕೆ ನೀಡಿದ್ದಾರೆ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

## • ಹೊಸ ವರ್ಷಾಚರಣೆ ಸಂಭ್ರಮದಲ್ಲಿ

# ಮಿತಿಮೀರಿದರೆ ಜೋಕೆ

## ನಾಳೆ ಬೆಳಗ್ಗೆ ವರೆಗೂ ನಿರ್ಬಂಧ.. ಇರಲಿ ಎಚ್ಚರ..

ಬೆಂಗಳೂರು, ಡಿ.31- ರಾಜ್ಯದಲ್ಲಿ ಬ್ರಿಟನ್‌ನ ರೂಪಾಂತರಗೊಂಡ ವೈರಸ್ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಹೊಸ ವರ್ಷಾಚರಣೆಗೆ ನಗರದಾದ್ಯಂತ ಹಿಂದೆಂದೂ ಕಾಣದಷ್ಟು ಬಿಗಿಭದ್ರತೆ ಕೈಗೊಳ್ಳಲಾಗಿದ್ದು, ಅಕ್ಷರಶಃ ಲಾಕ್‌ಡೌನ್ ಪರಿಸ್ಥಿತಿ ನಿರ್ಮಾಣವಾಗಿದೆ.

ಇಂದು ಮಧ್ಯಾಹ್ನದಿಂದ ನಾಳೆ ಬೆಳಗ್ಗೆ 6 ಗಂಟೆವರೆಗೆ ನಗರದಾದ್ಯಂತ 144 ಸೆಕ್ಷನ್ ಜಾರಿಗೊಳಿಸಲಾಗಿದ್ದು, ಜನ ಗುಂಪುಗೂಡಿ ಸಂಭ್ರಮಿಸದಂತೆ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಖುದ್ದು ಸಿಎಂ ಯಡಿಯೂರಪ್ಪ ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಸೇರಿದಂತೆ ಹಲವು ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ಕಾನೂನು ಸುವ್ಯವಸ್ಥೆ ವಿಭಾಗದ ...ಪುಟ 2

# ಮಿತಿಮೀರಿದರೆ ಜೋಕೆ

ಮುಖ್ಯಸ್ಥರುಗಳಿಗೆ ಸೂಚನೆ ನೀಡಿ ಹೊಸ ವರ್ಷಾಚರಣೆಗೆ ನಿರ್ಬಂಧ ಹಾಕಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ನಿರ್ಬಂಧದ ಸಂದರ್ಭದಲ್ಲಿ ಯಾರಾದರೂ ನಿಯಮಗಳನ್ನು ಗಾಳಿಗೆ ತೂರಿ ಹದ್ದುಮೀರಿ ವರ್ತಿಸುವುದು ಕಂಡುಬಂದರೆ ಅಂತಹವರ ವಿರುದ್ಧ ಐಪಿಸಿ ಸೆಕ್ಷನ್ 188 ಹಾಗೂ ಎನ್‌ಡಿಎಂಎ ಕಾಯ್ದೆಯಡಿ ದೂರು ದಾಖಲಿಸಬೇಕೆಂದು ನಿರ್ದೇಶನ ನೀಡಲಾಗಿದೆ.

ಹೊಸ ವರ್ಷದ ಆಚರಣೆ ಸಂದರ್ಭದಲ್ಲಿ ಕುಡಿದು ವಾಹನ ಚಲಾಯಿಸಿ ಸಂಚಾರಿ ಪೊಲೀಸರಿಗೆ ಸಿಕ್ಕಿಬಿದ್ದರೆ ಭಾರೀ ಪ್ರಮಾಣದ ದಂಡ ಪಾವತಿಸುವುದರ ಜತೆಗೆ ಕಠಿಣ ಕಾನೂನು ಕ್ರಮಕ್ಕೂ ಒಳಗಾಗಬೇಕಾಗುತ್ತದೆ.

ನಗರಕ್ಕೆ ಸಂಪರ್ಕ ಕಲ್ಪಿಸುವ 44 ಫ್ಲೈ ಓವರ್‌ಗಳನ್ನು ರಾತ್ರಿಯಿಂದ ಬೆಳಗ್ಗೆ 6 ಗಂಟೆವರೆಗೆ ಸಂಪೂರ್ಣವಾಗಿ ಬಂದ್ ಮಾಡುವಂತೆ ನಗರ ಪೊಲೀಸ್ ಆಯುಕ್ತರು ಸೂಚನೆ ಕೊಟ್ಟಿದ್ದಾರೆ. ಆಯ್ದ ಪ್ರದೇಶಗಳಲ್ಲಿ ಪೊಲೀಸರು ನಾಕಾಬಂದಿ ಹಾಕಿ ಎಲ್ಲ ವಾಹನಗಳನ್ನೂ ಪರಿಶೀಲನೆ ನಡೆಸಲಿದ್ದಾರೆ.

ಮದ್ಯದಂಗಡಿಗಳನ್ನು 11 ಗಂಟೆಗೆ ಕಡ್ಡಾಯವಾಗಿ ಮುಚ್ಚಲೇಬೇಕು ಹಾಗೂ ಎಂಆರ್‌ಪಿ ಔಟ್‌ಲೆಟ್‌ಗಳಲ್ಲಿ 10.30ರ ನಂತರ ಯಾವುದೇ ರೀತಿಯ ಮದ್ಯ ಮಾರಾಟ ಮಾಡಬಾರದು ಎಂದು ಅಬಕಾರಿ ಇಲಾಖೆ ಆದೇಶ ಹೊರಡಿಸಿದೆ.

11 ಗಂಟೆ ನಂತರ ಬಾರ್ ಇಲ್ಲವೆ 10.30ರ ನಂತರ ಎಂಆರ್‌ಪಿ ಔಟ್‌ಲೆಟ್‌ನಲ್ಲಿ ಮದ್ಯ ಮಾರಾಟ ಮಾಡಿದರೆ ಲೈಸೆನ್ಸ್ ರದ್ದುಪಡಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಇನ್ನು ತಮ್ಮ ತಮ್ಮ ವ್ಯಾಪ್ತಿಗಳಲ್ಲಿ ಬರುವ ಬಾರ್, ರೆಸ್ಟೋರೆಂಟ್, ಪಬ್, ಡಿಸ್ಕೋಥೆಕ್, ಲೈವ್‌ಬ್ಯಾಂಡ್ ಕ್ಲಬ್‌ಗಳ ಮೇಲೆ ಹದ್ದಿನ ಕಣ್ಣಿಡುವಂತೆ ಗೃಹ ಸಚಿವರು ಆಯಾ ಡಿಸಿಪಿಗಳಿಗೆ ಹೊಣೆಗಾರಿಕೆ ನೀಡಿದ್ದಾರೆ. ರಾಜ್ಯಾದ್ಯಂತ ಬಿಗಿ ಕ್ರಮ: ಬೆಂಗಳೂರು ಮಾತ್ರವಲ್ಲದೆ ರಾಜ್ಯದ ಬಹುತೇಕ ಕಡೆ ಸರ್ಕಾರ ಹೊಸ ವರ್ಷಾಚರಣೆಗೆ ನಿರ್ಬಂಧ ಹಾಕಲು ಈಗಾಗಲೇ ಸೂಚನೆ ಕೊಟ್ಟಿದೆ.

ಮೈಸೂರು, ಚಿಕ್ಕಬಳ್ಳಾಪುರ, ಕರಾವಳಿ ತೀರ ಪ್ರದೇಶಗಳಾದ ಮಂಗಳೂರು, ಉಡುಪಿ, ಕಾರವಾರ, ಚಾಮರಾಜನಗರ, ತುಮಕೂರು, ದಾವಣಗೆರೆ, ಶಿವಮೊಗ್ಗ ಸೇರಿದಂತೆ ಬಹುತೇಕ ರಾಜ್ಯದ ಎಲ್ಲ ಪ್ರವಾಸಿ ತಾಣಗಳಲ್ಲಿ ಇಂದಿನಿಂದಲೇ ಜಾರಿಯಾಗುವಂತೆ ಬಿಗಿ ಭದ್ರತೆ ಕೈಗೊಳ್ಳಲಾಗಿದೆ.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಪ್ರವಾಸಿ ತಾಣಗಳಿಗೆ ಇಂದು ಬೆಳಗಿನಿಂದ ನಾಳೆ ಸಂಜೆವರೆಗೂ ಸಂಪೂರ್ಣವಾಗಿ ನಿಷೇಧ ಹೇರಲಾಗಿದೆ. ಹೊರಭಾಗಗಳಿಂದ ಬರುವವರ ಮೇಲೆ ಜಿಲ್ಲಾಡಳಿತ ಹದ್ದಿನ ಕಣ್ಣಿಟ್ಟಿದ್ದು, ನಗರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ.

ಚಾಮರಾಜನಗರದಲ್ಲೂ ಇದೇ ಪರಿಸ್ಥಿತಿ ಇದ್ದು, ಹೊಸ ವರ್ಷಾಚರಣೆ ಮಾಡದಂತೆ ಜಿಲ್ಲಾಡಳಿತ ನಿನ್ನೆಯೇ ಆದೇಶ ಹೊರಡಿಸಿದೆ. ಕರಾವಳಿ ಜಿಲ್ಲೆಗಳಾದ ಮಂಗಳೂರು, ಕಾರವಾರ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಪ್ರವಾಸಿಗರು ಬಾರದಂತೆ ನಿರ್ಬಂಧ ವಿಧಿಸಲಾಗಿದೆ. ಇಂದು ಬೆಳಗ್ಗೆ 6 ಗಂಟೆಯಿಂದಲೇ ಮೂರೂ ಜಿಲ್ಲೆಗಳಲ್ಲಿರುವ ಸಮುದ್ರ ತೀರಗಳಿಗೆ ಬಾರದಂತೆ ಕಟ್ಟಪ್ಪಣೆ ವಿಧಿಸಲಾಗಿದೆ.

ಕೋವಿಡ್ ಹಿನ್ನೆಲೆಯಲ್ಲಿ ಪ್ರವಾಸಿಗರು ಬಾರದಂತೆ ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ. ಒಂದು ವೇಳೆ ನಿಯಮ ಉಲ್ಲಂಘಿಸಿದರೆ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ಕೊಡಲಾಗಿದೆ.

ಇದೇ ರೀತಿ ಚಿತ್ರದುರ್ಗ, ರಾಮನಗರ, ಮಂಡ್ಯ, ಹಾಸನ, ಬಳ್ಳಾರಿ ಸೇರಿದಂತೆ ಬಹುತೇಕ ಎಲ್ಲ ಜಿಲ್ಲೆಗಳಲ್ಲೂ ಹೊಸ ವರ್ಷಾಚರಣೆಗೆ ಜಿಲ್ಲಾಡಳಿತ ನಿರ್ಬಂಧ ವಿಧಿಸಿದೆ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಬಾರ್, ರೆಸಾರ್ಟ್‌ಗಳಿಗೆ ಮಾರ್ಗ ಸೂಚಿ

**ಬೆಂಗಳೂರು, ಡಿ.31 -** ಕೋವಿಡ್-19ರ ಸೋಂಕು ಹರಡುವಿಕೆ ತಡೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಸೇರಿದಂತೆ ಹಲವು ಮಾರ್ಗಸೂಚಿಗಳನ್ನು ಪ್ರವಾಸೋದ್ಯಮ ಇಲಾಖೆ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಅನುಮೋದಿತ ಹೋಟೇಲ್ ಮತ್ತು ರೆಸಾರ್ಟ್‌ಗಳಿಗೆ ನೀಡಿದೆ.

ಪ್ರವಾಸೋದ್ಯಮ ಇಲಾಖೆ ನಿಗದಿಪಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸಿರುವ ಬಗ್ಗೆ ಸೂಕ್ತ ದಾಖಲೆಗಳನ್ನು ಬೆಂಗಳೂರು ವಿಭಾಗದ ಉಪ ನಿರ್ದೇಶಕರ ಕಚೇರಿಗೆ ತಲುಪಿಸಬೇಕು. ಒಂದು ವೇಳೆ ಮಾರ್ಗಸೂಚಿ ಪಾಲನೆ ಬಗ್ಗೆ ಅನುಮತಿ ಪಡೆಯದಿದ್ದರೆ ತಮ್ಮ ವ್ಯವಹಾರ ಸ್ಥಗಿತಗೊಳಿಸಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಿದೆ.

ಅನುಮತಿ ಪಡೆಯದೆ ಹೋಟೇಲ್ ಅಥವಾ ರೆಸಾರ್ಟ್ ವ್ಯವಹಾರ ಮುಂದುವರಿಸಿದರೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ಸುತ್ತೋಲೆಯಲ್ಲಿ ಸೂಚಿಸಿದ್ದಾರೆ. ಹೋಟೇಲ್, ರೆಸಾರ್ಟ್ ಒಳಭಾಗದಲ್ಲಿ ಹಾಗೂ ಮುಂಭಾಗದಲ್ಲಿ ಕೋವಿಡ್ ಜಾಗೃತಿ ಮೂಡಿಸುವ ಪೋಸ್ಟರ್ ಮತ್ತು ಸ್ಟ್ಯಾಂಡ್‌ಗಳನ್ನು ಅಳವಡಿಸಬೇಕು.

ಬಿಬಿಎಂಪಿ ಪ್ರಾಧಿಕಾರದಿಂದ ಹಾಗೂ ಸ್ಥಳೀಯ ಪೊಲೀಸ್ ಠಾಣೆಯಿಂದ ನಿರಾಕ್ಷೇಪಣಾ ಪತ್ರ ಕಡ್ಡಾಯವಾಗಿ ಪಡೆದಿರಬೇಕು. ರಾಜ್ಯ ವಾಯುಮಾಲಿನ್ಯ ನಿಯಂತ್ರಣ ಮಂಡಳಿಯಿಂದ, ಆಹಾರ ಸುರಕ್ಷತಾ ಗುಣಮಟ್ಟ ಪ್ರಾಧಿಕಾರದಿಂದ ಅನುಮತಿ ಪತ್ರ ಪಡೆದಿರಬೇಕು. ಅಗ್ನಿ ಅನಾಹುತಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಮುಂಜಾಗ್ರತಾ ಕ್ರಮಗಳ ಬಗ್ಗೆ ಅಬಕಾರಿ ಇಲಾಖೆಯಿಂದ ಪಡೆದಿರುವ ಲೈಸೆನ್ಸ್ ಪ್ರತಿ ಹಾಗೂ ಎಕೋ ಸೆನ್ಸಿಟಿವ್ ಜೋನ್ ವ್ಯಾಪ್ತಿಗೆ ಒಳಪಟ್ಟಿರುವ ಅಥವಾ ಒಳಪಡದಿರುವ ಬಗ್ಗೆ ಅನುಮತಿ ಪತ್ರ ಪಡೆದಿರಬೇಕು.

ಪ್ರವಾಸಿಗರ ಸುರಕ್ಷತೆಗೆ ಸಂಬಂಧಿಸಿದಂತೆ ಸಿಸಿಟಿವಿ ಕ್ಯಾಮೆರಾ, ಭದ್ರತಾ ವ್ಯವಸ್ಥೆ, ವೈದ್ಯಕೀಯ ಸೌಲಭ್ಯಗಳು ಹಾಗೂ ವಾಸ್ತವ್ಯಕ್ಕೆ ಸಂಬಂಧಿಸಿದಂತೆ ದರ ಪಟ್ಟಿಯನ್ನು ಪ್ರದರ್ಶಿಸಿರಬೇಕು ಎಂಬುದು ಸೇರಿದಂತೆ ಹಲವು ಮಾರ್ಗಸೂಚಿಗಳನ್ನು ನೀಡಲಾಗಿದೆ.

ಅನಧಿಕೃತವಾಗಿ ನಡೆಯುತ್ತಿರುವ ಕೆಲವು ಹೋಟೇಲ್ ಮತ್ತು ರೆಸಾರ್ಟ್‌ಗಳಲ್ಲಿ ಮಾದಕ ವಸ್ತುಗಳ ಬಳಕೆ, ಸೇವನೆಗೆ ಉತ್ತೇಜಿಸುವಂತಹ ಕಾರ್ಯಗಳು ನಡೆಯುತ್ತಿರುವ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಪ್ರವಾಸಿಗರ ಸುರಕ್ಷತೆ ಹಾಗೂ ಭದ್ರತೆಗೆ ಧಕ್ಕೆಯಾಗದಂತೆ ಪ್ರವಾಸೋದ್ಯಮ ಇಲಾಖೆ ಮಾರ್ಗಸೂಚಿ ಹೊರಡಿಸಿರುವುದಾಗಿ ತಿಳಿಸಲಾಗಿದೆ.